

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 42 ಅಕ್ಟೋಬರ್ 13-19, 1997 ಬೆಲೆ ರೂ. 2.00

ಬಂಗಾರಪ್ಪನವರು ಕಾಂಗ್ರೆಸ್ಸಿನಲ್ಲಿರಲಿ, ಬೇರೆ ಪಕ್ಷದಲ್ಲಿರಲಿ ಕರ್ನಾಟಕದ ಜನತೆಗೇನು?

ಎನ್.ಕೆ.ಉಪಾಧ್ಯಾಯ

ನರಸಿಂಹರಾವ್ ಅವರು ಅಧ್ಯಕ್ಷ ಸ್ಥಾನ ಕಳೆದುಕೊಂಡು ಸೀತಾರಾಮ್ ಕೇಸರಿಯವರು ಕಾಂಗ್ರೆ ಅಧ್ಯಕ್ಷರಾದ ನಂತರ ಕರ್ನಾಟಕದಲ್ಲಿ ಕೆ.ಪಿ.ಸಿ.ಸಿ.ಯಲ್ಲಿ ಧರ್ಮಸಿಂಗ್ ಅವರು ಅಧ್ಯಕ್ಷರಾದ ನಂತರ ಸ್ವಲ್ಪ ಚುರುಕುತನ ಆ ಪಕ್ಷದಲ್ಲಿ ಕಂಡು ಬರುತ್ತಿದೆ. ಎ.ಪಿ.ಎಂ.ಸಿ. ಜಿಲ್ಲಾ ಪಂಚಾಯತ್ ಹಾಗೆಯೇ ಮಂಗಳೂರು, ಬೆಂಗಳೂರು ಕಾರ್ಪೋರೇಷನ್ ಚುನಾವಣೆಗಳಲ್ಲಿ ಸ್ವಲ್ಪ ಗೆಲುವು ಸಾಧಿಸಿದ್ದಾರೆ. ಅದರಂತೆಯೇ ವಿಧಾನ ಸಭೆಯ ಉಪಚುನಾವಣೆಯಲ್ಲಿ ಗೆಲುವು ತೋರಿಸಿದ್ದಾರೆ. ಸೀತಾರಾಮ್ ಕೇಸರಿಯವರು ಕಾಂಗ್ರೆ ಅಧ್ಯಕ್ಷರಾದ ನಂತರ ಕರ್ನಾಟಕ ಕಾಂಗ್ರೇಸ್ ಪಾರ್ಟಿಯ ಅಧ್ಯಕ್ಷರಾದ ಎಸ್. ಬಂಗಾರಪ್ಪನವರು ಮತ್ತೆ ಕಾಂಗ್ರೆ ಪಕ್ಷ ಸೇರಿದ್ದರು. ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ, ನರಸಿಂಹರಾವ್ ಕಾಂಗ್ರೆ ಅಧ್ಯಕ್ಷರಾಗಿದ್ದರು. ಕಂಪ್ಯೂಟರ್ ಹಗರಣದಲ್ಲಿ ಸಿಕ್ಕಿಕೊಂಡಿದ್ದ ಮುಖ್ಯಮಂತ್ರಿ ಬಂಗಾರಪ್ಪನವರನ್ನು ನರಸಿಂಹರಾವ್ ಅವರು ವಜಾ ಮಾಡಿ ವೀರಪ್ಪ ಮೊಯಿಲಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದರು. ತಮ್ಮ ಮುಖ್ಯಮಂತ್ರಿ ಸ್ಥಾನವನ್ನು ಉಳಿಸಿಕೊಳ್ಳುವುವರಲ್ಲಿ ವಿಫಲರಾದ ಎಸ್. ಬಂಗಾರಪ್ಪ ನವರು ಕಾಂಗ್ರೆ ಪಕ್ಷವನ್ನು ಬಿಟ್ಟು ತಮ್ಮದೇ ಆದ ಕರ್ನಾಟಕ ಕಾಂಗ್ರೇಸ್ ಪಾರ್ಟಿಯನ್ನು ಹುಟ್ಟುಹಾಕಿದರು. ಹೋದ ಅಸೆಂಬ್ಲಿ ಚುನಾವಣೆಯಲ್ಲಿ ಹತ್ತು ಸ್ಥಾನಗಳಲ್ಲಿ ವಿಜಯ ಸಾಧಿಸಿದರು. ಆದರೆ ತಮ್ಮ ಪಕ್ಷದಿಂದ ಆರಿಸಿ ಬಂದಿದ್ದ ಮಾಲಿಕಯ್ಯ ಗುತ್ತೇದಾರ (ಈಗ ಜನತಾದಳದಲ್ಲಿ ಮಂತ್ರಿ) ರನ್ನೊಳಗೊಂಡ ನಾಲ್ಕು ಜನ ಜನತಾ ಪಕ್ಷ ಸೇರಿ ಕೆ.ಸಿ.ಪಿ. ವಿಜಯಕ್ಕೆ ಮಸಿ ಬಳಿದರು.

ಬಂಗಾರಪ್ಪನವರು ಕಾಂಗ್ರೆ ಸೇರಿದಾಗ, ಹಲವಾರು ಕಾಂಗ್ರೆ ಮುಖಂಡರು ಅದನ್ನು ಸ್ವಾಗತಿಸಿದರು. ಹಾಗೆಯೇ ಅಷ್ಟೇ ಮುಖಂಡರು ಬಂಗಾರಪ್ಪನವರ ನಿಲುವನ್ನು ಸಂಶಯದಿಂದಲೇ ನೋಡಿ ತಮ್ಮ ಅಭಿಪ್ರಾಯಗಳನ್ನು ಬಹಿರಂಗಗೊಳಿಸಿದ್ದರು.

ಬಂಗಾರಪ್ಪನವರು ಮೂಲತಃ ಸೋಷಲಿಸ್ಟರು. ಗೋಪಾಲ ಗೌಡರ ನಿಧನದ ಜೊತೆಯಲ್ಲಿಯೇ ಸೋಷಲಿಸ್ಟ ಪಾರ್ಟಿಯೂ ಮೂರಾಪಾಲಾಗಿ ಮುಖಂಡರೆಲ್ಲ ಬೇರೆ ಬೇರೆ ಪಕ್ಷಗಳಲ್ಲಿ ಸೇರಿಕೊಂಡರು. ಯಾಕೆಂದರೆ ನಿರ್ದಿಷ್ಟ ನಿಲುಮೆ, ಧೋರಣೆಗಳಿಲ್ಲದ ಸೋಷಲಿಸ್ಟ್ ಪಕ್ಷ ಇತರ ಬಂಡವಾಳಶಾಹಿ ಪಕ್ಷಗಳ ಸಾಲಿಗೆ ಸೇರಿತ್ತು. ಅನಂತರ ಬಂಗಾರಪ್ಪ ನವರು ಕ್ರಾಂತಿರಂಗ ಸೇರಿದರು. 1983 ರ ವಿಧಾನ ಸಭೆ ಚುನಾವಣೆಯಲ್ಲಿ ಜನತಾ ಪಕ್ಷ ಎಡಪಕ್ಷಗಳ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದರು. ಆಗ ಕಾಂಗ್ರೆ ಸೋತು, ಜನತಾ ಪಕ್ಷ ರಾಜ್ಯದ ಆಡಳಿತೆಯ ಚುಕ್ಕಾಣಿ ಹಿಡಿಯುವ ಸಂದರ್ಭ ಬಂದಾಗ ತಾನು ಮುಖ್ಯಮಂತ್ರಿ ಆಗಬಹುದೆಂಬ ಆಸೆ ಇಟ್ಟುಕೊಂಡಿದ್ದರು. ಅದು ಸಾಧ್ಯವಿಲದಾದಾಗ ಸ್ವಲ್ಪ ಸಮಯದ ನಂತರ ಕಾಂಗ್ರೆ ಸೇರಿದರು. ಕರ್ನಾಟಕದ ಮುಖ್ಯಮಂತ್ರಿಯಾದರು. ಅದು ಹೋದ ನಂತರ ಕೆ.ಸಿ.ಪಿ. ಸ್ಥಾಪಿಸಿ ಮತ್ತೆ ಕಾಂಗ್ರೆ ಸೇರಿ ಈಗ "ಕರ್ನಾಟಕ ಕಾಂಗ್ರೆಸ್ ಪಕ್ಷವನ್ನು ಕಾಂಗ್ರೇಸ್ ಪಕ್ಷಕ್ಕೆ ವಿಲೀನ ಗೊಳಿಸುವಂತೆ ಎ.ಐ.ಸಿ.ಸಿ ಅಧ್ಯಕ್ಷ, ಸೀತಾರಾಂ ಕೇಸರಿ ಅವರು ಕೇಳಿಕೊಂಡಾಗ ನಾನು ಒಲ್ಲೆ ಎನ್ನಲು ಆಗಲಿಲ್ಲ. ಎಷ್ಟಾದರೂ ಹಿರಿಯ ರಾಜಕಾರಣಿ, ಮಾಗಿದ ವ್ಯಕ್ತಿ ಎಂದು ನಂಬಿಕೊಂಡು ಕೆ.ಸಿ.ಪಿ.ಯನ್ನು ಕಾಂಗ್ರೇಸ್‌ನಲ್ಲಿ ವಿಲೀನ ಗೊಳಿಸಿದ್ದಕ್ಕೆ ಈಗ ನನ್ನನ್ನು ನಿರ್ಲಕ್ಷಿಸಲಾಗುತ್ತಿದೆ. ಆದರೆ ಬಂಗಾರಪ್ಪ ಏನು ಮಾಡಬಲ್ಲ ಎಂಬುದು ಈಗಾಗಲೇ ಜಗಜ್ಜಾಹೀರಾಗಿರುವ ವಿಚಾರ. ಅಂತಹ ಪರಿಸ್ಥಿತಿಗೆ ನನ್ನನ್ನು ಕಾಂಗ್ರೇಸ್ ಪಕ್ಷ ದೂಡುವುದಿಲ್ಲ ಎಂದು ಕೊಂಡಿದ್ದೇನೆ. ಆದರೆ ಅನಿವಾರ್ಯವಾದರೆ ನಾನು ಹಿಂದೆ ಮುಂದೆ ನೋಡುವ ವ್ಯಕ್ತಿ ಅಲ್ಲ"ಎಂಬ ಮಾತುಗಳನ್ನಾಡುತ್ತಿದ್ದಾರೆ. ಕಾಂಗ್ರೆಸ್ಸಿಗೆ ಬೆದರಿಕೆ ಒಡ್ಡುತ್ತಿದ್ದಾರೆ.

ಬಂಗಾರಪ್ಪನವರು ಕಾಂಗ್ರೆಸ್ ತ್ಯಜಿಸಿ, ಹೊಸ ರಾಜಕೀಯ ಪಕ್ಷ ಕಟ್ಟಿದರೆ ಕಾಂಗ್ರೇಸ್ ಪಕ್ಷದ ಅಸ್ತಿತ್ವಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲವೆಂದು ಕೆ.ಪಿ.ಸಿ.ಸಿ ಅಧ್ಯಕ್ಷರಾದ ಧರ್ಮಸಿಂಗ್ ಅವರು ಪ್ರತಿಕ್ರಿಯಿಸಿದ್ದಾರೆ.

ಮೊದಲಿನಿಂದಲೂ ಕರ್ನಾಟಕದ ಕಾಂಗ್ರೇಸ್ ಐಕ್ಯತೆಯ ನೆಲೆಬೀಡಾಗಿರಲಿಲ್ಲ. ಜಾತಿ, ಮತಗಳ ಗುಂಪುಗಾರಿಕೆಯಿಂದಲೇ ಬೆಳೆದು ನಿಂತ ರಾಜಕೀಯ ಪಕ್ಷವಾಗಿತ್ತು. ಬಲಿಷ್ಠ ವಿರೋಧ ಪಕ್ಷ ಮೂಡಿಬಾರದಿದ್ದುರಿಂದಾಗಿ ತನ್ನ ಅಂತರಿಕ ಜಗಳದ ಮಧ್ಯೆ ಕೂಡ ಕಾಂಗ್ರೇಸ್ ಆಡಳಿತೆ ನಡೆಸುತ್ತಲೇ ಬಂದಿತ್ತು. 1983 ರಲ್ಲಿ ಅದಕ್ಕೆ ಅಡ್ಡಿ ತಂದಿತು. ಅನಂತರದಲ್ಲಿ ಕೇಂದ್ರ ಮುಖಂಡರ ಕೈವಾಡದಿಂದಾಗಿ, ರಾಜ್ಯದಲ್ಲಿ ಗುಂಪುಗಾರಿಕೆ ಮತ್ತು ಅಸಮರ್ಪಕ ಆಡಳಿತೆಯಿಂದಾಗಿ ಜನ ಬೆಂಬಲ ಇಳಿಮುಖವಾಗುತ್ತ ಬಂದು ಹೋದ ಚುನಾವಣೆಯಲ್ಲಿ ಮೂರನೆಯ ಸ್ಥಾನದಲ್ಲಿ ಸಂತೃಪ್ತಿ ಪಡೆಯುವಂತಾಯಿತು.

ಕಳೆದ ಎರಡು ವರ್ಷಗಳ ರಾಜಕೀಯ ಚಟುವಟಿಕೆಗಳನ್ನು ವೀಕ್ಷಿಸಿದರೆ ಕಾಂಗ್ರೆ ಸೇರಿದ ಬಂಗಾರಪ್ಪನವರ ಪ್ರಭಾವ ಕಾಂಗ್ರೆ ಪಕ್ಷದಲ್ಲಾಗಲೀ ರಾಜ್ಯದ ರಾಜಕೀಯದ ಮೇಲಾಗಲೀ ಕಂಡು ಬರುತ್ತಿಲ್ಲ. ಎರಡು ವರ್ಷಗಳಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆ ಗಳಿಸಿದ ಗೆಲುವಿನಲ್ಲಿಕೂಡ ಬಂಗಾರಪ್ಪ ನವರ ಪಾತ್ರ ಕಂಡು ಬರಲಿಲ್ಲ. ಕಾಂಗ್ರೆ ಗೆಲುವಿಗೆ ಮುಖ್ಯ ಕಾರಣವೇನೆಂದರೆ ಜನತಾದಳ ಸರಿಯಾದ ಅಭ್ಯರ್ಥಿಯನ್ನು ಆಯ್ಕೆ ಮಾಡುವುದರಲ್ಲಿ ವಿಫಲಗೊಂಡಿರುವುದು, ಜನವಿರೋಧಿ ಆಡಳಿತೆ ನಡೆಸುತ್ತಿರುವುದು, ಹಾಗೆಯೇ ಎಡಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದಾಗಿದೆ.

ಎಡ ಪಕ್ಷಗಳನ್ನು ಬಿಟ್ಟು ಇತರ ಎಲ್ಲ ಬಂಡವಾಳಶಾಹಿ ಪಕ್ಷಗಳು ವ್ಯಕ್ತಿಯ ಪ್ರಭಾವವನ್ನವಲಂಬಿಸುತ್ತಿವೆ. ಅವುಗಳಿಗೆ ಕಾರ್ಯಕ್ರಮವೆಂಬುದಿಲ್ಲ. ಚುನಾವಣೆ ನಡೆದಾಗ ಮತಗಳಿಕೆಯಲ್ಲಿ ಯಾವ ಜಾತಿ, ಉಪ ಜಾತಿ ಮುಖಂಡರು ಉಪಯೋಗವಾಗುತ್ತಾರೋ ಅಂಥವರಿಗೆ ಕಾಂಗ್ರೆಯಲ್ಲಿ ಯಾವಾಗಲೂ ಆಮಂತ್ರಣವಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ಗ್ರಹಣದ ಆತುರದಲ್ಲಿರುವ ಕಾಂಗ್ರೆ ಪಕ್ಷ ಹಿಂದುಳಿದ ಜಾತಿಯ ಮುಖಂಡರೆನಿಸಿಕೊಂಡ ಬಂಗಾರಪ್ಪನವರನ್ನು ಬಿಟ್ಟು ಕೊಡಲು ತಯಾರಿಲ್ಲ. ಆದರೆ ಕೆ.ಪಿ.ಸಿ.ಸಿ. ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಬಂಗಾರಪ್ಪನವರು ತನ್ನ ರಾಜಕೀಯ ಉಳಿವಿಗಾಗಿ ಎರಡನೇ ಸ್ಥಾನ ದಕ್ಕಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುವರೇ? ಆದರಿಂದಲೇ ಸಮಾಧಾನ ಗೊಳ್ಳುವರೇ? ಅಂತೂ ಬಂಗಾರಪ್ಪನವರು ಕೇಸರಿಯವರನ್ನು ಬೆದರಿಸುತ್ತಿದ್ದಾರೆ. ಮುಂದಿನ ವರ್ಷ ಲೋಕ ಸಭೆ ಚುನಾವಣೆಯ ನಿರೀಕ್ಷೆಯಲ್ಲಿರುವ ಮತ್ತು ಪ್ರಧಾನ ಮಂತ್ರಿಯಾಗುವ ಕನಸು ಸದ್ಯಕ್ಕೆ ನನಸಾಗದ ಅದಕ್ಕಾಗಿ ಇನ್ನೂ ಅಧಿಕಾರ ಗ್ರಹಣಕ್ಕಾಗಿ ಹಾತೊರೆಯುತ್ತಿರುವ ಸೀತಾರಾಂ ಕೇಸರಿಯವರಿಗೆ ಕರ್ನಾಟಕದ ಬೆಂಬಲ ಅವಶ್ಯ. ಈ ದೃಷ್ಟಿಯಲ್ಲಿ ಅವರು ಹೆಜ್ಜೆ ಇಡಬೇಕಾಗಿದೆ. ಬಂಗಾರಪ್ಪನವರ ಭವಿಷ್ಯ ಅದನ್ನವಲಂಬಿಸಿದೆ. ಬಂಗಾರಪ್ಪನವರ ಕುರಿತು ಕೇಸರಿಯವರ ನಿಲುಮೆ ಏನಿದ್ದರೂ ಕೂಡ, ಬಂಗಾರಪ್ಪನವರು ಕಾಂಗ್ರೆಯಲ್ಲ ಉಳಿಯಲಿ, ಬೇರೆ ಪಕ್ಷ ಕಟ್ಟಲಿ, ಕರ್ನಾಟಕದ ಜನತೆ ಕಾಂಗ್ರೆ ಪರ ಒಲವು ತೋರಿಸುವುದಿಲ್ಲ, ಸಂಯುಕ್ತರಂಗವನ್ನು ಭದ್ರಗೊಳಿಸುವತ್ತ ಗಮನ ಹರಿಸುತ್ತಾರೆಂದು ಹೇಳಿದರೆ ತಪ್ಪಾಗಲಾರದು.

ಹಣಕಾಸು ಮಂತ್ರಿಗಳ ಹೃದಯವೇ ಕಾಣೆಯಾಗಿದೆಯೇ?

ಕಳೆದ ಬಜೆಟ್ಟಿನಲ್ಲಿ ಆಹಾರಧಾನ್ಯಗಳು ಮತ್ತು ಸಕ್ಕರೆಗೆ 7500 ಕೋಟಿ ರೂಗಳ ಸಹಾಯ ಧನ ನೀಡಿರುವುದಾಗಿ ಹೇಳುತ್ತಾ ಹಣಕಾಸು ಮಂತ್ರಿಗಳು ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ವಿಶೇಷ ರೇಷನ್ ವ್ಯವಸ್ಥೆ (ಟಿ.ಪಿ.ಡಿ.ಎಸ್) ದೇಶಾದ್ಯಂತ ಜಾರಿಗೆ ತರುವಾಗ "ಹೆಚ್ಚು ಹಣ ಬೇಕಾದರೆ ನಾನು ಅದನ್ನು ಒದಗಿಸುತ್ತೇನೆ. ನಾನು ಹೃದಯವಂತಿಕೆಯ ಪ್ರದರ್ಶನ ಮಾಡದಿರಬಹುದು. ಆದರೆ ನನ್ನ ಹೃದಯ ಸರಿಯಾದ ಸ್ಥಾನದಲ್ಲೇ ಇದೆ" ಎಂದಿದ್ದರು.

ಜೂನ್ 1, 1997 ರಂದು ಈ ಟಿ.ಪಿ.ಡಿ.ಎಸ್ ಯೋಜನೆ ಜಾರಿಗೆ ಬಂತು. ಇತ್ತೀಚೆಗೆ ನಡೆದ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಈ ಹೊಸ ವ್ಯವಸ್ಥೆಯಲ್ಲಿನ ನ್ಯೂನ್ಯತೆಗಳನ್ನು, ಈ ವ್ಯವಸ್ಥೆಯ ಹೆಸರಿನಲ್ಲಿ ಒಂದೆಡೆ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಒದಗಿಸುತ್ತಿದ್ದ ಆಹಾರ ಧಾನ್ಯಗಳ ಪ್ರಮಾಣವನ್ನೇ ಕಡಿತ ಮಾಡಿದ್ದು, ಬೆಲೆಗಳನ್ನು ಹೆಚ್ಚಿಸಿದ್ದು ಹಾಗೂ ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ಅರ್ಧಬೆಲೆಯಲ್ಲಿ 20 ಕೆ.ಜಿ. ಆಹಾರಧಾನ್ಯಗಳ ಬದಲು 10 ಕೆ.ಜಿ. ಮಾತ್ರ ಕೊಡುತ್ತಿರುವುದು ಇತ್ಯಾದಿಗಳ ದುಷ್ಪರಿಣಾಮಗಳನ್ನು ಸಂಯುಕ್ತ ರಂಗ ಸರಕಾರದ ಗಮನಕ್ಕೆ ತರಲಾಯಿತು. ಆದರೆ ಸರಕಾರ, ಅದರಲ್ಲೂ ಮುಖ್ಯವಾಗಿ ಹಣಕಾಸು ಮಂತ್ರಿಗಳ ಕಿವಿಗೆ ಇವು ಬಿದ್ದಂತೆಯೇ ಇಲ್ಲ. ಅವರ ಹೃದಯ ಸರಿಯಾದ ಸ್ಥಾನದಲ್ಲಿ ಇಲ್ಲ ಮಾತ್ರವಲ್ಲ, ಅವರ ವಾದಗಳನ್ನು ಕೇಳಿದಾಗ ಅವರ ಹೃದಯವೇ ಕಾಣೆಯಾಗಿ ಬಿಟ್ಟಿದೆಯೇನೋ ಎಂಬ ಸಂಶಯ ಬರುತ್ತದೆ ಎಂದು ಸಿ.ಪಿ.ಐ(ಎಂ) ನ ಕೇಂದ್ರ ಸಮಿತಿಯ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಯ ಸಂಪಾದಕೀಯ ಮಾರ್ಮಿಕವಾಗಿ ಟಿಪ್ಪಣಿ ಮಾಡಿದೆ.

ಪಡಿತರ ವ್ಯವಸ್ಥೆಯನ್ನು ಪರಿಣಾಮಕಾರಿಗೊಳಿಸಲು 6000 ಕೋಟಿ ರೂ. ಗಳಿಗಿಂತ ಹೆಚ್ಚಿನ ಸಬ್ಸಿಡಿ ಕೊಡಲು ಸಾಧ್ಯವಿಲ್ಲ, ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ ಹೆಚ್ಚೆಂದರೆ 15 ಕೆ.ಜಿ. ಆಹಾರಧಾನ್ಯಗಳನ್ನು ಒದಗಿಸಬಹುದು, ಕರ್ನಾಟಕ, ಕೇರಳ, ಪಶ್ಚಿಮ ಬಂಗಾಳ ಮತ್ತಿತರ ರಾಜ್ಯಗಳಿಗೆ ಆಹಾರಧಾನ್ಯಗಳ ಪೂರೈಕೆಯಲ್ಲಿ ಮಾಡಿದ ಕಡಿತವನ್ನು ರದ್ದುಮಾಡಲು ಸಾಧ್ಯವಿಲ್ಲ, ಏಕೆಂದರೆ ಅಷ್ಟೊಂದು ಧಾನ್ಯಸಂಗ್ರಹಣೆ ದಸ್ತಾನುಗಳಲ್ಲಿ ಇಲ್ಲ ಎಂದು ಹಣಕಾಸು ಮಂತ್ರಿಗಳು ಈಗ ಅಸಹಾಯಕರಂತೆ ಹೇಳುತ್ತಿದ್ದಾರೆ. ಆದರೆ ಇವೆಲ್ಲಾ ಕೇವಲ ನೆಪಗಳು ಎಂಬುದು ತುಸು ಆಳವಾಗಿ ಪರಿಶೀಲಿಸಿದರೆ ಯಾರಾದರೂ ಸ್ಪಷ್ಟವಾಗಿ ಕಾಣಬಹುದು.

ಆಹಾರಧಾನ್ಯಗಳ ಸಂಗ್ರಹಣೆ ಈ ಬಾರಿ ಇಳಿಮುಖವಾಗಿಲ್ಲ. ಅಲ್ಲದೆ ಈ ಹೊಸ ಯೋಜನೆಯಿಂದ ವಿತರಿಸುವ ಆಹಾರಧಾನ್ಯಗಳ ಪ್ರಮಾಣ ಹೆಚ್ಚುವುದಿಲ್ಲ. ಅವನ್ನು ದಟ್ಟ ದರಿದ್ರ ಕುಟುಂಬಗಳಿಗೆ ಕಡಿಮೆ ಬೆಲೆಯಲ್ಲಿ ಕೊಡಲಾಗುತ್ತಿದೆಯಷ್ಟೆ.

ವಾಸ್ತವವಾಗಿ, ಹಣಕಾಸು ಮಂತ್ರಿಗಳು ಇತ್ತೀಚೆಗೆ ಜನಸಾಮಾನ್ಯರಿಗೆ ಕೊಡಬೇಕಾದ ಸಬ್ಸಿಡಿಗಳ ವಿರುದ್ಧ ಎಗರಾಡುತ್ತಿರುವುದನ್ನು ನೋಡಿದರೆ ನಿಜವಾಗಿಯೂ ಅವರು ಹೃದಯಹೀನರಲ್ಲವೇ ಎಂಬ ಸಂದೇಹ ಬಾರದೇ ಇರದು.

ಜನಸಾಮಾನ್ಯರ ಬದುಕು ಮತ್ತಷ್ಟು ಹದಗೆಡದಂತೆ ತಡೆಯಲು ಸಬ್ಸಿಡಿಗಳನ್ನು ನೀಡಬೇಕಾದ್ದು ಸರಕಾರದ ಜವಾಬ್ದಾರಿ. ಆ ಜವಾಬ್ದಾರಿಯಿಂದ ನುಣುಚಿಕೊಳ್ಳುವುದು ಮಾತ್ರವಲ್ಲ, ಅದೇ ಸರಕಾರ ಸಾವಿರಾರು ಕೋಟಿ ರೂಪಾಯಿಗಳ ರಿಯಾಯ್ತಿಗಳ ಮೂಲಕ ಪರೋಕ್ಷ ಸಬ್ಸಿಡಿ ನೀಡುತ್ತಿರುವುದು ಹೃದಯವಂತಿಕೆಯ ಕೆಲಸ ಖಂಡಿತಾ ಅಲ್ಲ, ಮಾನ್ಯ ಹಣಕಾಸು ಮಂತ್ರಿಗಳೇ! ಅದು ಐ.ಎಂ.ಎಫ್-ವಿಶ್ವಬ್ಯಾಂಕಿನ ಧಣಿಗಳ ಶರತ್ತುಗಳನ್ನು ಪೂರೈಸುವ ಬುದ್ಧಿವಂತಿಕೆಯಾಗಿರಬಹುದಷ್ಟೆ.

ಇಷ್ಟೇ ಅಲ್ಲ, ಲಕಡ್‌ವಾಲಾ ಸಮಿತಿಯ ಲೆಕ್ಕಾಚಾರ ಪ್ರಕಾರ ನಗರಗಳಲ್ಲಿ 2000 ರೂ. ಮಾಸಿಕ ಆದಾಯಕ್ಕಿಂತ ಕಮ್ಮಿ ಇರುವ ಕುಟುಂಬಗಳಿಗಿಂತ ತುಸು ಹೆಚ್ಚು ಆದಾಯವಿರುವ ಕುಟುಂಬಗಳು ಸಂಪನ್ನ ಕುಟುಂಬಗಳು ಎಂದು ಸಂಯುಕ್ತ ರಂಗ ಸರಕಾರ ತಿಳಿದಂತಿದೆ. ಇಂತಹ ತಪ್ಪು ನಿಲುವುಗಳನ್ನು ಬಿಟ್ಟು ಸರಕಾರ ಪಡಿತರ ವ್ಯವಸ್ಥೆಯಲ್ಲಿರುವ ಕುಂದುಕೊರತೆಗಳನ್ನು ನಿವಾರಿಸಲು ಮುಂದಾಗಬೇಕು. ಬಡವರಿಗೆ ಅಗ್ಗದ ಆಹಾರಧಾನ್ಯಗಳನ್ನು ಒದಗಿಸುವ ಭರವಸೆ ನೀಡಿರುವ ಸರಕಾರ ವಚನ ಭ್ರಷ್ಟವಾಗುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಮತ್ತೊಮ್ಮೆ ಎಚ್ಚರಿಸಿದೆ.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಗೆ ವಿದ್ಯಾರ್ಥಿಗಳ ಮುತ್ತಿಗೆ

ಹಲವಾರು ಸರಕಾರಿ ಕಾಲೇಜುಗಳಿಗೆ ಉಪನ್ಯಾಸಕರ ಹುದ್ದೆಗಳು ಭರ್ತಿಯಾಗದೇ ಉಳಿದಿವೆ. ಕೆಲವು ಕಾಲೇಜುಗಳಲ್ಲಂತೂ ೪೦ ರಿಂದ ೬೦ ಶೇ. ಹುದ್ದೆಗಳು ಖಾಲಿಯಾಗಿವೆ. ಹೀಗಿರುವಾಗ ವಿದ್ಯಾರ್ಥಿಗಳ ಶಿಕ್ಷಣದ ಗತಿ ಏನು? ಈ ಬಗ್ಗೆ ಹಲವಾರು ಬಾರಿ ಸಂಬಂಧಪಟ್ಟವರ ಗಮನಕ್ಕೆ ತಂದರೂ ಪ್ರಯೋಜನವಾಗದೇ ಇರುವುದರಿಂದ ವಿದ್ಯಾರ್ಥಿಗಳು ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ಎದುರು ಅಕ್ಟೋಬರ್ ೮ ರಂದು ಧರಣಿ ನಡೆಸಿದರು. ಆಯುಕ್ತರು ಮತ್ತೆ ಭರವಸೆಯನ್ನಷ್ಟೇ ಕೊಟ್ಟಾಗ ಅದರಿಂದ ತೃಪ್ತರಾಗದೆ ಕಛೇರಿ ಮುತ್ತಿಗೆ ಹಾಕಿದರು. ಪೋಲೀಸರು ತಮ್ಮ ಕೆಲವು ಸಹಪಾಠಿಗಳೊಡನೆ ದುರ್ವ್ಯವಹಾರ ನಡೆಸಿದಕ್ಕೆ ಕ್ಷಮೆಯನ್ನು ಆಗ್ರಹಿಸಿದರು. ಪೋಲೀಸರು ನೂರಾರು ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಬಂಧಿಸಿ ಒಂದು ದಿನ ಜೈಲಿನಲ್ಲಿ ಇಟ್ಟರು.

ಏಕೆ ಜನಸಾಮಾನ್ಯರ ಮಕ್ಕಳ ಶಿಕ್ಷಣದ ಬಗ್ಗೆ ಇಂತಹ ಉಪೇಕ್ಷೆ?



ಭಾರತದ ರಾಜಕಾರಣದಲ್ಲಿ ಪ್ರತಿಷ್ಠೆಯ ಸ್ಥಾನ ಪಡೆದಿರುವ ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನಕ್ಕೆ ಸಿದ್ಧತೆ ನಡೆಯುತ್ತಿರುವ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯರಾದ ವಿ.ರಾಮಚಂದ್ರರಾವ್‌ರು ಅದರ ಮಹತ್ವವನ್ನು ಇಲ್ಲಿ ವಿವರಿಸಿದ್ದಾರೆ.

ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ) ಪಕ್ಷದ 16ನೇ ಮಹಾಧಿವೇಶನದ ಮಹತ್ವ

ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ನಿಷ್ಠೆಯ ಪ್ರತೀಕ

ಭಾರತ ದೇಶದಲ್ಲಿ ಸೆಪ್ಟೆಂಬರ್ 1996 ರಿಂದ ಫೆಬ್ರವರಿ 1997 ವರೆಗೆ ಭಾರತ ಕಮ್ಯುನಿಸ್ಟ್(ಮಾರ್ಕ್ಸ್‌ವಾದಿ) ಪಕ್ಷದ 16ನೇ ಮಹಾಧಿವೇಶನಕ್ಕೆ ತೀವ್ರ ತಯಾರಿ ನಡೆಯುತ್ತಿದೆ. ಈ ಪ್ರಕ್ರಿಯೆಯು ಎರಡು ಪ್ರವಾಹಗಳಲ್ಲಿ ನಡೆಯುತ್ತಿದೆ. ಒಂದು, ಪಕ್ಷದ ಎಲ್ಲಾ ಘಟಕಗಳು - ಗ್ರಾಮ, ಗ್ರಾಮದಲ್ಲಿರುವ ವಾರ್ಡು, ವಾರ್ಡುಗಳಲ್ಲಿರುವ ಎಲ್ಲಾ ಸ್ಥಳೀಯ ಸಮಿತಿಗಳು, ತಾಲೂಕು ಸಮಿತಿಗಳು, ಜಿಲ್ಲಾ ಸಮಿತಿಗಳು ಹಾಗೂ ರಾಜ್ಯ ಸಮಿತಿಗಳು ಹಿಂದಿನ 15 ನೇ ಮಹಾಧಿವೇಶನದಲ್ಲಿ ನಿರ್ಧರಿಸಿದ ರಾಷ್ಟ್ರೀಯ-ಲೈನಿನ ಆಧಾರದಲ್ಲಿ ತಮ್ಮ ತಮ್ಮ ಪ್ರದೇಶಗಳ ಪಕ್ಷದ ರಾಜಕೀಯ- ಸಂಘಟನಾ ಸಮಿತಿಗಳು, ಸಾಮೂಹಿಕ ಸಂಘಟನೆಗಳ ಚಳುವಳಿಗಳು ನಡೆದು 15ನೇ ಮಹಾಧಿವೇಶನ ಹಾಕಿಕೊಟ್ಟ ಮಾರ್ಗದರ್ಶನ ಎಷ್ಟು ಸಮಂಜಸವಾಗಿತ್ತು ಎಂಬುದನ್ನು ತಮ್ಮ ಅನುಭವಗಳ ನೆರಳಿನಲ್ಲಿ ವಿಮರ್ಶಿಸುತ್ತವೆ. ಈ ಪರ-ವಿರೋಧ ಅನುಭವಗಳನ್ನು ಪರಿಗಣನೆಗೆ ತೆಗೆದುಕೊಂಡು ಪಕ್ಷದ ಕೇಂದ್ರ ಸಮಿತಿಯು ತನ್ನ ಅನುಭವಗಳನ್ನು ಒರೆಗಲ್ಲಿಗೆ ಹಚ್ಚಿ ಒಂದು ರಾಜಕೀಯ - ಸಂಘಟನಾ ವರದಿಯನ್ನು ಮಂಡಿಸಿ ಚರ್ಚಿಸಿ ಅಂಗೀಕರಿಸಲಿದೆ. **ಎರಡು**, ನವೆಂಬರ್ ನಲ್ಲಿ ಕೇಂದ್ರ ಸಮಿತಿಯು ಒಂದು ಕರಡು ರಾಜಕೀಯ ದಸ್ತಾವೇಜನ್ನು ಅಂಗೀಕರಿಸಿ - ಹಿಂದಿನ ಅನುಭವದ ಆಧಾರದಲ್ಲಿ ಮುಂದಿನ 3 ವರ್ಷಗಳ ಕಾಲದಲ್ಲಿ ನಮ್ಮ ರಾಜಕೀಯ ಮುನ್ನೋಟ ಹೇಗಿರಬೇಕೆಂಬುದರ ಕುರಿತು ನಿಲುವು - ಇಡೀ ಪಕ್ಷದೊಳಗೆ ಎಲ್ಲಾ ಘಟಕಗಳ ಅಭಿಪ್ರಾಯಗಳಿಗೆ ಹಾಗೂ ನಿರ್ದಿಷ್ಟ ತಿದ್ದುಪಡಿಗಳಿಗೆ ಬಿಡುಗಡೆಗೊಳಿಸುವುದು. ಪುನಃ ಪಕ್ಷದ ಮೂಲ ಘಟಕಗಳಾದ ಶಾಖೆಗಳಿಂದ ಹಿಡಿದು ಎಲ್ಲಾ ರಾಜ್ಯಸಮಿತಿಗಳವರೆಗಿರುವ ಎಲ್ಲಾ ಸಮಿತಿಗಳು ಈ ದಸ್ತಾವೇಜಿನ ಕುರಿತು ಕೂಲಂಕಶವಾಗಿ ಚರ್ಚಿಸಿ ತಿದ್ದುಪಡಿಗಳನ್ನು ಕಳುಹಿಸುತ್ತವೆ. ಫೆಬ್ರುವರಿ 1998 ರಲ್ಲಿ ಕಲ್ಕತ್ತಾದಲ್ಲಿ ಸೇರಲಿರುವ 16ನೇ ಮಹಾಧಿವೇಶನವು ಈ ಎಲ್ಲಾ ತಿದ್ದುಪಡಿಗಳನ್ನೂ ಪರಿಶೀಲಿಸಿ ಯಾವುದನ್ನು ಅಂಗೀಕರಿಸಬೇಕು, ಯಾವುದನ್ನು ತ್ಯಜಿಸಬೇಕು ಎಂಬುದನ್ನು ಮತಗಳ ಮೂಲಕ ನಿರ್ಧರಿಸುತ್ತದೆ. ಹಾಗೇನೇ ಮಹಾಧಿವೇಶನ ಪ್ರತಿನಿಧಿಗಳು ಕೂಡಾ ಆ ದಸ್ತಾವೇಜಿನ ಕುರಿತು ತಮ್ಮ ವೈಯಕ್ತಿಕ ತಿದ್ದುಪಡಿಗಳನ್ನು ಕೊಡುತ್ತಾರೆ. ಆ ತಿದ್ದುಪಡಿಗಳ ಆಧಾರದಲ್ಲಿ ಅಧಿವೇಶನದ ಚರ್ಚೆಯಲ್ಲಿ ಭಾಗವಹಿಸುತ್ತಾರೆ. ಕೊನೆಗೆ, ಈ ತಿದ್ದುಪಡಿಗಳಲ್ಲಿ ಯಾವುದು ಅಂಗೀಕಾರಾರ್ಹ ಮತ್ತು ಯಾವುದು ತ್ಯಾಜ್ಯ ಎಂಬುದನ್ನು ಮಹಾಧಿವೇಶನವು ಮತಗಳಿಂದ ತೀರ್ಮಾನ ಮಾಡುತ್ತವೆ. ಅಂತ್ಯದಲ್ಲಿ , 16ನೇ ಮಹಾಧಿವೇಶನವು ಮುಂದಿನ 3 ವರ್ಷಗಳಿಗೆ ಇಡೀ ಪಕ್ಷಕ್ಕೆ ಮಾರ್ಗದರ್ಶನವಾಗುವ ರಾಜಕೀಯ ಕರಡನ್ನು ಅಂಗೀಕರಿಸುತ್ತದೆ. ಹಾಗೆಯೇ, ರಾಜಕೀಯ ಕರಡನ್ನು ಜಾರಿಗೊಳಿಸುವ ರಾಜಕೀಯ- ಸಂಘಟನಾ ಲೈನನ್ನು ನಿರ್ಧರಿಸುತ್ತದೆ.

ಇಂತಹ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಅತ್ಯಂತ ನಿಷ್ಠೆಯಿಂದ ದೇಶದಲ್ಲಿ ನಡೆಸಿಕೊಂಡು ಬರುತ್ತಿರುವ ಪಕ್ಷ ಭಾರತ ಕಮ್ಯೂನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷ ಮಾತ್ರ ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆಯಾಗುತ್ತದೆ.

ಇತ್ತೀಚೆಗೆ ಸುಪ್ರೀಂ ಕೋರ್ಟು ತೀರ್ಪಿನ ನಂತರವೂ ಕಾಂಗ್ರೆಸ್(ಐ) ಪಕ್ಷದಲ್ಲಿ ಹಾಗೂ ಜನತಾದಳದ ಪಕ್ಷದಲ್ಲಿ ನಡೆದ ಅಧ್ಯಕ್ಷರ ಚುನಾವಣೆಗಳ ವೈಖರಿಯನ್ನು ಪರಿಶೀಲಿಸಿದರೆ, ಭಾರತ ದೇಶವು ಅಂಗೀಕರಿಸಿದ ಪಕ್ಷ ಪ್ರತಿನಿಧಿತ್ವದ ಪ್ರಜಾಪ್ರಭುತ್ವವು ಗಂಡಾಂತರಕಾರಿಯಾಗಿದೆ ಎಂಬುದು ಸರ್ವವಿದಿತವಾಗುವುದರಲ್ಲಿ ಸಂಶಯವಿಲ್ಲ.

ಮೂರು ರಾಜ್ಯಗಳ ಆಡಳಿತ

ಪಶ್ಚಿಮಬಂಗಾಳ, ತ್ರಿಪುರಾ ಮತ್ತು ಕೇರಳ ಮೂರು ರಾಜ್ಯಗಳಲ್ಲಿ ಅನುಕ್ರಮವಾಗಿ 20 ವರ್ಷ, 15ವರ್ಷ, 12ವರ್ಷ ಕಾಲ ಆಳುತ್ತಾ ಬಂದಿರುವ, ಈಗಲೂ ರಾಜ್ಯಭಾರ ಮಾಡುತಿರುವ ಪಕ್ಷ ಭಾರತ ಕಮ್ಯುನಿಸ್ಟ್ (ಮಾರ್ಕ್ಸವಾದಿ) ಪಕ್ಷವಾಗಿದೆ. ಭಾರತದ ಸಂವಿಧಾನ ನೀಡಿದ ಸೀಮಿತ ರಾಜ್ಯಾಧಿಕಾರದ ಇತಿಮಿತಿಗಳೊಳಗೆ ಒಂದು ಕ್ರಾಂತಿಕಾರಿ ಕಾರ್ಮಿಕವರ್ಗದ ಪಕ್ಷವು ಹೇಗೆ 'ಜನಪರ'ವಾದ ಸರಕಾರವನ್ನು ಜನತೆಗೆ ಕೊಡುತ್ತಾ ಬಂದಿದೆ ಎಂಬುದಕ್ಕೆ ಈ ಸರಕಾರಗಳು ಸಾಕ್ಷಿಯಾಗಿವೆ ಮಾತ್ರವಲ್ಲ. ಇಂದಿನ ಭಾರತ 21ನೇ ಶತಮಾನದ ಬಲಿಷ್ಠ ಸಮೃದ್ಧ ಮತ್ತು ಜನಾದರ ಗಳಿಸುವ ಭಾರತವಾಗಿ ಬೆಳೆದು ಬರಬೇಕಾದರೆ, ದೇಶದ ಕೇಂದ್ರಸರಕಾರವು ಅದು ಅನುಸರಿಸುತ್ತಾ ಬರುತ್ತಿರುವ ಆರ್ಥಿಕ ನೀತಿಗಳ ಬದಲು "ಪರ್ಯಾಯ ನೀತಿಗಳನ್ನು" ಅನುಸರಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಕಂಡುಕೊಂಡಿದೆ.

ಅಲ್ಲದೆ, **ಒಂದು**, ನಮ್ಮ ದೇಶದಲ್ಲಿ ತೀವ್ರ ರೀತಿಯ ಭೂಸುಧಾರಣೆಗಳನ್ನು ಜಾರಿಯಲ್ಲಿ ತಂದು 600 ಲಕ್ಷ ಕುಟುಂಬಗಳಿಗೆ ಭೂಮಿಯಲ್ಲಿ ಸ್ಥಿರ ಹಕ್ಕುಗಳನ್ನು ಕೊಡದೆ, ದೇಶದಲ್ಲಿ ಎಷ್ಟೇ ಪ್ರಮಾಣದ ಆರ್ಥಿಕ ಬೆಳವಣಿಗೆ ನಡೆದರೂ ಅದರ ಪ್ರಯೋಜನವು ಬಹುಭಾಗದ ಜನರಿಗೆ ದೊರೆಯುವುದಿಲ್ಲ, ಅವರೆಲ್ಲಾ ಆ ಬೆಳವಣಿಗೆಗಳಿಂದ ವಂಚಿತರಾಗಿ, ಬಡವರು ಇನ್ನೂ ಬಡವರಾಗುತ್ತಾ ಹೋಗುತ್ತಾರೆ ಎಂಬ ಅನುಭವವನ್ನು ಸಾಬೀತು ಮಾಡಿ ತೋರಿಸಿವೆ ಈ ಸರಕಾರಗಳು. ತೀವ್ರ ಭೂಸುಧಾರಣೆಗಳ ಮೂಲಕ ದೇಶವನ್ನು ಆಧುನಿಕಗೊಳಿಸಬಹುದು, ದೇಶದ ದಟ್ಟ ದಾರಿದ್ರ್ಯವನ್ನು ತೊಲಗಿಸಬಹುದು ಎಂಬುದು ಈ ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಕ್ಷದ ಅನುಭವಗಳ ಸಾರವಾಗಿದೆ.

ಎರಡು, ಬಡತನಕ್ಕೂ-ಅನಕ್ಷರತೆಗೂ ಅತಿ ಹತ್ತಿರದ ನಂಟು ಇದೆ ಎಂದು ತಿಳಿದೇ, ಮಾರ್ಕ್ಸಿಸ್ಟ್ ನೇತೃತ್ವದ ಸರಕಾರಗಳು ಈ ಮೂರೂ ರಾಜ್ಯಗಳಲ್ಲಿ ಅನಕ್ಷರಸ್ಥರನ್ನು ಗ್ರಾಮಾಂತರಗಳಲ್ಲಿ ಮತ್ತು ಪಟ್ಟಣಗಳಲ್ಲಿ ರೈತರನ್ನು, ಕೃಷಿ ಕಾರ್ಮಿಕರನ್ನು - ಅಕ್ಷರಸ್ಥರನ್ನಾಗಿ ಮಾಡುತ್ತಿದ್ದಾರೆ. ಇದಕ್ಕಾಗಿ ಈ ಸರಕಾರಗಳು ದೇಶ ವಿದೇಶಗಳ ಹೊಗಳಿಕೆಯನ್ನು ಪಡೆದಿವೆ. ಭಾರತ ದೇಶದ ಇತರ ಎಲ್ಲಾ ರಾಜಕೀಯ ಆಡಳಿತದಡಿಯಲ್ಲಿರುವ ರಾಜ್ಯಗಳಿಗೆ ಮಾರ್ಗದರ್ಶನ ಮಾಡುತ್ತಿವೆ. **ಮೂರು**, ಪಂಚಾಯತ್ ಆಡಳಿತೆಯು ಈ ಮೂರೂ ರಾಜ್ಯಗಳಲ್ಲಿ ಇತರರಿಗೆ ಆದರ್ಶವಾಗಿದೆ. ಪಶ್ಚಿಮ ಬಂಗಾಳದ ಸರಕಾರವು 1977ರಲ್ಲಿ ಅಧಿಕಾರವಹಿಸಿಕೊಂಡನಂತರ ಪ್ರತಿ ಐದು ವರ್ಷಕ್ಕೊಮ್ಮೆ ಚಾಚೂತಪ್ಪದೆ ಪಂಚಾಯತುಗಳಿಗೆ- ಸಾರ್ವತ್ರಿಕ ಮತಪಟ್ಟಿಯ ಆಧಾರದಲ್ಲಿ, ಪಕ್ಷಗಳ ಆಧಾರದಲ್ಲಿ ಚುನಾವಣೆಗಳನ್ನು ನಡೆಸುತ್ತಾ ಬಂದಿದೆ. ಭೂ ಸುಧಾರಣೆಗಳ ಹಿನ್ನೆಲೆಯಲ್ಲಿ ಈ ಚುನಾವಣೆಗಳು ನಡೆಯುತ್ತಾ ಬಂದಿರುವುದರಿಂದ, ಸ್ಥಳೀಯ ಆಡಳಿತೆಯು ಹೆಚ್ಚಿನೆಡೆಗಳಲ್ಲಿ ಸಮಾಜದ ಕೆಳಗಡೆ ಇರುವ ಜನವಿಭಾಗಗಳ ಪ್ರತಿನಿಧಿಗಳ ಕೈಯಲ್ಲಿ ಬಂದಿದೆ. ಸುಮಾರು 40 ಶೇಕಡಾ ಮಂದಿ ಪಂಚಾಯಿತಿ ಪ್ರತಿನಿಧಿಗಳು ಸ್ತ್ರೀಯರು. ಪಶ್ಚಿಮ ಬಂಗಾಳದ ಸರಕಾರವು ತನ್ನ ಆದಾಯದ ಐವತ್ತು ಶೇಕಡಾ ಹಣವನ್ನು ಈ ಪಂಚಾಯತುಗಳ ಮೂಲಕ ಖರ್ಚು ಮಾಡುತ್ತಿದ್ದು ಇಡೀ ದೇಶಕ್ಕೇನೆ ಮಾದರಿ ಹಾಕಿದೆ.

ಅದೇ ರೀತಿಯಲ್ಲಿ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಮಾರ್ಕ್ಸವಾದಿ ಪಕ್ಷದ ನೇತೃತ್ವದ ಸರಕಾರವು "ಯೋಜನೆಯು ದಿಲ್ಲಿಯಲ್ಲಿ ರಚನೆಯಾಗಬಾರದು, ತಿರುವನಂತಪುರದಲ್ಲಿ ರಚನೆಯಾಗಬಾರದು, ಈ ಪ್ರಕ್ರಿಯೆಯು ಗ್ರಾಮದಿಂದ ಸರ್ವಜನತೆಯ ಅಭಿಪ್ರಾಯದ ಆಧಾರದಲ್ಲಿ ರೂಪಿಸಲ್ಪಟ್ಟು ತಾಲೂಕು, ಜಿಲ್ಲಾ, ರಾಜ್ಯದ ಯೋಜನೆಯಾಗಿ ರೂಪೀಕರಿಸಬೇಕು ಎಂಬ ತತ್ವವನ್ನು ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತಂದಿದೆ. ಅದು ಕೂಡಾ ಇಡೀ ದೇಶಕ್ಕೆ ಮಾರ್ಗದರ್ಶನವಾಗಿದೆ.

ಪಾರ್ಲಿಮೆಂಟಿನಲ್ಲಿ ರಾಜೀವ್ ಗಾಂಧಿ-ಅನಂತರ ಪಿ.ವಿ.ನರಸಿಂಹರಾಯರು - ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಕಾಲಕಾಲಕ್ಕೆ ನಡೆದು ಸ್ಥಳೀಯ ಸಂಸ್ಥೆಗಳ ಆಡಳಿತೆ ಜಾರಿಗೆ ಬರಬೇಕೆಂದು ಮಾಡಿದ ಸಂವಿಧಾನ ತಿದ್ದುಪಡಿಗಳನ್ನು ಅಂಗೀಕರಿಸುವ ಎಷ್ಟೋ ಮೊದಲೇ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಈ ಮೂರು ರಾಜ್ಯ ಸರಕಾರಗಳು ಪಂಚಾಯತ್-ಮುನಿಸಿಪಾಲಿಟಿ ಸ್ಥಳೀಯ ಸಂಸ್ಥೆಗಳನ್ನು ಅತ್ಯಂತ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸುತ್ತಾ ಬಂದು ದೇಶಕ್ಕೆ ಮಾದರಿಯಾಗಿವೆ.

ನಾಲ್ಕು, ಕೇರಳವು ಇಂದು "ಸ್ವಚ್ಛತೆ"ಯಲ್ಲಿ ದೇಶಕ್ಕೆ ಮಾದರಿಯಾದರೆ, ಬಡತನದಲ್ಲಿದ್ದರೂ ಸಾರ್ವತ್ರಿಕ ಆರೋಗ್ಯ ರಕ್ಷಣೆ ವಿಷಯದಲ್ಲಿ ಇಡೀ ದೇಶದಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದರಲ್ಲಿ ರಾಜ್ಯದ ಎಡ ಪಕ್ಷಗಳ ಅದರಲ್ಲೂ ಸಿ ಪಿ ಐ (ಎಂ) ಪಕ್ಷದ ಬಹುದೊಡ್ಡ ಕೊಡುಗೆ ಇದೆ ಎಂದು ಎದೆತಟ್ಟಿ ಹೇಳಬಹುದು.

ಪರ್ಯಾಯ ಧೋರಣೆಗಳು:

ಅದೇ ವೇಳೆ ಹಿಂದೆ ನೆಹರೂ ಆಡಳಿತೆಯಡಿಯಲ್ಲೂ, ಆಮೇಲಿನ ಪಿ.ವಿ.ನರಸಿಂಹರಾವ್ ರವರ ಆಡಳಿತೆಯಡಿಯಲ್ಲೂ ದೇಶದ ಗುತ್ತೇದಾರಿ ಬಂಡವಾಳಶಾಹಿಗಳ ಹಿತಗಳಿಗನುಸಾರವಾಗಿ ದೇಶದ ಬಹುಭಾಗದ ಜನತೆಯ ಹಿತಗಳಿಗೆ ವಿರೋಧವಾದ ದಿಕ್ಕಿನಲ್ಲಿ ನಡೆಸುತ್ತಾ ಬಂದ ಆರ್ಥಿಕ ನೀತಿಗಳನ್ನು ಸಿ.ಪಿ.ಐ.(ಎಂ) ಪಕ್ಷವು ದೃಢವಾಗಿ ವಿರೋಧಿಸುತ್ತಾ ಬಂದಿದೆ.

ದೇಶದಲ್ಲಿ ಭೂಮಾಲಿಕರ ಜತೆಗೂಡಿ ರಾಜ್ಯಾಡಳಿತೆಯನ್ನು ನಡೆಸುತ್ತಿದ್ದ ನೆಹರೂ ನೇತೃತ್ವದ ಕೇಂದ್ರ ಸರ್ಕಾರವು ದೇಶದಲ್ಲಿ ಬಲಿಷ್ಠ ಆರ್ಥಿಕವನ್ನು ನಿರ್ಮಿಸುವುದರಲ್ಲಿ ವಿಫಲವಾಗುವುದು ಎಂದು ಸಿಪಿಐ (ಎಂ) ಬಲವಾಗಿ ನೆಹರೂ ರವರ ಧೋರಣೆಯನ್ನು ಟೀಕಿಸಿತ್ತು, ತೀವ್ರ ಭೂಸುಧಾರಣೆಗಳ ಮೂಲಕ ಬಲಿಷ್ಠ ಕೈಗಾರಿಕಾ ರಾಷ್ಟ್ರವಾಗಿ ದೇಶವು ಬೆಳೆಯಲು ತಳಪಾಯ ಹಾಕಬಹುದು ಎಂದು ಸಾರಿತ್ತು. ನೆಹರೂ-ಇಂದಿರಾಗಾಂಧಿಯವರಿಗೆ ಈ ಕೂಗು ಕೇಳಲಿಲ್ಲ, ಫಲಿತಾಂಶವೆಂದರೆ, 1990 ರಲ್ಲಿ ದೇಶದ ಆರ್ಥಿಕ ಡೋಲಾಯಮಾನ ಸ್ಥಿತಿಗೆ ಬಂತು.

ಈ ಧೋರಣೆಯನ್ನು ಹಾಗೂ ಈ ಡೋಲಾಯಮಾನ ಸ್ಥಿತಿಯನ್ನು ತಪ್ಪಿಸಲು ಸಿ ಪಿ ಐ (ಎಂ) ಪಕ್ಷ ಸೂಚಿಸಿದ ಪರ್ಯಾಯ ನೀತಿಗಳನ್ನು ಅನುಸರಿಸುವ ಬದಲು, ಜನತೆಯ ಆದೇಶವನ್ನು ಪಡೆಯದೆ, ಪಾರ್ಲಿಮೆಂಟ್‌ನ್ನು ಕೇಳದೆ ನೇರವಾಗಿ ಪಿ.ವಿ. ನರಸಿಂಹ ರಾಯರು ಭಾರತದಲ್ಲಿ ಐ.ಎಂ,ಎಫ್. ಜಾಗತಿಕ ಬ್ಯಾಂಕ್ ಪ್ರೇರಿತ ನವ ಆರ್ಥಿಕ ನೀತಿಗಳನ್ನು ಆ ಸಂಸ್ಥೆಗಳ ಅಧಿಕಾರಿಯಾಗಿದ್ದ ಮನಮೋಹನ ಸಿಂಗ್ ಎಂಬ ಅರ್ಥ ಮಂತ್ರಿಯ ಮೂಲಕ ದೇಶದ ಮೇಲೆ ಹೊರಿಸಿದರು.

ಈ ನವ ಆರ್ಥಿಕ ನೀತಿ ನಿಜವಾಗಿ ನವಸಾಹತು ಶಾಹಿ ಆರ್ಥಿಕ ನೀತಿ. ಮೂರನೇ ಜಗತ್ತಿನ ರಾಷ್ಟ್ರಗಳ ಮೇಲೆ ಎಲ್ಲಾ ರೀತಿಯಲ್ಲಿ ತಮ್ಮ ಕಬಂಧ ಬಾಹುಗಳುಳ್ಳ ಸಾಮ್ರಾಜ್ಯಶಾಹಿ ಆರ್ಥಿಕ ಹಿಡಿತವನ್ನು ಸ್ಥಾಪಿಸುವ ನೀತಿಗಳಾಗಿವೆ ಎಂದು ಎಷ್ಟು ಪರಿಯಲ್ಲಿ ದೇಶದಲ್ಲಿ ಎಡ ಪಕ್ಷಗಳು, ಮುಖ್ಯವಾಗಿ ಸಿಪಿಐ(ಎಂ) ಪಕ್ಷವು, ಚಳವಳಿ ಮಾಡಿದರೂ, ಪಾರ್ಲಿಮೆಂಟಿನಲ್ಲಿ ಪ್ರತಿಭಟಿಸಿದರೂ-ನರಸಿಂಹರಾಯರು ಬಗ್ಗಲಿಲ್ಲ. ಕೊನೆಗೆ ಏನಾಯಿತು? ಹೀನಾಯಮಾನವಾಗಿ 1996 ರ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಕಾಂಗ್ರೆಸ್ಸು (ಐ) ಸೋತಿತು. ಆದರೆ ದುರದೃಷ್ಟವಶಾತ್, ಬಿಜೆಪಿ ಸರ್ಕಾರವನ್ನು ಅಧಿಕಾರದಲ್ಲಿ ಮುಂದುವರಿಯಲು ಬಿಡಬಾರದೆಂಬ ಉದ್ದೇಶದಿಂದ, ಕೇಂದ್ರದಲ್ಲಿ 15 ಪಕ್ಷಗಳ ಸಂಯುಕ್ತ ರಂಗ ಸರಕಾರವನ್ನು ತರಲು ಸಿ ಪಿ ಐ (ಎಂ) ಹೆಚ್ಚಿನ ಶ್ರಮ ಮತ್ತು ಪಾತ್ರ ವಹಿಸಿದರೂ, ಹಾಗೆ ಅಧಿಕಾರಕ್ಕೆ ಬಂದ ದೇವೇಗೌಡರ ನೇತೃತ್ವದ ಕೇಂದ್ರ ಸರ್ಕಾರವಾಗಲೀ, ಅನಂತರ ಬಂದ ಗುಜ್ರಾಲರ ಸರ್ಕಾರವಾಗಲೀ ಈ ನವ ಆರ್ಥಿಕ ನೀತಿಗಳನ್ನು ತ್ಯಜಿಸಲಿಲ್ಲ. ಬದಲು, ಹಿಂದಿನ ಕಾಂಗ್ರೆಸ್ (ಐ) ಸರಕಾರವು ಹಾಕಿ ಕೊಟ್ಟ ಆರ್ಥಿಕ ನೀತಿಗಳ ಹಾದಿಯನ್ನೇ ತುಳಿಯುತ್ತಿದೆ. ದೇಶದ ಆರ್ಥಿಕ ವನ್ನು ಸಂಪೂರ್ಣ ವಿದೇಶೀ ಬಂಡವಾಳ ಅವಲಂಬಿತವನ್ನಾಗಿ ಮಾಡುತ್ತಿವೆ. ದೇಶದ ಬಹುಭಾಗದ ಜನತೆಯ ಹಿತಗಳನ್ನು ಧೂಳೀಪಟ ಮಾಡುತ್ತಿವೆ.

ಸಿ.ಪಿ.ಐ (ಎಂ) ದೇಶವನ್ನು ಪರ್ಯಾಯ ನೀತಿಗಳ ಮೂಲಕ ಕಟ್ಟಿ ಬೆಳೆಸಿ ಬಹುಭಾಗದ ಜನ ವಿಭಾಗಗಳ ಹಿತಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿವೆ.

ಪರ್ಯಾಯ ನೀತಿಗಳ ಒಂದು ಕಿರು ನೋಟ

1. ನಮ್ಮ ದೇಶದಲ್ಲಿ ಪ್ರಸ್ತುತ ಇಲ್ಲದ ತಾಂತ್ರಿಕತೆಯನ್ನು ಬಳಸುವ ವಿದೇಶೀ ಕಂಪೆನಿಗಳಿಗೆ ನಮ್ಮ ದೇಶದ ಹಿತಗಳನ್ನು ಸಾಧಿಸುವ ಕ್ಷೇತ್ರಗಳಲ್ಲಿ ಮಾತ್ರ ಬಂಡವಾಳ ಹೂಡಲು ಅವಕಾಶ ಕೊಡುವುದು. ನಮ್ಮ ದೇಶದ ಕೈಗಾರಿಕಾ ಸಂಸ್ಥೆಗಳ ಬುಡಕ್ಕೆ ಕೊಡಲಿಯೇಟು ಇಡುವ ಪರಕೀಯ ಬಂಡವಾಳವನ್ನು ದೇಶದೊಳಗೆ ಬರಲು ಬಿಡಬಾರದು.

2. ವಿದೇಶಿ ಬಂಡವಾಳದ ಬಹುಭಾಗ ಇಂದು ದೇಶದ ಬಂಡವಾಳಶಾಹಿ ಷೇರು ಬಜಾರಿನಲ್ಲಿ ಶೇರುಗಳಲ್ಲಿ ಸಟ್ಟಾ ಆಡಲು ಉಪಯೋಗಿಸಲ್ಪಡುತ್ತವೆ. ದೇಶದಲ್ಲಿ ಕೈಗಾರಿಕೆ, ಕೃಷಿ ಉತ್ಪನ್ನಗಳಿಗೂ, ಈ ಶೇರು ... ಸಂಭಂಧವಿಲ್ಲ. ಮಾತ್ರವಲ್ಲ, ಯಾವ ಕ್ಷಣದಲ್ಲೂ ಇಂದಿನ ಕಂಪ್ಯೂಟರ್ ಯುಗದಲ್ಲಿ ಈ ಹಣವು ದೇಶದಿಂದ ಹಾರಿ ಹೋಗಿ ದೇಶದ ವಿದೇಶಿ ವಿನಿಮಯ ವನ್ನು ಅಧೋಗತಿಗೆ ಇಳಿಸಬಹುದು. ಮೆಕ್ಸಿಕೋ, ಇತ್ತೀಚೆಗ ಥಾಯಲೆಂಡ್, ಫಿಲಿಫೈನ್ಸ್, ಮಲೇಶಿಯಾ ಮತ್ತು ಇಂಡೋನೇಶಿಯಾದಲ್ಲಾದಂತೆ ಆಗಬಹುದು.

ರೂಪಾಯಿಯನ್ನು ಸಂಪೂರ್ಣ ಅಂತರಾಷ್ಟ್ರೀಯ ವಿನಿಮಯ ಮಾರ್ಕೆಟ್ಟಿಗೆ ತೆರದಿಡುವ ನೀತಿಯನ್ನು ಈ ಸಂದರ್ಭದಲ್ಲಿ ಚಿದಂಬರಂ ಸ್ವಾಗತಿಸುತ್ತಿರುವುದು ದೇಶಕ್ಕೆ ಗಂಡಾಂತರಕಾರಿ. ಈ ಎಲ್ಲಾ ನೀತಿಗಳನ್ನು ನಾವು ವಿರೋಧಿಸುತ್ತೇವೆ.

3. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ, 96 ಕೋಟಿ ಜನತೆ ಇರುವ ನಮ್ಮ ದೇಶದಲ್ಲಿ, ಆಹಾರ ಧಾನ್ಯಗಳ ಬೆಳವಣಿಗೆಗೆ ಸಂಚಕಾರ ತರುವ ಕೃಷಿ ನೀತಿಯನ್ನು ನೂತನ ಆರ್ಥಿಕ ನೀತಿಯ ಭಾಗವಾಗಿ ತರುತ್ತಿದೆ ನಮ್ಮ ಕೇಂದ್ರ ಸರ್ಕಾರ. ಇದನ್ನು ನಾವು ತೀವ್ರವಾಗಿ ವಿರೋಧಿಸುತ್ತೇವೆ. ಈ ನೀತಿಗಳ ಫಲವಾಗಿ ಇದ್ದ ಅಲ್ಪಸ್ವಲ್ಪ ಪುರೋಗಾಮಿ ಭಾವನೆಗಳೂ ಸಂಪೂರ್ಣವಾಗಿ ವಿಪರೀತ ದಿಕ್ಕಿನಲ್ಲಿ ತಿದ್ದುಪಡಿಯಾಗುತ್ತಿವೆ. ಭಾರತದ ಫಲವತ್ತಾದ ಕೃಷಿ ಭೂಮಿ ವಿದೇಶೀ ಮತ್ತು ದೊಡ್ಡ ಬಂಡವಾಳಶಾಹಿಗಳ ಪಾಲಾಗುತ್ತಿವೆ. ಕೋಟ್ಯಾಂತರ ರೈತ ಕುಟುಂಬಗಳನ್ನು ವಿನಾಶದತ್ತ ದೂಡುತ್ತಿವೆ.

4. ಈ ಕೃಷಿ ನೀತಿಗೆ ಅನುಸಾರವಾಗಿ, ಸರಕಾರವು ನೀರಾವರಿ, ವಿದ್ಯುತ್, ರಸಗೊಬ್ಬರ, ಬೀಜಗಳು, ಕ್ರಿಮಿನಾಶಕಗಳನ್ನು ಅದಷ್ಟು ಕಡಿವೆ ಕ್ರಯದಲ್ಲಿ ದೇಶದ ರೈತರಿಗೆ ಪೂರೈಸುವ ಕ್ರಮಗಳೆಲ್ಲಾ ಬೇಗ ಬೇಗ ಮಾಯವಾಗುತ್ತಿವೆ. ಈ ಎಲ್ಲಾ ಕ್ಷೇತ್ರಗಳಲ್ಲಿ ದೇಶದ ರೈತರು ಬಹುರಾಷ್ಟ್ರೀಯ ಕಂಪೆನಿಗಳ ಕಪಿ ಮುಷ್ಟಿಗೆ ಬೀಳುವಂತಾಗುತ್ತಿದೆ. ಈ ನೀತಿಯ ಬದಲು, ಪ್ರಾಯೋಗಿಕವಾಗಿ ಬಹು ಭಾಗದ ರೈತರಿಗೆ ಅನುಕೂಲವಾಗುವ ಕೃಷಿ ನೀತಿಯನ್ನು ಅನುಸರಿಸುವದೊಂದೇ ಹಾದಿ. ಅದಕ್ಕೆ ಅಗತ್ಯವಿದ್ದಲ್ಲಿ ಕೇಂದ್ರ ಸರಕಾರವು ಧಾರಾಳವಾಗಿ ನೀರಾವರಿ, ವಿದ್ಯುತ್ ಇತ್ಯಾದಿ ವಿಷಯಗಳಲ್ಲಿ ಹಣ ದೊರಕಿಸಲು ಹಿಂದೆ ಬೀಳಬಾರದು.

ಸಿಪಿಐ(ಎಂ) ಪಕ್ಷದ 16 ನೇ ಮಹಾಧಿವೇಶನಕ್ಕೆ ಸಂಬಂಧಪಟ್ಟ ಎಲ್ಲಾ ಸಮ್ಮೇಳನಗಳಲ್ಲಿ ಈ ಎಲ್ಲಾ ಅಂಶಗಳ ಬಗ್ಗೆ ಫಲಯುತವಾದ ಚರ್ಚೆ ನಡೆಸಲಾಗುವುದು. ಮುಂದಿನ ವರ್ಷಗಳಲ್ಲಿ ಸಿ.ಪಿ.ಐ (ಎಂ) ಪ್ರತಿಪಾದಿಸುವ ಧೋರಣೆಗಳನ್ನು ನಿರ್ದಿಷ್ಟಪಡಿಸಲಾಗುವುದು.

ಇಂತಹ ಪ್ರಕ್ರಿಯೆಗೆ ದೇಶದ ಬಹುಮಂದಿಯ ಬೆಂಬಲ ಖಂಡಿತವಾಗಿ ಇದೆ. ಹಾಗೆ ಸಿ.ಪಿ.ಐ (ಎಂ) ಮುಂದಿನ ವರ್ಷಗಳಲ್ಲಿ ಅತ್ಯಂತ ಬಲಿಷ್ಠವಾದ ರಾಷ್ಟ್ರೀಯ ಶಕ್ತಿಯಾಗಿ ದೇಶದ ಹೆಚ್ಚಿನ ಭಾಗಗಳಲ್ಲಿ ಬೆಳೆದು ಬರಲಿದೆ ಎಂಬ ವಿಶ್ವಾಸ ನಮ್ಮದು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸಮ್ಮೇಳನ ಈಗಾಗಲೇ 'ಐಕ್ಯರಂಗ'ದಲ್ಲಿ ಪ್ರಕಟಿಸಿರುವಂತೆ ಡಿಸೆಂಬರ್ 30, 31 ಹಾಗೂ ಜನವರಿ 1 ಹಾಗೂ 2 ರಂದು ನಡೆಯಲಿದ್ದು, ಅದಕ್ಕೆ ಪೂರ್ವಭಾವಿಯಾಗಿ ವಿವಿಧ ಜಿಲ್ಲಾ ಸಮ್ಮೇಳನಗಳು ಈ ಕೆಳಗಿನ ದಿನಾಂಕಗಳಲ್ಲಿ ನಡೆಯಲಿವೆ.

ಬೆಂಗಳೂರು	ಡಿಸೆಂಬರ್ 5, 6, 7
ದಕ್ಷಿಣ ಕನ್ನಡ	ಡಿಸೆಂಬರ್ 13, 14, 15
ಕೋಲಾರ	ನವಂಬರ್ 13, 14, 15
ಗುಲ್ಬರ್ಗ-ಬೀದರ್	ನವಂಬರ್ 17, 18, 19
ತುಮಕೂರು	ನವಂಬರ್ 21, 22
ಮೈಸೂರು	ನವಂಬರ್ 8, 9
ಬಳ್ಳಾರಿ	ಡಿಸೆಂಬರ್ 6, 7, 8
ರಾಯಚೂರು	ನವಂಬರ್ 22, 23,24
ಬಿಜಾಪುರ	ಡಿಸೆಂಬರ್ 16, 17
ಬೆಳಗಾವಿ	ನವಂಬರ್ 28, 29
ಧಾರವಾಡ-ಚಿತ್ರದುರ್ಗ	ಡಿಸೆಂಬರ್ 20, 21
ಉತ್ತರ ಕನ್ನಡ	ನವಂಬರ್ 9, 10
ಕೊಡಗು	ಅಕ್ಟೋಬರ್ 15, 16
ಶಿವಮೊಗ್ಗ	ಡಿಸೆಂಬರ್ 6, 7
ಮಂಡ್ಯ	ಅಕ್ಟೋಬರ್ 17, 18
ಹಾಸನ, ಚಿಕ್ಕಮಗಳೂರು	ನವಂಬರ್ 3, 4

ಬರಗಾಲ ಪರಿಹಾರ-ಸಿಪಿಎಂ ಮನವಿ

(ನಮ್ಮ ಪ್ರತಿನಿಧಿಯಿಂದ)

ಕಲ್ಬುರ್ಗಿ ಜಿಲ್ಲೆಯಲ್ಲಿ ಮಳೆಇಲ್ಲದೆ ಬರದ ಪರಿಸ್ಥಿತಿ ಎದುರಾಗಿರುವಾಗ ಜನತಾದಳದ ಸಚಿವರುಗಳ ಯಾತ್ರೆ ನಡೆದಿದೆ. ಜಿಲ್ಲೆಯ ಅಭಿವೃದ್ಧಿ ಪರಿಶೀಲನೆ ಎಂದು ಹೇಳುತ್ತಿದ್ದರೂ ಸಹಾ ಜನತಾದಳದ ಕಾರ್ಯಕರ್ತರ ಸಭೆ ಈ ದಂಡಿಗೆ ಮುಖ್ಯವಾಗಿದೆ.

ಜಿಲ್ಲೆಯ ಬರ ಪರಿಸ್ಥಿತಿ ಅಧ್ಯಯನಕ್ಕೆಂದು ರಾಜ್ಯದ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಕಲ್ಬುರ್ಗಿ ಜಿಲ್ಲೆಗೆ ಭೇಟಿ ಕೊಟ್ಟ ಸಚಿವರ ಗುಂಪಲ್ಲಿ ಯಾರೊಬ್ಬರೂ ಯಾವುದೇ ಒಂದು ಗ್ರಾಮಕ್ಕೂ ಭೇಟಿ ನೀಡಲಿಲ್ಲ.

ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲೆಯಲ್ಲಿ ಕೂಡಲೇ ಬರಗಾಲ ಪರಿಹಾರ ಕಾಮಗಾರಿಯನ್ನು ಆರಂಭಿಸುವಂತೆ, ಹಾನಿಗೊಳಗಾದ ಬೆಳೆಗೆ ಪರಿಹಾರ ನೀಡುವಂತೆ ಒತ್ತಾಯಿಸಿ ಕಲ್ಬುರ್ಗಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಿತು. ಮನವಿ ಸ್ವೀಕರಿಸಿದ ಉಪ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ವಸತಿ ಸಚಿವ ರೇವಣ್ಣ ಅವರು ಜಿಲ್ಲಾ ಮಟ್ಟದ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವುದಾಗಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಸದಸ್ಯ ಮೇಘರಾಜ ಕಠಾರೆ, ಶಿವಶರಣಪ್ಪ ಬುದ್ಧಿಮತ, ಕೆ.ನೀಲಾ, ವಿರುಪಾಕ್ಷ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಶಾಖಾ ಸಮ್ಮೇಳನ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸ್ಟೇಷನ್ ಬಜಾರ್ ಶಾಖಾ ಸಮ್ಮೇಳನ ಇತ್ತೀಚೆಗೆ ನಡೆಯಿತು.

ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ, ಮಂಡಳಿ ಸದಸ್ಯರಾದ ಕೆ.ನೀಲಾ ಅವರು ಸಮ್ಮೇಳನವನ್ನು ಉದ್ಘಾಟಿಸಿ ಎಲ್ಲಾ ಪಕ್ಷಗಳೂ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವೊಂದೇ ಕಪ್ಪು ಚುಕ್ಕಿ ಇಲ್ಲದೆ ಜನರ ಹೋರಾಟದ ಮುಂಚೂಣಿಯಲ್ಲಿರುವ ಪಕ್ಷ ಎಂದರು.

ಶಿವಕುಮಾರ ಮಾಲಿ ಪಾಟೀಲ್ ಅವರು ವಿದೇಶೀ ಕಂಪನಿಗಳಿಗೆ ಮಣೆಹಾಕುತ್ತಿರುವ ಬಂಡವಾಳಶಾಹಿ ಪಕ್ಷಗಳ ವಿರುದ್ಧ ಹೋರಾಡುವಂತೆ ಕರೆ ನೀಡಿದರು. ರಾಜ್ಯ ಸಮಿತಿ ಸದಸ್ಯ ಎಸ್.ವೈ. ಗುರುಶಾಂತ್ ಅವರು ತಮ್ಮ ಕ್ಯೂಬಾ ಭೇಟಿಯ ಅನುಭವಗಳನ್ನು ವಿವರಿಸಿದರು.

ಸುಭಾಷ್ ಚಂದ್ರ ಅವರು ಶಾಖಾ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಅಪ್ಪಯ್ಯ ಹಿರೇಮಠ್ ಅವರು ಸ್ವಾಗತಿಸಿದರು. ಜೈ ಲಾಲ್ ತೋಟದ ಮನಿ ವಂದಿಸಿದರು.

ಪ್ರತ್ಯೇಕ ರಾಜ್ಯ: ಖಂಡನೆ

ಹೈದ್ರಾಬಾದ್ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವಾಗಿಸಬೇಕು ಎಂಬ ಬೇಡಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತೀವ್ರವಾಗಿ ಖಂಡಿಸಿದೆ.

ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯ ಸಂದರ್ಭದಲ್ಲಿ ಕೆಲವರು ಆ ಭಾಗದ ಹಿಂದುಳಿದಿರುವಿಕೆಯನ್ನು ನಿವಾರಿಸಲು ಪ್ರತ್ಯೇಕ ರಾಜ್ಯದ ಬೇಡಿಕೆ ಮುಂದಿಟ್ಟಿರುವುದು ಸರಿಯಲ್ಲ.

ಈ ಭಾಗದ ಹಿಂದುಳಿದಿರುವಿಕೆಗೆ ಹಲವಾರು ಕಾರಣಗಳಿವೆ. ಈ ಭಾಗದಲ್ಲಿರುವ ವ್ಯಾಪಕ ಭ್ರಷ್ಟಾಚಾರ, ಅನಕ್ಷರತೆ, ಇಲ್ಲಿನ ಸಮಾಜದ ಮೇಲೆ ಜಮೀನ್ದಾರಿ ಶಕ್ತಿಗಳ ಹಿಡಿತ. ಶೈಕ್ಷಣಿಕವಾಗಿ ಹಿಂದುಳಿದಿರುವಿಕೆಯಂತಹ ಸಾಕಷ್ಟು ಕಾರಣಗಳಿವೆ. ಇವುಗಳ ವಿರುದ್ಧ ಹೋರಾಟ ಮಾಡಿದಾಗ ಮಾತ್ರ ಈ ಭಾಗದ ಅಭಿವೃದ್ಧಿ ಸಾಧ್ಯ ಎಂದು ಸಿಪಿಎಂ ನ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ ತಿಳಿಸಿದ್ದಾರೆ.

ಈ ಭಾಗದ ಹಿಂದುಳಿದಿರುವಿಕೆಗೆ ಕಾರಣವಾದ ಶಕ್ತಿಗಳ ಹೀಗ ಮುಖವಾಡ ಧರಿಸಿ ಪ್ರತ್ಯೇಕ ರಾಜ್ಯಕ್ಕೆ ಒತ್ತಾಯಿಸುತ್ತಿರುವುದು ವಿಷಾದದ ಸಂಗತಿ ಎಂದು ಅವರು ತಿಳಿಸಿದ್ದಾರೆ.

ಸುಳ್ಳು ಮೊಕದ್ದಮೆ.

ಪೋಲೀಸ್ ಠಾಣೆಗೆ ಮುತ್ತಿಗೆ

ಅಂಬಲಗಾ: ಆಳಂದ ತಾಲೂಕಿನ ಅಂಬಲಗಾ ಗ್ರಾಮದ ಪಂಚಾಯತ್ ಅಧ್ಯಕ್ಷರಾದ ಕಾಂ. ಕಲ್ಲಪ್ಪ ಚಿಲಿ ಮತ್ತು ಚಿಂಚನಸೂರ ಜಿಲ್ಲಾ ಪಂಚಾಯತ್ ಸದಸ್ಯರಾದ ಕಾಂ. ಮೇಘರಾಜ ಕಠಾರೆ ಇವರ ಮೇಲೆ ಸುಳ್ಳು ಕೇಸು ದಾಖಲು ಮಾಡಿದ ಪೋಲೀಸ್ ಕ್ರಮದ ವಿರುದ್ಧ 16 ಹಳ್ಳಿಗಳಿಂದ ಬಂದ ಸುಮಾರು 600 ಜನ ಪ್ರಾಂತ ರೈತ ಸಂಘದ ಹಾಗೂ ಕೃಷಿಕೂಲಿಕಾರ ಸಂಘದ ಕಾರ್ಯಕರ್ತರು ನರೋಣ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿದರು.

ಕಮಲಾಪುರ ಬಿ.ಜೆ.ಪಿ.ಶಾಸಕ ರೇವುನಾಯಕ ಇವರು ತಮ್ಮ ಕುತ್ಸಿತ ರಾಜಕೀಯ ಬೇಳೆ ಬೇಯಿಸಿಕೊಳ್ಳಲು, ದುಡಿಯುವ ವರ್ಗದ ಚಳವಳಿಯನ್ನು ಮುರಿಯಲು, ಆಳುವ ಜನರ ಕೈಗೊಂಬೆಯಾಗಿ ಪೋಲೀಸರೊಂದಿಗೆ ಶಾಮೀಲಾಗಿ ಸುಳ್ಳು ಕೇಸುಗಳನ್ನು ದಾಖಲಿಸಿದ್ದಾರೆ.

ಅಂಬಲಗಾ ಗ್ರಾಮದ ಜನತಾ ಮನೆಯಲ್ಲಿ ವಾಸವಾಗಿದ ಒಬ್ಬ ವ್ಯಕ್ತಿ 50 ಅಡಿಗಳ ಸ್ಥಳವನ್ನು ಅತಿಕ್ರಮಣ ಮಾಡಿದಾಗ ಪಂಚಾಯತ್‌ನಿಂದ ಕಾನೂನು ರೀತ್ಯ ನೋಟೀಸು ಕೊಡಲಾಗಿತ್ತು. ಆದರೆ ಅತಿಕ್ರಮಣ ಹಿಂತೆಗೆದುಕೊಳ್ಳದಿದ್ದಾಗ ಸ್ಥಳದಲ್ಲಿಯೇ ಜನತೆ ಪ್ರತಿಭಟಿಸಿದರು. ನಂತರ ಕಮಲಾಪುರ ಬಿಜೆಪಿ ಶಾಸಕರು ಅತಿಕ್ರಮಣ ಮಾಡಿದ ವ್ಯಕ್ತಿಗೆ ಬೆಂಬಲಿಸಿ ಪೋಲೀಸರ ಮೂಲಕ ಸುಳ್ಳು ಕೇಸುಗಳನ್ನು ದಾಖಲಿಸಿದ್ದನ್ನು ಪ್ರತಿಭಟಿಸಲು ನರೋಣ ಗ್ರಾಮದಲ್ಲಿ ಪ್ರಾಂತರೈತ ಸಂಘದ ಮತ್ತು ಕೃಷಿ ಕೂಲಿಕಾರ ಸಂಘದ ನೇತೃತ್ವದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಲಾಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ. ಮಾರುತಿ ಮಾನ್ಪಡೆ ಜಿಲ್ಲಾ ಪಂಚಾಯತ್ ಸದಸ್ಯರಾದ ಕಾಂ. ಮೇಘರಾಜ ಕಠಾರೆ, ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಬಾಬೂ ಮುಗಳಿ, ಕಾಂ. ಮರಡಿ ಹಾಗೂ ಪಂಚಾಯತ್ ಅಧ್ಯಕ್ಷರಾದ ಕಾಂ. ಕಲ್ಲಪ್ಪ ಚಿಲಿ ಮಾತನಾಡುತ್ತಾ ಸುಳ್ಳು ಕೇಸು ದಾಖಲಿಸಿದ ಪೋಲೀಸ್ ಕ್ರಮವನ್ನು ಪ್ರತಿಭಟಿಸಿ ಕೇಸು ಹಿಂತೆಗೆದುಕೊಳ್ಳಲು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಆಳಂದ ತಹಸೀಲ್ದಾರ್ ಮತ್ತು ಡಿ.ಎಸ್.ಪಿ. ಇವರಿಗೆ ಕಾಂ. ಪಾಂಡುರಂಗ ಮನವಿ ಪತ್ರ ಅರ್ಪಿಸಿದರು. ಕೊನೆಯಲ್ಲಿ 2 ತಾಸುಗಳ ಧರಣಿ ಸತ್ಯಾಗ್ರಹ ನಡೆಸಲಾಯಿತು.

ನಿವೇಶನಕ್ಕೆ ಧರಣಿ.

ಚಂದಾಪುರ: ಸರ್ಕಾರದ ವಿವಿಧ ಯೋಜನೆಗಳಡಿ ನಿವೇಶನ ಉಳ್ಳವರಿಗೇ ನಿವೇಶನ ನೀಡಿರುವ ಕ್ರಮವನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘ ಸುದೀರ್ಘ ಹೋರಾಟ ನಡೆಸಿದೆ.

ಚಿಂಚೋಳಿಯ ಚಂದಾಪುರದಲ್ಲಿ ಶೇ. 90 ಕ್ಕೂ ಹೆಚ್ಚು ನಿವೇಶನ ಉಳ್ಳವರಿಗೆ ನಿವೇಶನ ನೀಡಲಾಗಿದೆ. ಈ ಹಿಂದೆ ಈ ಬಗ್ಗೆ ಧರಣಿ, ಪಿಕೆಟಿಂಗ್ ಮೂಲಕ ತಾಲ್ಲೂಕು ಪಂಚಾಯತಿ ಗಮನ ಸೆಳೆದಿದ್ದರೂ ಭರವಸೆ ಈಡೇರಲಿಲ್ಲ. ಮತ್ತೆ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಒಂದು ತಿಂಗಳು ಸತತವಾಗಿ ಧರಣಿ ನಡೆಸಲಾಯಿತು.

ಸರ್ಕಾರ ನಿರ್ಮಿಸಿದ 40 ಮನೆಗಳಲ್ಲಿ ಕೂಲಿಕಾರರು ವಾಸ ಮಾಡಲು ಆರಂಭಿಸಿದ್ದರು. ಇವರಿಗೆ ಹಕ್ಕುಪತ್ರ, ಇನ್ನೂ ನೂರು ಜನರಿಗೆ ನಿವೇಶನ ಹಕ್ಕುಪತ್ರ ನೀಡಬೇಕು ಎಂಬ ಬೇಡಿಕೆಯನ್ನು ಈಡೇರಿಸುವುದಕ್ಕಾಗಿ ಧರಣಿ ಸ್ಥಳಕ್ಕೆ ಭೇಟಿ ನೀಡಿದ ತಾಲ್ಲೂಕು, ಪಟ್ಟಣ ಪಂಚಾಯತ್ ಅಧ್ಯಕ್ಷರು ತಿಳಿಸಿದರು.

ರೈತರ ಧರಣಿ.

ನಾಗೂರ: ಗುಲ್ಬರ್ಗಾ ತಾಲೂಕಿನ ಗ್ರಾಮವನ್ನು ಬರಗಾಲ ಪ್ರದೇಶವೆಂದು ಘೋಷಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಗ್ರಾಮ ಪಂಚಾಯತ್ ಎದುರಿಗೆ ಧರಣಿ ಸತ್ಯಾಗ್ರಹ ನಡೆಸಿದರು.

ಹೆಣ್ಣು ಮಕ್ಕಳ ಶೌಚಾಲಯದ ಹೆಸರಿನಲ್ಲಿ ನಾಗೂರ ಗ್ರಾಮದಲ್ಲಿ 25 ಸಾವಿರ, ತಡಕಲ್ ಗ್ರಾಮದಲ್ಲಿ 33 ಸಾವಿರ ರೂಪಾಯಿ ಅವ್ಯವಹಾರ ನಡೆದಿದ್ದು ಪೂರ್ತಿ ಲೆಕ್ಕ ಕೊಡಬೇಕು. ರೈತರು ಬೆಳೆದ ಬೆಳೆಗೆ ಹಾನಿಯಾಗಿದ್ದರಿಂದ ಪರಿಹಾರಧನ ಕೊಡಬೇಕು. ಬರ ಪರಿಹಾರ ಕಾಮಗಾರಿ ಪ್ರಾರಂಭಿಸಬೇಕೆಂದು ಒತ್ತಾಯಿಸಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು.

ಕಾಂ. ವಿರುಪಾಕ್ಷ ತಡಕಲ್, ಕಾಂ. ಗಂಗಾಧರ್ ಡಿಗ್ಗಿ ಮತ್ತು ಕಾಂ. ಹಣಮಂತಪ್ಪ ನಾಯಿಕೊಡಿ ಇವು ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು.

ಧಾರವಾಡ ಜಿಲೆಯಲ್ಲಿ ಸ್ವಾತಂತ್ರ್ಯ ಸುವರ್ಣ ಜಯಂತಿ ಆಚರಣೆ

ಭಾರತದ ಸ್ವಾತಂತ್ರ್ಯದ ಜಯಂತಿಯ ಆಚರಣೆಯ ಅಂಗವಾಗಿ ಸಿ.ಪಿ.ಐ(ಎಂ) ಧಾರವಾಡ ಜಿಲ್ಲಾ ಸಮಿತಿಯು ಪ್ರಕಟಿಸಿದ, 'ಸ್ವಾತಂತ್ರ್ಯ ಹೋರಾಟದ ನಾಗರಕ್ಕೆ ಸಾವಿರಾರು ನದಿಗಳು, ಎಂಬ ವಿಶೇಷ ಕರಪತ್ರದ 3000 ಕರಪತ್ರಗಳನ್ನು ಪಕ್ಷದ ಶಾಖೆಗಳಿಗೆ, ಸಾಮೂಹಿಕ ಸಂಘಟನೆಗಳಿಗೆ, ಧ್ವಜಾರೋಹಣ ನೆರವೇರಿಸಿ ಮಾತನಾಡಿದರು: ಹುಬ್ಬಳ್ಳಿಯ ಸಮೀಪದ ತಾರಿಹಾಳದಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ಸ್ ಕಾರ್ಮಿಕರು ಸಭೆ ಸೇರಿ ಸಿಐಟಿಯು ವಿನ ಆಶ್ರಯದಲ್ಲಿ ಡಿ.ಜೆ.ಗೋಂದಕರ ಅವರಿಂದ ಧ್ವಜಾರೋಹಣ ಮಾಡಿಸಿದರು. ಎಂ.ಬಿ. ಕಟ್ಟಿ ಮತ್ತು ವಿ.ಎನ್. ನೇಶಪಾಂಡೆ ಧಾರವಾಡದ ಸಾಧನಕೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮಗಳನ್ನು ನಡೆಸಿದರು. ಹರಿಹರ ನಗರ ಶಾಖೆ, ತುಮ್ಮಿನಕಟ್ಟೆ ಶಾಖೆ, ಹಾವೇರಿ ತಾಲೂಕು ಗೌರಾಪುರ ಶಾಖೆಗಳಲ್ಲಿಯೂ ಧ್ವಜಾರೋಹಣ ನಡೆಯಿತು. ಅಕ್ಕಿ ಆಲೂರಿನಲ್ಲಿ ಏರ್ಪಡಿಸಿದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟದ ಬಗ್ಗೆ ನಮ್ಮ ಪಕ್ಷದ ದೃಷ್ಟಿಕೋನ ನೀಡಿ ಭಾಷಣ ಮಾಡಿದರು.

ಆಗಸ್ಟ್ 15 ರಂದು ಧಾರವಾಡದ ದೇವಿ-ಶಕ್ತಿ ಅಪಾರ್ಟ್‌ಮೆಂಟ್ಸ್‌ನಲ್ಲಿ ಮೊದಲ ಬಾರಿಗೆ ಧ್ವಜಾರೋಹಣ, ಮಕ್ಕಳಿಗೆ ಸಿಹಿ ಹಂಚುವಿಕೆ ಮತ್ತು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು 30 ಕುಟುಂಬಗಳು ಒಟ್ಟು ಸೇರಿ ನಡೆಸಿದರು. ಈ ಸಂದರ್ಭದಲ್ಲಿ ಏರ್ಪಡಿಸಿದ ವಿನೂತನ ಪ್ರಶ್ನೋತ್ತರ ಕಾರ್ಯಕ್ರಮಗಳಲ್ಲಿ 47 ಜನ ವಯಸ್ಕ ಪುರುಷರೂ ಮಹಿಳೆಯರೂ ಭಾಗವಹಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಗೋಪಾಲ ಕೃಷ್ಣ ಗೋಖಲೆಯ ನೇತೃತ್ವದ ಕಾಂಗ್ರೆಸ್ ಮನವಿ ಪತ್ರ ಆಂದೋಲನವನ್ನು ಶೇ. 66 ರಷ್ಟು ಜನರು ಸಾಧಾರಣ ಹಾಗೂ ಅತೃಪ್ತಿಕರ ಎಂದು ಅಭಿಪ್ರಾಯಪಟ್ಟರು. ಶೇ.75 ರಷ್ಟು ಜನರು ಅಂಬೇಡ್ಕರರ ನೇತೃತ್ವದ ಕಾಂಗ್ರೆಸ್ಸಿನ ಅಸಹಕಾರ ಆಂದೋಲನವನ್ನು ಶೇ. 62 ರಷ್ಟು ಜನರು ಸುಭಾಶ್ ಚಂದ್ರ ಭೋಸ್ ರ ನೇತೃತ್ವದ ಫಾರ್ವರ್ಡ ಬ್ಲಾಕ್ ಪಕ್ಷದ ಸಶಸ್ತ್ರ ಹೋರಾಟವನ್ನೂ, ಶೇ. 51 ರಷ್ಟು ಜನರು ಕಮ್ಯುನಿಸ್ಟ ಪಕ್ಷದ ನೇತೃತ್ವದ ರೈತ-ಕಾರ್ಮಿಕರ ಹೋರಾಟವನ್ನೂ ಅತಿ ಉತ್ತಮ ಹಾಗೂ ಉತ್ತಮ ಎಂದು ಅಭಿಪ್ರಾಯ ಪಟ್ಟರು. ಮುಂದುವರಿದು, ಶೇ. 75 ರಷ್ಟು ಜನರು ಸ್ವಾತಂತ್ರ್ಯಾನಂತರ ಜನರ ಆಶೋತ್ತರಗಳಾದ ಉದ್ಯೋಗ: ಶಿಕ್ಷಣ, ಆರೋಗ್ಯ, ವಸತಿ, ಸ್ವಾವಲಂಬನೆ, ಸಮಾನತೆ, ಏಕತೆ ಮತ್ತು ಸಮಗ್ರತೆಗಳು ಸಾಧಾರಣ ಹಾಗೂ ಅತೃಪ್ತಿಕರವಾಗಿ ಈಡೇರಿವೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. 50 ವರ್ಷಗಳ ಅನುಭವಗಳಿಂದ ಶೇ. 76 ರಷ್ಟು ಜನರು ಪ್ರಜಾಪ್ರಭುತ್ವವನ್ನು ಇನ್ನಷ್ಟು ಬೆಳೆಸಿ ಗಟ್ಟಿಗೊಳಿಸಬೇಕೆಂದೂ, ಶೇ. 70 ಕ್ಕೂ ಹೆಚ್ಚು ಜನರು ಸರ್ವಾಧಿಕಾರಿ, ಮಿಲಿಟರಿ ಪ್ರಭುತ್ವ ಅಥವಾ ಧರ್ಮ ಆಧರಿತ ಪ್ರಭುತ್ವ ಸಾಧಾರಣ ಹಾಗೂ ಅತೃಪ್ತಿಕರ ಎಂದು ತಿರಸ್ಕರಿಸಿರುವರು.

ಪ್ರತಿ ಒಂದು ಪ್ರಶ್ನೆಯ ಕುರಿತು ಅತಿ ಉತ್ತಮ, ಉತ್ತಮ, ಸಾಧಾರಣ, ಅತೃಪ್ತಿಕರ ಎಂಬ ನಾಲ್ಕು ಮಾನದಂಡಗಳಿಂದ ಉತ್ತರಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಿ.ಆರ್.ಭಟ್ ನಡೆಸಿಕೊಟ್ಟರು.

ದಾವಣಗೆರೆ ಜಿಲ್ಲಾ ವಾರ್ತೆ

ಕೆ.ಮಹಾಂತೇಶ್

ಸೆಪ್ಟೆಂಬರ್-27 ಭಗತ್‌ಸಿಂಗ್ ದಿನಾಚರಣೆ

ಸೆಪ್ಟೆಂಬರ್-27 ಕ್ರಾಂತಿಕಾರಿ ಭಗತ್‌ಸಿಂಗ್ ದಿನಾಚರಣೆಯ ಅಂಗವಾಗಿ 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಗತ್‌ಸಿಂಗ್ ಮತ್ತು ಸಂಗಾತಿಗಳು' ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿವೈಎಫ್‌ಐ) ಜಂಟಿಯಾಗಿ ನಗರದ ಸೀತಮ್ಮ ಕಾಲೇಜಿನಲ್ಲಿ ಸಂಘಟಿಸಿದ್ದವು.

ಬ್ಯಾಂಕ್ ನೌಕರರ ಸಂಘಟನೆಯ ಜಿಲ್ಲಾ ಅಧ್ಯಕ್ಷರಾದ ಕಾಂ॥ ಎಂ.ಆರ್.ಹಿರೇಮಠ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕಾಂ॥ ನಿತ್ಯಾನಂದ ಸ್ವಾಮಿ, ಡಿವೈಎಫ್‌ಐ ಅಧ್ಯಕ್ಷರಾದ ಕಾಂ॥ ಬ್ರಹ್ಮದೇವ್ ಹರಳಗೆ ಯವರು ಸಮಾರಂಭದಲ್ಲಿ ಮಾತನಾಡಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಭಗತ್ ಸಿಂಗ್, ಮತ್ತು ಆತನ ಸಂಗಾತಿಗಳು ನಡೆಸಿದ ಹೋರಾಟಗಳನ್ನು ಹಾಗೂ ಸ್ಫೂರ್ತಿಯನ್ನು ಇಂದಿನ ಯುವ ಜನಾಂಗ ಮೈಗೂಡಿಸಿಕೊಳ್ಳಬೇಕಿದೆ ಎಂದರು. ಅಲ್ಲದೆ ಭಗತ್‌ಸಿಂಗ್ ಸ್ವಾತಂತ್ರ್ಯ ನಂತರದಲ್ಲಿ ಭಾರತದ ಸಮಾಜದ ರಚನೆಯು ಹೇಗಿರಬೇಕೆಂಬ ಸ್ಪಷ್ಟ ಕಲ್ಪನೆಯನ್ನು ಹೊಂದಿದವರಾಗಿದ್ದರು. ಮಾತ್ರವಲ್ಲ ಭಗತ್ ಸಿಂಗ್ ಯಾವುದೇ ಭ್ರಮಾ ಲೋಕದ ಕನಸುಗಾರ ಆಗಿರಲಿಲ್ಲ. ವಾಸ್ತವಿಕ ಚಿಂತನೆಯುಳ್ಳವರು, ವೈಜ್ಞಾನಿಕ ಮನೋಭಾವವನ್ನು ತಮ್ಮ ಹೋರಾಟದೊಂದಿಗೆ ಕಂಡುಕೊಂಡಿದ್ದರು. ಭಗತ್‌ಸಿಂಗ್ ಇತರರು ಹೇಳುವಂತೆ ಭಯೋತ್ಪಾದಕ ಗುಂಪಿಗೆ ಸೇರಿದವರಾಗಲಿ ಅಥವಾ ಯಾವುದೋ ಧಾರ್ಮಿಕ ಮುಖವಾಡ ಧರಿಸಿದವರಾಗಲೀ ಆಗಿರಲಿಲ್ಲ, ಅವರಿಗೆ ಈ ಸಮಾಜ ಬದಲಾವಣೆಯ ಬಗ್ಗೆ ಸ್ಪಷ್ಟ ಗುರಿ ಹಾಗೂ ಕಲ್ಪನೆಗಳಿದ್ದವು. ಮಾನವನಿಂದ ಮಾನವನ ಶೋಷಣೆಯನ್ನು ತಡೆಯುವುದು ಅವರ ಹೋರಾಟದ ಕಾರ್ಯಕ್ರಮವಾಗಿತ್ತು. ಅದಕ್ಕಾಗಿ ಶ್ರಮಿಕ ವರ್ಗವು ಸಾಮೂಹಿಕ ಚಳುವಳಿಯನ್ನು ಬಲಪಡಿಸಬೇಕೆಂಬ ಅಂಶವನ್ನೂ ಅವರು ಮನಗಂಡಿದ್ದರು ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ಡಿವೈಎಫ್‌ಐ ಜಿಲ್ಲಾ ಸಂಚಾಲಕ ಕೆ.ಮಹಾಂತೇಶ್ ವಹಿಸಿದ್ದರು. ಎಸ್‌ಎಫ್‌ಐ ಮುಖಂಡ ಕಾಂ॥ ಮಂಜುನಾಥ್ ಸ್ವಾಗತಿಸಿದರು. ಎಸ್‌ಎಫ್‌ಐ ಅಧ್ಯಕ್ಷ ಡಿ.ಶ್ರೀನಿವಾಸ ವಂದಿಸಿದರು.

ಸಿಪಿಐ(ಎಂ) ಸಮ್ಮೇಳನಗಳು

ದಾವಣಗೆರೆ: ದಾವಣಗೆರೆ ಸಿಪಿಐ(ಎಂ) ಶಾಖೆಯ ಸಮ್ಮೇಳನವು ಆಗಸ್ಟ್ 24 ರಂದು ಕಾಂ॥ ಹೆಚ್.ಎಸ್.ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಮ್ಮೇಳನಕ್ಕೆ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿ, ಕಾ॥ ಸಿ.ಆರ್.ಭಟ್ ಆಗಮಿಸಿ ಮಾರ್ಗದರ್ಶನ ನೀಡಿದರು. ಕಾರ್ಯದರ್ಶಿ ವರದಿ ಮಂಡನೆ ನಂತರ ಚರ್ಚೆ ನಡೆಯಿತು. ಕಾಂ॥ ಎ.ಎಸ್.ಮೂರ್ತಿ ಯವರು ಶಾಖಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಹರಿಹರ ಕಿರ್ಲೋಸ್ಕರ್ ಶಾಖೆ: ದಿನಾಂಕ 2.9.97 ರಂದು ಶಾಖಾ ಸಮ್ಮೇಳನ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಕಾಂ॥ ನಿತ್ಯಾನಂದ ಸ್ವಾಮಿ, ಕಾಂ॥ ಕೆ.ಮಹಾಂತೇಶ್ ಹಾಜರಿದ್ದು ಮಾರ್ಗದರ್ಶನ ನೀಡಿದರು. ಕಾಂ॥ ಆರ್.ಸಿ. ಉನ್ನಿತ್ತನ್ ಕಾರ್ಯದರ್ಶಿಯಾಗಿ ಕಾಂ॥ ಸುರೇಶ್ ಪತ್ತಾರ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಹರಿಹರ ನಗರ ಶಾಖೆ: ಸಮ್ಮೇಳನವು ದಿನಾಂಕ 11.0.97 ರಂದು ಹರಿಹರದಲ್ಲಿ ನಡೆಯಿತು. ಪಕ್ಷದ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ನಡೆಸುವುದು ಹಾಗೂ ಇತರೆ ನಾಗರಿಕ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದ ಸಮ್ಮೇಳನ ಕಾ॥ ರುದ್ರಪ್ಪ ಮೂಟೆಬೆನ್ನೂರ್ ಅವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿತು. ಜಿಲ್ಲಾ ಕಾರ್ಯದರ್ಶಿ ಕಾಂ॥ ನಿತ್ಯಾನಂದ ಸ್ವಾಮಿ, ಕಾಂ॥ಕೆ.ಮಹಾಂತೇಶ್ ಹಾಜರಿದ್ದರು.

'ವಿಮಾ ಉದ್ದಿಮೆ ರಕ್ಷಿಸಿ' ವಾರಾಚರಣೆ

ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರ ಜಾರಿಗೆ ತರಲು ಹೊರಟಿದ್ದ ವಿಮಾ ನಿಯಂತ್ರಣ ಕಾಯ್ದೆ ಅದೊಂದು ವಿಮಾ ಸಂಸ್ಥೆಗಳನ್ನು ವಿದೇಶಿ ಗುತ್ತೆದಾರಿಗಳಿಗೆ ಮಾರುವ ತಂತ್ರವಾಗಿದ್ದು ಆ ಮಸೂದೆಯು ಸದ್ಯಕ್ಕೆ ಲೋಕಸಭೆಯಲ್ಲಿ ಸೋಲನಪ್ಪಿದ್ದರೂ ಅದರ ಅಪಾಯ ತಪ್ಪಿಲ್ಲ. ಆದ್ದರಿಂದ 'ವಿಮಾ ಉದ್ದಿಮೆಯ ಖಾಸಗೀಕರಣವನ್ನು ವಿರೋಧಿಸಿ' ವಿಮಾ ನೌಕರರ ಸಂಘಟನೆಯು ನಡೆಸಿದ ಈ ಪ್ರಚಾರಾಂದೋಲನಕ್ಕೆ ಸಾರ್ವಜನಿಕರು ವ್ಯಾಪಕ ಜನಬೆಂಬಲ ನೀಡಬೇಕೆಂದು ಜನತೆಗೆ ಕರೆ ನೀಡಿದರು.

'ವಿಮಾ ಉದ್ದಿಮೆ ರಕ್ಷಿಸಿ' ಸಪ್ತಾಹದ ಅಂಗವಾಗಿ ಅಖಿಲ ಭಾರತ ವಿಮಾ ನೌಕರರ ಸಂಘಟನೆ ದಾವಣಗೆರೆ ವಿಭಾಗದ ವಿವಿಧ ಪ್ರದೇಶಗಳಲ್ಲಿ ಹಮ್ಮಿಕೊಂಡಿದ್ದ ಬೀದಿ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದ ಬ್ಯಾಂಕ್ ನೌಕರರ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತರಾವ್, ಡಿವೈಎಫ್‌ಐ ಜಿಲ್ಲಾ ಸಂಚಾಲಕ ಕೆ.ಮಹಾಂತೇಶ್, ವಿಮಾ ನೌಕರರ ಮುಖಂಡರಾದ ಕೆ.ಎಲ್.ಭಟ್, ಅಭಿವೃದ್ಧಿ ಅಧಿ ಕಾರಿಗಳ ಸಂಘದ ನಾಗರಾಜ್ ಮುಂತಾದವರು ವಿಮಾ ನೌಕರರ ಸಂಘಟನೆ ಹಮ್ಮಿಕೊಂಡಿರುವ ಈ ಸಪ್ತಾಹಕ್ಕೆ ಬೆಂಬಲ ಸೂಚಿಸಿದರು.

ಅಖಿಲ ಭಾರತ ವಿಮಾ ನೌಕರರ ಸಂಘ ವಲಯ ಕಾರ್ಯದರ್ಶಿ ಡಿ.ಯೂಕೂಬ್, ವಿಮಾ ನೌಕರರ ಮುಖಂಡರಾದ ವೆಂಕಟೇಶ್, ನಾಗರಾಜ್, ಪದ್ಮನಾಭ್, ವಿಜಿಯಣ್ಣ, ದೇಶಪಾಂಡೆ, ರವಿಕುಮಾರ್, ಮುಂತಾದವರ ನೇತೃತ್ವದಲ್ಲಿ ಒಂದು ವಾರಗಳ ಕಾಲ ಹಾಡು ಬೀದಿ ಕಿರುನಾಟಕ ಭಾಷಣಗಳು ನಡೆದವು.

ಪೆಟ್ರೋಲಿಯಂ ಬೆಲೆ ಏರಿಕೆ ವಿರುದ್ಧ ಮತ ಪ್ರದರ್ಶನ

ಕೇಂದ್ರ ಸರ್ಕಾರ ಜೀವನಾವಶ್ಯಕ ಪೆಟ್ರೋಲ್, ಡೀಸೆಲ್ ಹಾಗೂ ಅಡಿಗೆ ಅನಿಲಗಳ ಬೆಲೆಗಳನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಿ ದಾವಣಗೆರೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಎಸ್‌ಎಫ್‌ಐ, ಡಿವೈಎಫ್‌ಐ, ಎಐಐಎಸ್‌ಎಫ್ ವಿಮಾ ನೌಕರರ ಸಂಘ, ಸಿಐಟಿಯು ಬ್ಯಾಂಕ್ ನೌಕರರ ಸಂಘಟನೆ (ಎಐಬಿಇಎ) ಗಳು ಈ ಮತ ಪ್ರದರ್ಶನವನ್ನು ಸಂಘಟಿಸಿದ್ದವು.

ನಂತರದಲ್ಲಿ ನಡೆದ ಸಭೆಯಲ್ಲಿ ಕಾಂ.ಎ.ಎಸ್. ಮೂರ್ತಿ, ಹನುಮಂತರಾವ್, ಡಿ.ಯಾಕೂಬಾ, ಕೆ.ಎಲ್.ಭಟ್, ಪಿ. ಮಂಜುನಾಥ ಷಣ್ಮುಖ ಒಡೆಯರ್ ಮುಂತಾದವರು ಮಾತನಾಡಿ, ಸರ್ಕಾರದ ಜನವಿರೋಧಿ ನೀತಿಯನ್ನು ಖಂಡಿಸಿದರು.

ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ

ಹರಿಹರದ ಸಿ.ಐ.ಟಿ.ಯು ಮುಖಂಡ ಕಾಂ. ಆರ್.ಬಿ. ಅಂಗಡಿ, ಅವರ ಮಗಳು ಶ್ರೀಮತಿ ಅನಿತಾಳನ್ ಅವಳ ಗಂಡ, ಅತ್ತೆ, ನಾದಿನಿ ಇತರರು ವರದಕ್ಷಿಣೆಗೆ ಕಿರುಕುಳ ನೀಡಿ ಅವಳ ಮೇಲೆ ಸೀಮೆಎಣ್ಣೆ ಸುರಿದು-ಸಾಯಿಸಿ ಸುಮಾರು 20 ದಿನಗಳಾದರೂ ಅಪರಾಧಿಗಳ ವಿರುದ್ಧ ವಿಳಂಬ ಮಾಡುತ್ತಿರುವುದನ್ನು ಪ್ರತಿಭಟಿಸಿ, ಸಾಮೂಹಿಕ ಸಂಘಟನೆಗಳ ಕಾರ್ಯಕ್ರಮ ಜಿಲ್ಲಾ ಪೋಲೀಸ್ ರಕ್ಷಣಾಧಿಕಾರಿಗೆ ಕಾಂ. ಎ.ಎಸ್. ಮೂರ್ತಿಯವರ ನೇತೃತ್ವದಲ್ಲಿ ಭೇಟಿ ನೀಡಿ ಮನವಿ ಪತ್ರ ಸಲ್ಲಿಸಿದರು.

ಸ್ವಾತಂತ್ರ್ಯೋತ್ಸವ-50 ವಿಶೇಷ ಉಪನ್ಯಾಸಗಳು

ಸಿಪಿಐ(ಎಂ) ಆಶ್ರಯದಲ್ಲಿ: 'ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕ ವರ್ಗದ ಪಾತ್ರ' ಕುರಿತಂತೆ ಉಪನ್ಯಾಸ ಕಾರ್ಯಕ್ರಮವನ್ನು ನಗರ ಸ್ಕೌಟ್ ಭವನದಲ್ಲಿ ನಡೆಸಲಾಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಸಿ.ನಂಜುಂಡಪ್ಪನವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾರತದ ಕಾರ್ಮಿಕ ವರ್ಗ ಬ್ರಿಟಿಶ್ ಸಾಮ್ರಾಜ್ಯ ಶಾಹಿಯ ವಿರುದ್ಧ ನಡೆಸಿದ ಸ್ಮರಣೀಯ ಹೋರಾಟದ ಮಜಲುಗಳನ್ನು ಸಭಿಕರ ಮುಂದೆ ಬಿಡಿಸಿಟ್ಟರು. ಸಮಾರಂಭದಲ್ಲಿ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಸಿ.ಆರ್.ಭಟ್ ಮಾತನಾಡಿದರು. ಈ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಕಾಂ॥ ನಿತ್ಯಾನಂದ ಸ್ವಾಮಿ ವಹಿಸಿದ್ದರು.

ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು: ಈ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್.ಎಫ್.ಐ) ದಾವಣಗೆರೆ ಸಮಿತಿ ಸ್ಥಳೀಯ ಶ್ರೀ ಆನಂದ ಪ್ರೌಢಶಾಲೆಯಲ್ಲಿ ಸಂಘಟಿಸಿತ್ತು. 'ಸ್ವಾತಂತ್ರ್ಯ ಚಳುವಳಿಯಲ್ಲಿ ವಿದ್ಯಾರ್ಥಿಗಳು ನಡೆಸಿದ ಕ್ರಾಂತಿಕಾರಿ ಹೋರಾಟದ ಮಜಲುಗಳನ್ನು ಡಿವೈಎಫ್‌ಐ ಅಧ್ಯಕ್ಷ ಹಾಗೂ ಉಪನ್ಯಾಸಕ ಕಾಂ॥ ಬ್ರಹ್ಮದೇವ ಹರಳಗೆ ವಿದ್ಯಾರ್ಥಿ-ಶಿಕ್ಷಕರ ಮುಂದಿಟ್ಟರು. ಅಲ್ಲದೆ ಕ್ರಾಂತಿಕಾರಿ ಹೋರಾಟದಿಂದ ತುಂಬಿದ ಸ್ವಾತಂತ್ರ್ಯ ಚಳುವಳಿಯನ್ನೂ ತಮ್ಮ ಇತಿಹಾಸಕಾರರು ನಿರ್ಲಕ್ಷಿಸಿ, ಭಾರತದ ಜನತೆಗೆ ಮೋಸ ಮಾಡಿದ್ದಾರೆ ಎಂದರು. ಸಮಾರಂಭದಲ್ಲಿ ಎಸ್.ಎಫ್.ಐ. ರಾಜ್ಯ ಸಮಿತಿ ಸದಸ್ಯ ಸಿ.ಮಂಜುನಾಥ್, ಡಿವೈಎಫ್‌ಐ ಜಿಲ್ಲಾ ಸಂಚಾಲಕ ಕೆ.ಮಹಾಂತೇಶ್ ಮಾತನಾಡಿದರು. ಈ ಉಪನ್ಯಾಸ ಮಾಲಿಕೆಯ ಅಧ್ಯಕ್ಷತೆಯನ್ನು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ವೈ.ಎಕ್ಕಪ್ಪನವರು ವಹಿಸಿದ್ದರು.



ಭಾರತೀಯ ವಿಮೋಚನಾ ಸಮರ

ಸಾವಿರಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಒಂದೆಡೆ ವಸಾಹತುಶಾಹೀ ಶೋಷಣೆಯ ವಿರುದ್ಧ ಸಶಸ್ತ್ರ ಬಂಡಾಯಗಳು ಮುಂದುವರಿಯುತ್ತಿದ್ದಂತೆ ಕೆಲವು ಭಾರತೀಯ ಜನ ವಿಭಾಗಗಳಿಗೆ ತಮ್ಮ ಸಮಾಜ ಹಿಂದುಳಿದಿದೆ, ಅದರಲ್ಲಿ ಸುಧಾರಣೆಯಾಗಬೇಕಾಗಿದೆ ಎಂಬ ಅರಿವೂ ಮೂಡಲಾರಂಭಿಸಿತು. ಇದರಿಂದ ದೇಶದ ಹಲವೆಡೆ ಸಾಮಾಜಿಕ, ಸಾಂಸ್ಕೃತಿಕ ಜಾಗೃತಿ ಮೂಡಿ ಬರಲಾರಂಭಿಸಿತು. ಭಾರತೀಯ ಸಮಾಜದ ಪುನರುಜ್ಜೀವನಕ್ಕೆ, ವಿಜ್ಞಾನ ಮತ್ತು ಶಿಕ್ಷಣದ ಮೇಲೆ ಹೆಚ್ಚಿನ ಒತ್ತು ನೀಡಿದ ಚಳುವಳಿಗಳವು. ಮಹಿಳೆಯರ ದಮನ, ಬಾಲವಿವಾಹ, ಸತಿಪದ್ಧತಿ, ಜಾತಿ ಸಂಕುಚಿತತೆ ಇತ್ಯಾದಿಗಳ ವಿರುದ್ಧ ಕಂದಾಚಾರ, ಅಮಾನುಷ ಪದ್ಧತಿಗಳ ವಿರುದ್ಧ ಸಮಾಜ ಸುಧಾರಕರು ಪ್ರಚಾರ ನಡೆಸಿದರು.



ಬಂಗಾಳದ ರಾಜಾರಾಂ ಮೋಹನ್‌ರಾಯ್ (1772-1833) ಇಂತಹ ಸಮಾಜ ಸುಧಾರಕರಲ್ಲಿ ಪಥಪ್ರದರ್ಶಕರು ಎನ್ನಬಹುದು. ಆಧುನಿಕ ಶಿಕ್ಷಣ ಭಾರತದಲ್ಲಿ ಹರಡಲು ಕಾರಣಕರ್ತರಾದ ಅವರು ಹಿಂದೂ ಸಮಾಜದ ಎಲ್ಲಾ ಮೂಢ ನಂಬಿಕೆಗಳನ್ನು ವಿರೋಧಿಸಿ, ಶಾಸ್ತ್ರಗಳ ವಿಚಾರವಾದೀ ವಿವರಣೆಗಾಗಿ ಪ್ರಚಾರ ನಡೆಸಿದರು. ವೈಜ್ಞಾನಿಕ ಮನೋಭಾವವನ್ನು ಬೆಂಬಲಿಸಿದರು.



ಈಶ್ವರ ಚಂದ್ರ ವಿದ್ಯಾಸಾಗರ(1820-1891) - ವಿಧವಾ ವಿವಾಹ ಇವರ ಪ್ರಮುಖ ಸಾಧನೆ. ಇವರ ಪ್ರಯತ್ನದಿಂದಾಗಿ 1856 ರಲ್ಲಿ ವಿಧವಾ ವಿವಾಹ ಕಾನೂನು ಪಾಸಾಯಿತು. ಆಧುನಿಕ ಶಿಕ್ಷಣದ ಪ್ರತಿಪಾದಕರಾದ ಇವರು ವಿಶೇಷವಾಗಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದರು.



ವಂದೇಮಾತರಂ (1876) ಬಂಕಿಮ್ ಚಂದ್ರ ಚಟ್ಟೋಪಾಧ್ಯಾಯ 1876 ರಲ್ಲಿ ರಚಿಸಿದ ಈ ಹಾಡು ಮುಂದೆ ದೇಶಪ್ರೇಮಿಗಳ ಸ್ಫೂರ್ತಿಯ ಸೆಲೆಯಾಯಿತು. 1896 ರಲ್ಲಿ ರವೀಂದ್ರ ನಾಥ್ ಟಾಗೋರ್ ಇದಕ್ಕೆ ಸಂಗೀತ ನೀಡಿ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವತಃ ಹಾಡಿದರು.

ಮೂರ್ತಿಪೂಜೆ, ಜಾತಿವಾದದ ವಿರುದ್ಧ ರಾಜಾರಾಂ ಮೋಹನ್‌ರಾಯ್ ಆರಂಭಿಸಿದ ಆಂದೋಲನವನ್ನು **ದೇವೇಂದ್ರನಾಥ್ ಟಾಗೋರ್, ಕೇಶವ್ ಸೆನ್, ಶಿವನಾಥ್ ಶಾಸ್ತ್ರಿ** ಮತ್ತಿತರರು ಮುಂದುವರಿಸಿದರು.


ಗುಜರಾತ್‌ನ ಸೂರತ್‌ನಲ್ಲಿ **ದಾದೋಬಾಪಾಂಡುರಂಗ್** ಎಂಬಾತ ಮಾನವ ಧರ್ಮಸಮಿತಿ





ಸ್ಥಾಪಿಸಿದರು. ಮುಂಬೈಯಲ್ಲಿ ದಲಿತರು, ಮಹಿಳೆಯರ ನಡುವೆ ಶಿಕ್ಷಣ ಪ್ರಸಾರಕ್ಕೆ, ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಲು, ಮೂರ್ತಿ ಪೂಜೆಯನ್ನು ವಿರೋಧಿಸಿ ಜಾತಿ ಪದ್ಧತಿಯನ್ನು ವಿರೋಧಿಸಿ **ಪಂಡಿತಾ ರಮಾ ಬಾಯಿ**, ಬೆಹ್ರಾಮ್ ಜೀ ಮಲಬಾರೀ ಮತ್ತಿತರರು ಪ್ರಚಾರ ಕೈಗೊಂಡರು. **ಜ್ಯೋತಿಬಾಫುಲೆ** ದಲಿತೋದ್ಧಾರಕ್ಕೆ ಜಾತಿ ಪದ್ಧತಿಯ ವಿರುದ್ಧ ಸತ್ಯಶೋಧಕ ಆಂದೋಲನದ ಆರಂಭಿಸಿದರು. 1867 ರಲ್ಲಿ ಮುಂಬೈಯಲ್ಲಿ **ಮಹದೇವ ಗೋವಿಂದ ರಾನಡೆ** ಬಂಗಾಳದಲ್ಲಿ ರಾಜರಾಂ ಮೋಹನ ರಾಯ್‌ರ 'ಬ್ರಹ್ಮಸಮಾಜ'ದ ಮಾದರಿಯಲ್ಲಿ 'ಪ್ರಾರ್ಥನಾ ಸಮಾಜ' ಸ್ಥಾಪಿಸಿದರು. ಅದೇ ರೀತಿ ಮದ್ರಾಸಿನಲ್ಲಿ **ಶ್ರೀಧನಾಳ್ ನಾಯ್ಡು** 'ವೇದಸಮಾಜ' ಸ್ಥಾಪಿಸಿದರು.







ಕೇರಳದಲ್ಲಿ **ಶ್ರೀನಾರಾಯಣ-ಗುರು**(1856-1927) ರವರ ನೇತೃತ್ವದಲ್ಲಿ ಒಂದು ಸಮಾಜ ಸುಧಾರಣಾ ಆಂದೋಲನ ಆರಂಭವಾಯಿತು; ಆಂಧ್ರದಲ್ಲಿ **ವೀರೇಶಲಿಂಗಮ್** ಸಾಮಾಜಿಕ ಅನ್ಯಾಯದ ವಿರುದ್ಧ ಚಳುವಳಿ ಆರಂಭಿಸಿದರು.



ಪಂಜಾಬಿನಲ್ಲಿ **ಸ್ವಾಮಿ ದಯಾನಂದ ಸರಸ್ವತಿ** 'ಆರ್ಯಸಮಾಜ' ಸ್ಥಾಪಿಸಿದರು. **ಸರ್‌ಸೈಯದ್ ಅಹ್ಮದ್ ಖಾನ್** ಅಲೀಘಡದಲ್ಲಿ ಒಂದು ಕಾಲೇಜು ಆರಂಭಿಸಿದರು. ಮುಂದೆ ಈ ದೇವಬಂದ್ ಇಸ್ಲಾಮಿ ಶಾಲೆ ಸಮರಶೀಲ ಬ್ರಿಟಿಶ್ ವಿರೋಧಿ ಚಟುವಟಿಕೆಗಳ ಒಂದು ಕೇಂದ್ರವಾಯಿತು.



ಸ್ವಾಮಿವಿವೇಕಾನಂದ(1863-1902) ಯುವಕರಲ್ಲಿ ಸ್ಫೂರ್ತಿ ತುಂಬಿದ ಧಾರ್ಮಿಕ, ತತ್ವಜ್ಞಾನ, ಸಾಂಸ್ಕೃತಿಕ ಕ್ಷೇತ್ರದ ಮಹಾನ್ ವ್ಯಕ್ತಿ. ದಮನಕ್ಕೊಳಗಾದ ಮಾನವಕುಲದ ವಕ್ತಾರ ಹಾಗೂ 'ಶೂದ್ರ ರಾಜ್ಯ' ದ ಪ್ರತಿಪಾದಕ.

ಈ ಅವಧಿಯಲ್ಲಿ ಸಮಾನತೆಯ ಭಾವನೆಗಳನ್ನು ಅಭಿವ್ಯಕ್ತಿಸಿದ ಹಲವಾರು ಲೇಖಕರು ಎಲ್ಲಾ ಭಾರತೀಯ ಭಾಷೆಗಳಲ್ಲಿ ಬೆಳಕಿಗೆ ಬಂದರು.


1876ರಲ್ಲಿ ಭಾರತೀಯ ವಿಜ್ಞಾನ ವಿಕಾಸ ಸಂಘ(Indian Association for Cultivation of Science)ವನ್ನು ಡಾ|| ಮಹೇಂದ್ರಲಾಲ್ ಸರ್ಕಾರ್ ಆರಂಭಿಸಿದರು. ವಿಜ್ಞಾನ ರಂಗದಲ್ಲಿ ಮೂಲಭೂತ ಸಂಶೋಧನೆಗಾಗಿ ದೇಶದಲ್ಲಿ ಆರಂಭವಾದ ಮೊದಲ ಸಂಸ್ಥೆಯಿದು. ನಂತರ ಪ್ರಖ್ಯಾತರಾದ ವಿಜ್ಞಾನಿ ಸಿ.ವಿ.ರಾಮನ್ ಇಲ್ಲೇ ದುಡಿದವರು.

ಅದೇ ವರ್ಷ ಕಲ್ಕತ್ತೆಯಲ್ಲಿ 'ಇಂಡಿಯನ್ ಅಸೋಸಿಯೇಷನ್' ಸ್ಥಾಪನೆಯಾಯಿತು. ಜಮೀನುದಾರಿ ವ್ಯವಸ್ಥೆಯ ವಿರುದ್ಧ ಪ್ರಚಾರ ನಡೆಸುವಲ್ಲಿ ಇದು ನೇತೃತ್ವ ನೀಡಿತು. ಇದಕ್ಕೆ ಮೊದಲು 'ಬಾಂಬೆ ಅಸೋಸಿಯೇಷನ್', 'ಮದ್ರಾಸ್ ನೇಟಿವ್ ಅಸೋಸಿಯೇಷನ್' ಗಳೂ ಆರಂಭವಾಗಿದ್ದವು. 1870 ರಲ್ಲಿ ಪೂಣೆಯಲ್ಲಿ ರಾನಡೆ, ಗೋಖಲೆ ಮುಂತಾದವರು ಮುಂತಾದವರು 'ಸಾರ್ವಜನಿಕ ಸಭಾ' ಸ್ಥಾಪಿಸಿದರು. ಪಂಜಾಬಿನಲ್ಲಿ 'ಇಂಡಿಯನ್ ನ್ಯಾಶನಲ್ ಸೊಸೈಟಿ' ಸ್ಥಾಪನೆಯಾಯಿತು.

1876-1878 ರ ನಡುವೆ ಬ್ರಿಟಿಶ್ ಆಳರಸರು ಹಲವು ದಮನಕಾರಿ ಶಾಸನಗಳನ್ನು ತಂದಾಗ-ಇದರ ವಿರುದ್ಧ 1878 ರಲ್ಲಿ ಇಂಡಿಯನ್ ಅಸೋಸಿಯೇಷನ್ ಕಲ್ಕತ್ತೆಯಲ್ಲಿ ಒಂದು ದೊಡ್ಡ ಪ್ರತಿಭಟನೆ ಸಂಘಟಿಸಿತು.

1883 ರಲ್ಲಿ ವೈಸರಾಯ್ ರಿಪ್ಪನ್‌ನ ಗೃಹ ಕಾರ್ಯದರ್ಶಿ ಕರ್ಟ್‌ನೇ ಇಲ್ಬರ್ಟ್ ಭಾರತೀಯ ಮ್ಯಾಜಿಸ್ಟ್ರೇಟರೂ ಯುರೋಪಿಯನ್ ಅಪರಾಧಿಗಳ ವಿಚಾರಣೆ ನಡೆಸಲು ಮೊದಲ ಬಾರಿಗೆ ಅವಕಾಶ ನೀಡುವ ಮಸೂದೆಯೊಂದನ್ನು ಮಂಡಿಸಿದರು. ಇದಕ್ಕೆ ಯುರೋಪಿಯನ್ನರು ಹಾಗೂ ಆಂಗ್ಲೋ-ಇಂಡಿಯನ್‌ರಿಂದ ಭಾರೀ ಪ್ರತಿಭಟನೆ ಬಂತು. ಬ್ರಿಟಿಶ್ ಪ್ಲಾಂಟರುಗಳು ಪ್ರತಿಭಟನೆಯ ಮುಂಚೂಣಿಯಲ್ಲಿದ್ದರು. ಇಂಡಿಯನ್ ಅಸೋಸಿಯೇಷನ್ ಈ ಮಸೂದೆಗೆ ಬೆಂಬಲವಾಗಿ ಬೃಹತ್ ಚಳುವಳಿ ಸಂಘಟಿಸಿತು.

ಈ ಹಿನ್ನೆಲೆಯಲ್ಲಿ 1883 ರಲ್ಲಿ ಕಲ್ಕತ್ತೆಯಲ್ಲಿ ಮೊದಲ ಭಾರತ ರಾಷ್ಟ್ರೀಯ ಸಮ್ಮೇಳನ ನಡೆಯಿತು. 1885 ರಲ್ಲಿ ಅದರ ಎರಡನೇ ಸಮ್ಮೇಳನ ನಡೆಯುವಷ್ಟರಲ್ಲಿ ಮುಂಬೈಯಲ್ಲಿ ಡಬ್ಲ್ಯು.ಸಿ.ಬ್ಯಾನರ್ಜಿ ಮತ್ತಿತರರು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ ಅಧಿವೇಶನವನ್ನು ಸಂಘಟಿಸಿದರು.



ಆರಂಭದಿಂದಲೇ ಕಾಂಗ್ರೆಸ್‌ನ ಸ್ಥಾಪನೆಗೆ ಅಲನ್ ಬಿಕ್ಟೇವಿಯನ್ ಹ್ಯೂಮ್, ವಿಲಿಯಂ ವೆಟ್ಟರ್‌ಬರ್ಗ್ ಇದಕ್ಕೆ ನೆರವಾದರು. ಆಗಿನ ವೈಸ್‌ರಾಯ್ ಲಾರ್ಡ್ ಡಫರಿನ್ ಪರೋಕ್ಷ ಬೆಂಬಲ ಒದಗಿಸಿದ. ಭಾರತದಲ್ಲಿ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಸಾಮೂಹಿಕ ಕ್ರೋಧ, ಭುಗಿಲೇಳದಂತೆ ತಡೆಯಲು ಈ ಕಾಂಗ್ರೆಸನ್ನು ಒಂದು 'ಸುರಕ್ಷಾ ಕವಾಟ' ವಾಗಿ ಬಳಸುವುದು ಅವರ ಉದ್ದೇಶವಾಗಿತ್ತು.


(ಮುಂದುವರಿಯುವುದು)

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು ... ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು ಎಂಬುದನ್ನು ಸ್ವಾತಂತ್ರ್ಯ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈಗಾಗಲೇ ನೀವು ಕೆಲವು ಪ್ರಮುಖ ಕಮ್ಯುನಿಸ್ಟ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈಗಾಗಲೇ ನೀವು ಕೆಲವು ಪ್ರಮುಖ ಕಮ್ಯುನಿಸ್ಟ ಸ್ವಾತಂತ್ರ್ಯ ಹೋರಾಟಗಾರರ

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು

ಹರ್ಕಿಶನ್ ಸಿಂಗ್ ಸುರ್ಜಿತ್, ಲಕ್ಷ್ಮಿ ಸೆಹಗಲ್ ಹಾಗೂ ಗಣೇಶ್ ಘೋಷ್ ಅವರ ನೆನಪುಗಳನ್ನು ಓದಿರುವಿರಿ.

1942 ರ ಕ್ವಿಟ್ ಇಂಡಿಯಾ ಚಳುವಳಿಯ ವೇಳೆಯಲ್ಲಿ ಬೂರ್ಜ್ವಾ-ಭೂಮಾಲೀಕ ನೇತೃತ್ವದ ಕಾಂಗ್ರೆಸ್‌ಗಿಂತ ಭಿನ್ನ ನಿಲುವು ತಳೆದು ತಾತ್ಕಾಲಿಕವಾಗಿ ಸಾಮ್ರಾಜ್ಯಶಾಹಿ ವಿರೋಧಿ ಜನಸಮೂಹದಿಂದ ದೂರನಿಲ್ಲಬೇಕಾಗಿ ಬಂದ ಕಮ್ಯುನಿಸ್ಟರು ಹಲವರ ಟೀಕೆಗೆ ಒಳಗಾಗಬೇಕಾಯಿತು. ಆದರೆ ನಂತರದ ಬೆಳವಣಿಗೆಗಳು, ಕಾಂಗ್ರೆಸ್‌ನ ರಾಜೀ ಮನೋಭಾವ ಹಲವು ಸ್ವಾತಂತ್ರ್ಯ ಹೋರಾಟಗಾರರನ್ನು ಕಮ್ಯುನಿಸ್ಟರ ನಿಲುವಿನ ಬಗ್ಗೆ ವಸ್ತುನಿಷ್ಠವಾಗಿ ಯೋಚಿಸುವಂತೆ ಮಾಡಿತು. ಸ್ವಾತಂತ್ರ್ಯಾನಂತರ ಕಾಂಗ್ರೆಸ್ಸಿಗರು ಹಿಡಿದ ದಾರಿ ಅವರಿಗೆ ಕಮ್ಯುನಿಸ್ಟರ ನಿಲುವನ್ನು ಮನದಟ್ಟು ಗೊಳಿಸಿತು. ಇದಕ್ಕೊಂದು ಉದಾಹರಣೆ ದೊಡ್ಡ ಬಳ್ಳಾಪುರದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮುಗುವಾಳಪ್ಪನವರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸ್ವಾತಂತ್ರ್ಯಾನಂತರ ಕಮ್ಯುನಿಸ್ಟರಾದ ಅವರ ಅನುಭವಗಳನ್ನು ಈ ಬಾರಿ ಓದಿ.



"ಕೇವಲ ಆಡಂಬರದ ಉತ್ಸವವಾಗಿ ಕಾಣುತ್ತಿದೆ"

ಸ್ವಾತಂತ್ರ್ಯದ ಸ್ವರ್ಣಜಯಂತಿ ಆಚರಿಸುತ್ತಿರುವ ಸಂದರ್ಭದಲ್ಲಿ ಈ ಹೋರಾಟದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ ನಿಮಗೆ ಏನನ್ನಿಸುತ್ತಿದೆ ಎಂದು 'ಐಕ್ಯರಂಗ' ಕಾಂ. ಮುಗುವಾಳಪ್ಪನವರನ್ನು ಪ್ರಶ್ನಿಸಿದಾಗ ಅವರ ಉತ್ತರವಿದು. ನಿರುದ್ಯೋಗ, ಬಡತನ ಮಾಯವಾಗುತ್ತದೆ, ಸಮಾಜ ಪ್ರಗತಿ ಕಾಣುತ್ತದೆ ಎಂಬ ನಿರೀಕ್ಷೆ ಕನಸಾಗಿದೆ. ಈ ಬಗ್ಗೆ ವಿಚಾರ-ವಿಶ್ಲೇಷಣೆ ಮಾಡುವ ಬದಲು ಈಗಿನ ಸಭೆ ಸಮಾರಂಭಗಳು ಕೇವಲ ಆಡಂಬರವಾಗಿ ಕಾಣುತ್ತವೆ ಎಂದು ಅವರು ಬೇಸರದಿಂದಲೇ ನುಡಿದರು.

1928 ರಲ್ಲಿ ಇನ್ನೂ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಆಂದೋಲನದತ್ತ ಆಕರ್ಷಿತರಾಗಿದ್ದವರು ಮುಗುವಾಳಪ್ಪನವರು. ಆಗಿನ ವಾತಾವರಣವೇ ಹಾಗಿತ್ತು. ಶಾಲೆಯಲ್ಲಿ ಶಿಕ್ಷಕರ ಪ್ರೋತ್ಸಾಹ, ತಂದೆಯವರಿಗೂ ಗಾಂಧೀಜಿ ತತ್ವದಲ್ಲಿ ನಂಬಿಕೆ, ಅವರು ಖಿಲಾಫತ್ ಚಳುವಳಿಯಲ್ಲಿ ಭಾಗವಹಿಸಿದ್ದವರು.

ಮೈಸೂರು ಸಂಸ್ಥಾನದಲ್ಲಿ 1930 ರ ವೇಳೆಗೆ ರಚನೆಗೊಂಡ ಕಾಂಗ್ರೆಸ್ ಸೇವಾ ದಳದಲ್ಲಿ ತರಬೇತಿ ಮತ್ತು ಸ್ವತಃ ಇತರರಿಗೆ ತರಬೇತು ನೀಡುವ ಮಟ್ಟ ತಲುಪಿದ **ಮುಗುವಾಳಪ್ಪನವರಿಗೆ ನೆಹರೂ, ಪಟೇಲ್ ಮತ್ತಿತರ ಮುಖಂಡರನ್ನು ಕಾಣುವ, ಮಾತು ಕೇಳುವ ಅವಕಾಶವೂ ದೊರೆಯಿತು.** ಆದರೆ ಪಟೇಲರ ನಿಲುವು ಅದೇಕೋ ಅವರಿಗೆ ಹಿಡಿಸಲಿಲ್ಲ. ಪತ್ರಿಕೆಯಲ್ಲಿ ಇತರ ದೇಶಗಳ ಆಗು ಹೋಗುಗಳ ಬಗ್ಗೆಯೂ ಆಸಕ್ತಿಯಿಂದ ಗಮನಿಸುತ್ತಿದ್ದ ಮುಗುವಾಳಪ್ಪ ಮತ್ತು ಇತರ ಸಂಗಾತಿಗಳು ಇಟಲಿಯಲ್ಲಿ ಬೆಳೆಯುತ್ತಿದ್ದ ಮುಸೋಲೋನಿಯ ಫ್ಯಾಸಿಸ್ಟ್ ಪ್ರತಿರೋಧದಿಂದಲೂ ಸ್ಫೂರ್ತಿ ಪಡೆದು ಅಲ್ಲಿರುವ ದೇಶ ಪ್ರೇಮಿ ಗಳ ಹೆಸರಲ್ಲಿ ಸಂಘ ಕಟ್ಟಿದರು. ಇಂತಹ ಹೆಸರಿನ ಸಂಘವೇಕೆ ಎಂದು ಕಾಂಗ್ರೆಸ್ ಮುಖಂಡರು ಕೇಳಿದಾಗ ವಿಚಿತ್ರ ಅನಿಸಿತು.

ಅದೇನೇ ಇರಲಿ, ಮೈಸೂರು ಸಂಸ್ಥಾನದಲ್ಲೂ ದೇಶದ ಇತರೆಡೆಗಳಂತೆ ಸ್ವಾತಂತ್ರ್ಯ ಹೋರಾಟ ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿತ್ತು. ಮುಗುವಾಳಪ್ಪ ಈಗ ಕಾಂಗ್ರೆಸ್ಸಿನ ಸಕ್ರಿಯ ಕಾರ್ಯಕರ್ತರಾಗಿದ್ದರು. ದೊಡ್ಡಬಳ್ಳಾಪುರದಲ್ಲಿ ಖಾದಿ ಮಾರಾಟ ಮಳಿಗೆ ಪ್ರಾರಂಭಿಸಿದರು. ಖಾದಿ ನೇಯ್ಗೆ ಕೇಂದ್ರವೂ ಸ್ಥಾಪನೆಗೊಂಡಿತು: 1937 ರಲ್ಲಿ 'ಕರ ನಿರಾಕರಣೆ' ಸತ್ಯಾಗ್ರಹದಲ್ಲೂ ಭಾಗವಹಿಸಿ ಬಂಧನ-ಬಿಡುಗಡೆ ಆಯಿತು. ಅದರ ಮೊದಲು ಫಾರೆಸ್ಟ್ ಸತ್ಯಾಗ್ರಹದಲ್ಲೂ ಭಾಗವಹಿಸಿದರು.

ಸ್ವಾತಂತ್ರ್ಯ ಹೋರಾಟದ ಪ್ರಭಾವದ ಬಗ್ಗೆ ಮಾತನಾಡುತ್ತಾ ಮುಗುವಾಳಪ್ಪನವರು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ಸಿನ ಆರಂಭದ ಮುಖಂಡರಲ್ಲಿ ಪ್ರಮುಖರಾದ ಸಿದ್ಧಲಿಂಗಯ್ಯನವರನ್ನು ನೆನಪಿಸಿಕೊಂಡರು. ಮೊದಮೊದಲು ಸೇವಾದಳದಲ್ಲಿ ಕವಾಯತು ಮಾಡಿ ಬ್ರಿಟಿಶರನ್ನು ಓಡಿಸುತ್ತೀರೋ ಎಂದು ನಗೆಯಾಡುತ್ತಿದ್ದ ಸಿದ್ಧಲಿಂಗಯ್ಯನವರೇ ಅಮೆರಿಕಾಕ್ಕೆ ಹೋಗಿಬಂದ ಮೇಲೆ ಸ್ವತಃ ಕಾಂಗ್ರೆಸ್ ಕಟ್ಟುವಲ್ಲಿ ತೊಡಗಿದರು. ಬಹುಶಃ ಅಮೆರಿಕಾದಲ್ಲಿನ ಸ್ವಂತ ಅನುಭವ ಇದಕ್ಕೆ ಕಾರಣ ಎನ್ನುತ್ತಾರೆ ಮುಗುವಾಳಪ್ಪನವರು. 1938 ರಲ್ಲಿ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ಧ್ವಜ ಸತ್ಯಾಗ್ರಹದ ಮೂಲಕ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಪ್ರಭಾವ ವ್ಯಾಪಕವಾಗತೊಡಗಿತು. ಮುಗುವಾಳಪ್ಪನವರಂತಹ ಯುವಕರ ಉತ್ಸಾಹವೂ ಹೆಚ್ಚತೊಡಗಿತು.

ಸುಭಾಷ್ ಚಂದ್ರ ಬೋಸ್‌ರು ಗಾಂಧೀಜಿಯ ಅಭ್ಯರ್ಥಿಯನ್ನು ಸೋಲಿಸಿ ಎರಡನೇ ಬಾರಿ ಕಾಂಗ್ರೆಸ್ ಅಧ್ಯಕ್ಷರಾದ ತ್ರಿಪುರೀ ಅಧಿವೇಶನವನ್ನು ಕಾಂ|| ಮುಗುವಾಳಪ್ಪ ನೆನಪಿಸಿಕೊಂಡರು. ಅದರಲ್ಲಿ ಅವರು ಭಾಗವಹಿಸಿದರು.

1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ದೇಶವನ್ನೆಲ್ಲಾ ವ್ಯಾಪಿಸಿದಾಗ ಸಹಜವಾಗಿ 29 ವರ್ಷದ ಯುವಕ ಮುಗುವಾಳಪ್ಪನವರೂ ಅದರಲ್ಲಿ ಭಾಗವಹಿಸಿ ಭಾರತ ರಕ್ಷಣಾ ಕಾಯ್ದೆಯ ಪ್ರಕಾರ ಬಂಧಿಸಲ್ಪಟ್ಟರು. **ಆದರೆ ಈ ಜೈಲು ಅನುಭವ ಹಿಂದಿನ ಜೈಲು ಅನುಭವಕ್ಕಿಂತ ಭಿನ್ನವಾಗಿತ್ತು.**

ಇವರ ಜೊತೆಗೆ ಪ್ರಮುಖ ಕಮ್ಯುನಿಸ್ಟ್ ಮುಖಂಡ ಎಂ.ಎಸ್.ರಾಮರಾವ್‌ರವರೂ ಅದೇ ಜೈಲಿನಲ್ಲಿದ್ದರು. ಕಾಂಗ್ರೆಸ್ಸಿಗರು 'ಕ್ವಿಟ್ ಇಂಡಿಯಾ' ಚಳುವಳಿಯನ್ನು ವಿರೋಧಿಸಿದ ಕಮ್ಯುನಿಸ್ಟರ ನಿಲುವನ್ನು ಟೀಕಿಸುವಾಗ ರಾಮರಾವ್ ದೃಢವಾಗಿ ಸಮರ್ಥಿಸಿಕೊಳ್ಳುತ್ತಿದ್ದ ರೀತಿ ಮುಗುವಾಳಪ್ಪನವರನ್ನು ಪ್ರಭಾವಿತಗೊಳಿಸಿತು. ಎರಡನೇ ಮಹಾಯುದ್ಧದ ಸುದ್ದಿಗಳು, ರಾಮರಾವ್‌ರ ವಾದಗಳು, ಯುದ್ಧ ಮುಗಿದ ನಂತರದ ಬೆಳವಣಿಗೆಗಳು, ಕಾಂಗ್ರೆಸ್‌ನ ಸಂಧಾನ ನೀತಿ ಇನ್ನೂ ಹಲವಾರು ಯುವಕರಂತೆ ಮುಗುವಾಳಪ್ಪನವರನ್ನು ಹೊಸ ಚಿಂತನೆಗೆ, ಅಧ್ಯಯನಕ್ಕೆ ಹಚ್ಚಿದವು. ಸ್ವಾತಂತ್ರ್ಯಾನಂತರದ ಕಾಂಗ್ರೆಸ್‌ನ ಚಟುವಟಿಕೆಗಳೂ, ಗುಂಪುಗಾರಿಕೆ ಅವರನ್ನು ಈ ದಿಕ್ಕಿನಲ್ಲಿ ಯೋಚಿಸುವಂತೆ ಮಾಡಿದವು. ಅಸೆಂಬ್ಲಿಯಲ್ಲೊಂದು ಸ್ಥಾನ ಪಡೆಯುವುದಕ್ಕಾಗಿ ಸಿದ್ಧಲಿಂಗಯ್ಯನವರು ಕಾಂಗ್ರೆಸ್ಸಿಗರೇ ಅಲ್ಲ ಎಂಬ ಪ್ರಚಾರ ತಮಗೆ ಬಹಳ ಬೇಸರ ವುಂಟು ಮಾಡಿತು ಎಂದರು ಮುಗುವಾಳಪ್ಪನವರು. 1957 ರ ಸಾರ್ವತ್ರಿಕ ಚುನಾವಣೆಗಳಾಗುವವರೆಗೂ ಮುಗುವಾಳಪ್ಪನವರು ಕಾಂಗ್ರೆಸ್ಸಿಗರಾಗಿಯೇ ಇದ್ದರು-ಆದರೆ ಇತರ ಕಾಂಗ್ರೆಸ್ಸಿಗರಂತೆ ಅಲ್ಲ. 1958 ರಲ್ಲಿ **ಕೊನೆಗೂ ಅತ್ಯಂತ ಬೇಸರದಿಂದ ಅವರು ಕಾಂಗ್ರೆಸ್ ತ್ಯಜಿಸಿದರು.** ಕಮ್ಯುನಿಸ್ಟ್ ಪಕ್ಷ ಸೇರಿದರು. ರೈತರ ಸಮಸ್ಯೆಗಳನ್ನೆತ್ತಿ ಹೋರಾಟ ಮಾಡುತ್ತಾ ಒಬ್ಬ ಪ್ರಮುಖ ರೈತ ಮುಖಂಡರಾಗಿ ಬೆಳೆದು ಬಂದರು.

1962 ರಲ್ಲಿ ತ್ರಿಶೂರಿನಲ್ಲಿ ನಡೆದ ಅಖಿಲಭಾರತ ಕಿಸಾನ್ ಸಭಾದ ಸಮ್ಮೇಳನದಲ್ಲಿ ಭಾಗವಹಿಸಿ ಬಂದ ಇವರು ನಂತರ ಒಬ್ಬ ಪ್ರಮುಖ ರೈತ ಮುಖಂಡರಾಗಿ ಬೆಳೆದುಬಂದರು. 1963 ರ ತಾಲ್ಲೂಕು ಬೋರ್ಡ್ ಚುನಾವಣೆಗಳಲ್ಲಿ ದೊಡ್ಡಬಳ್ಳಾಪುರದಲ್ಲಿ ಮೂರು ಸ್ಥಾನಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಮುಗುವಾಳಪ್ಪನವರೂ ತಮ್ಮ ಸಂಗಾತಿಗಳ ಒತ್ತಾಯದ ಮೇಲೆ ಸ್ಪರ್ಧಿಸಿದ್ದರು. ಹಣಬಲ ಇಲ್ಲದಿದ್ದರೂ ಮೂರೂ ಸ್ಥಾನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಸೋಲಿಸಿ ಕಮ್ಯುನಿಸ್ಟ್ ಅಭ್ಯರ್ಥಿಗಳು ಗೆದ್ದು ಬಂದ ಸಂದರ್ಭವನ್ನು ಸ್ಮರಿಸಿಕೊಳ್ಳುತ್ತಾ "ನಮಗೆ 20 ರೂ. ಸಂಗ್ರಹಿಸಿ ಕೊಡಲಾಗಿತ್ತು. ಆದರೆ ಅದೂ ಖರ್ಚಾಗದೇ ಉಳಿಯಿತು" ಎಂದರು ಮುಗುವಾಳಪ್ಪನವರು. ದೊಡ್ಡ ಬೆಳವಂಗಲ ಹೋಬಳಿಯ ಹಳ್ಳಿಯೊಂದರ ಹರಿಜನರ 30 ಕುಟುಂಬಗಳು ಒಂದು ದಿನದಕೂಲಿ ನೀಡಲು ಮುಂದೆ ಬಂದರು.

ಮುಂದೆ ಭೂಮಾಲಕರ ವಶದಲ್ಲಿದ್ದ ಗೋಮಾಳವನ್ನು ಬಿಡಿಸಿಕೊಳ್ಳಲು **"ಹುಲಿಗುಂಟೆ ಹೋರಾಟ', ದೊಡ್ಡಬಳ್ಳಾಪುರ ಆರೋಡಿ ಗ್ರಾಮದಲ್ಲಿ ಜೋಡಿ** ಇನಾಮು ರದ್ಧತಿಗೆ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ನಡೆಸಿದ ಹೋರಾಟ ಅವರ ಮಟ್ಟಿಗೆ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆಯೇ ಆಗಿದ್ದವು. ಆರೋಡಿ ಗ್ರಾಮದ ರೈತರು ಭೂ ಮಾಲಿಕನಿಗೆ ಹೆದರಿ ಸಭೆಗೆ ಬರಲು ಹಿಂಜರಿದಾಗ ಒಂದು ಪುಟ್ಟ ಲೈಟ್ ಹಿಡಿದು ಏಕಾಂಗಿಯಾಗಿ ಕಾದು ಕೊನೆಗೆ ಸಭೆ ಯಶಸ್ವಿಯಾಗಿ ನಡೆದದ್ದನ್ನು, ಹೋರಾಟ ಯಶಸ್ವಿಯಾಗಿ ಜೋಡಿ ಇನಾಮು ರದ್ದಾದನ್ನು ಅವರು ಸ್ಮರಿಸಿಕೊಂಡರು.

1979 ರಲ್ಲಿ ಮುಗುವಾಳಪ್ಪನವರು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ರಾಯಚೂರು, ಚಿತ್ರದುರ್ಗ, ಶಿವಮೊಗ್ಗ ಇತ್ಯಾದಿ ಕಡೆಗಳಲ್ಲಿ ಸಂಚರಿಸಿದರು: ಈಗಲೂ 84 ರ ಇಳಿವಯಸ್ಸಿನಲ್ಲಿ ದೊಡ್ಡ ಬಳ್ಳಾಪುರದಲ್ಲಿ ರೈತರ ನಡುವೆ ದುಡಿಯುತ್ತಿದ್ದು, ರೈತ-ಕಾರ್ಮಿಕರ ಪಕ್ಷ ಸಿಪಿಐ(ಎಂ)ನ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ.

ಗಾಂಧೀಜಿಯವರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ ಮುಗುವಾಳಪ್ಪನವರಿಗೆ ಕಿಸಾನ್ ಸಭಾ ಸೇರಿದ ಮೇಲೆ ಗಾಂಧೀಜಿಯ ತತ್ವಗಳ ಬಗ್ಗೆ ಏನನ್ನಿಸಿತು? 'ಐಕ್ಯರಂಗ' ದ ಈ ಪ್ರಶ್ನೆಗೆ ಅವರು ಚುಟುಕಾಗಿ ಉತ್ತರಿಸಿದರು - "ಅವು ಸರಿಯಲ್ಲವೆಂದೆನಿಸಿತು"

ಗಾಂಧೀಜಿಯವರ ಕೊಲೆ ಪೂರ್ವ ಯೋಜಿತವಾಗಿತ್ತು ಎನ್ನುವ ಆವರು ಆರ್.ಎಸ್.ಎಸ್. ಬಗ್ಗೆ ಬಹಳ ಕ್ರೋಧದಿಂದಲೇ ಮಾತನಾಡುತ್ತಾರೆ. ದೊಡ್ಡಬಳ್ಳಾಪುರದಲ್ಲೂ ಅವರು 'ಶಾಖೆ'ಗಳ ಮೂಲಕ ಮತೀಯವಾದವನ್ನು ಪ್ರಚಾರ ಮಾಡುತ್ತಿದ್ದಾಗ ಅದನ್ನು ತಡೆಯಲು ಪರ್ಯಾಯ ಯುವಸಂಘಟನೆ ಕಟ್ಟಿದವರು ಮುಗುವಾಳಪ್ಪನವರು. 1945 ರ ವೇಳೆಗೆ ದೊಡ್ಡ ಬಳ್ಳಾಪುರದಲ್ಲಿ ಆರ್.ಎಸ್.ಎಸ್. ಪ್ರಭಾವ ಹರಡಲಾರಂಭಿಸಿದಾಗ ಕಾಂಗ್ರೆಸ್ ಮನೆಗಳ ಮಕ್ಕಳೂ ಈ 'ಶಾಖೆ'ಗಳಲ್ಲಿ ಭಾಗವಹಿಸುವುದನ್ನು ಕಂಡ ಮುಗು ವಾಳಪ್ಪನವರು, ರುಮಾಲೆ ಚನ್ನಬಸವಯ್ಯ ನವರು ಸುಮಾರಾಗಿ ಏಕಾಂಗಿಯಾಗಿಯೇ ಸೇವಾದಳವನ್ನು ಬೆಳೆಸಿ ಆರ್.ಎಸ್.ಎಸ್. ನ್ನು ಮೂಲೆ ಗುಂಪುಮಾಡಿದರು. ಗಾಂಧೀಜಿ ಕೊಲೆಯ ಬಗ್ಗೆ 5-6 ತಿಂಗಳ ಮೊದಲೇ ಆರ್.ಎಸ್.ಎಸ್.ನವರಿಗೆ ಗೊತ್ತಿತ್ತು. ಗಾಂಧೀಜಿ ಕೊಲೆಯಾದಾಗ ಅವರು ಸಿಹಿತಿಂಡಿ ಹಂಚಿದರು ಎಂದು ಮುಗು ವಾಳಪ್ಪನವರು ನೆನಪಿಸಿದರು. ಅದೇ ಆರ್.ಎಸ್.ಎಸ್.ನ ಕಟ್ಟಾ ಅನುಯಾಯಿ ಅಡ್ವಾಣಿಯವರು ಈಗ ಗಾಂಧೀಜಿಯ ಬಗ್ಗೆ ಮಾತನಾಡುವಾಗ ತಮಾಷೆಯೆನಿಸು ತ್ತದೆಯಲ್ಲವೇ?

ಸ್ವತಂತ್ರ ಭಾರತದ ಮುಂದಿನ ದಾರಿ ಯಾವುದು? ಈ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕಮ್ಯುನಿಸ್ಟರಾದ ಮುಗುವಾಳಪ್ಪನವರಿಗೆ ಯಾವುದೇ ಗೊಂದಲವಿಲ್ಲ, ಇತರ ಹಲವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಂತೆ ಹತಾಶೆಯಿಲ್ಲ. ಎಡ ಪಕ್ಷಗಳ ಪ್ರಬಲವಾದ ಬೆಳವಣಿಗೆ, ಸಾಮೂಹಿಕ ಹೋರಾಟಗಳ ಮುನ್ನಡೆ ಇವೇ ಈ ದೇಶದ ಜ್ವಲಂತ ಸಮಸ್ಯೆಗಳಿಗೆ ಇರುವ ಏಕೈಕ ಪರಿಹಾರ ಎಂದರು ದೃಢವಾಗಿ ಮುಗುವಾಳಪ್ಪನವರು.

ತಾಳ ಹಾಕುವ ಹೊಟ್ಟೆ ಜುಟ್ಟಿಗೆ ಮಾತ್ರ ಆಧುನೀಕರಣದ ಮಲ್ಲಿಗೆ

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಫ್ಲೋರಾ 97 ಎಂಬ ಹೂ ಬೆಳೆಯುವ ಕಂಪನಿಗಳ ಮೂರು ದಿನಗಳ ಅದ್ದೂರಿ ಕಾರ್ಯಕ್ರಮ. ಬೆಂಗಳೂರಿನಲ್ಲಿ ಈ ತಿಂಗಳ ಮೊದಲ ವಾರದಲ್ಲಿ ನಡೆಯಿತು. ಹೂ ಬೆಳೆದು ರಫ್ತು ಮಾಡಿ ಹಣದ ಗುಡ್ಡೆ ಹಾಕುವ ಉದ್ದೇಶವುಳ್ಳ ಕಂಪನಿಗಳ ಕಾರ್ಯಕ್ರಮ ಇದು. ವಿವಿಧ ರೀತಿಯ ಹೂವುಗಳಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಎಲ್ಲಿ ಮಾರುಕಟ್ಟೆಯಿದೆ, ಹೂವುಗಳನ್ನು ಹೇಗೆ ಬೆಳೆಯಬೇಕು, ಅವುಗಳ ಗುಣಮಟ್ಟ ಹೇಗಿರಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡೆಯಿತು.

ಇದರಲ್ಲೇನು ವಿಶೇಷ ಎಂದು ಕೇಳಬಹುದು. ನಿವು ಹಾಗೆ ಮೇಲಿಂದ ನೋಡಿದರೆ ಏನೂ ವಿಶೇಷ ಕಾಣುವುದಿಲ್ಲ. ಆದರೆ ಭಾರತದ ಇಂದಿನ ನಿಜ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿದರೆ ಈ ಕಾರ್ಯಕ್ರಮದ ಸ್ವರೂಪ ಅರ್ಥವಾಗುತ್ತದೆ.

ಇದು ಉದಾರೀಕರಣದ ಫಲವಾಗಿ ಮೂಡಿ ಬಂದ ಕಾರ್ಯಕ್ರಮ. ದೇಶದ ಆರ್ಥಿಕ ಚಟುವಟಿಕೆಗಳೆಲ್ಲಾ ರಫ್ತು ಅಭಿಮುಖವಾಗುತ್ತಿರುವಾಗ ಈ ಹೂ ಬೆಳೆಯುವುದೂ ಅಂತಹ ಗುಣಲಕ್ಷಣ ತೋರಿರುವುದರಲ್ಲಿ ವಿಶೇಷವೇನಿಲ್ಲ. ಹಾಗೆ ಅಂತರಾಷ್ಟ್ರೀಯವಾಗಿ ಹೂವಿಗೆ ಬಹುದೊಡ್ಡ ಮಾರುಕಟ್ಟೆಯಿದೆ. ಜಾಗತಿಕವಾಗಿ ವರ್ಷವೊಂದಕ್ಕೆ ಸುಮಾರು 1,75,000 ಕೋಟಿ ರೂಪಾಯಿಗಳ ಬೆಲೆಯ ಹೂಗಳನ್ನು ಬಳಸುತ್ತಾರಂತೆ. ಜಾಗತಿಕ ಹೂ ವ್ಯಾಪಾರದಲ್ಲಿ ಭಾರತದ ಪಾಲು ಶೇ 1 ಕ್ಕಿಂತ ಕಡಿಮೆ. ಈ ಪಾಲನ್ನು ಹೆಚ್ಚಿಸಬೇಕೆಂಬುದೇ ಈಗ ಕೇಳಿ ಬರುತ್ತಿರುವ ದೊಡ್ಡ ಕೂಗು (ಬಂಡವಾಳಿಗರದ್ದು).

ಈಗಾಗಲೇ ಸಾವಿರಗಟ್ಟಲೆ ಕೋಟಿ ರೂಪಾಯಿಗಳ ಹೂಡಿಕೆ ಈ ಕ್ಷೇತ್ರದಲ್ಲಿ ಆಗುತ್ತಿದೆ. ಈ ಹೂಡಿಕೆ ಮಾಡುತ್ತಿರುವುದು ಕಂಪನಿಗಳು ಇದಕ್ಕಾಗಿ ಹಲವು ರಾಜ್ಯಗಳು ತಮ್ಮ ಭೂ ಕಾಯಿದೆಗಳನ್ನೇ ತಿದ್ದುಪಡಿ ಮಾಡಿವೆ. ಮಾಡುತ್ತಿವೆ.

ಹೂ ಬೆಳೆದು ದೇಶಕ್ಕೆ ಅಪಾರ ಲಾಭ ಬರುವುದಾದರೆ ಈ ದೇಶದ ಬಹುತೇಕ ಜನತೆಗೆ ಆ ಆದಾಯ ಬರುವುದಾದರೆ ಅದು ಸ್ವಾಗತಾರ್ಹವೇ. ಅಲ್ಲವೇ? ಹೌದು. ಆದರೆ, ದೇಶಕ್ಕೆ ಅಪಾರ ಲಾಭವೂ ಇದರಿಂದ ಬರುವುದಿಲ್ಲ. ಯಾವ ದೇಶದ ಜನರಿಗೂ ಅದರಿಂದ ಅನುಕೂಲವಾಗುವುದಿಲ್ಲ. ಬದಲಿಗೆ ಜನಸಾಮಾನ್ಯರಿಗೆ ಅದರಿಂದ ಹಾನಿಯೇ ಹೆಚ್ಚು.

ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ನಾವು ತಕ್ಕ ಮಟ್ಟಿಗಿನ ಸ್ವಾವಲಂಬನೆ ಹೊಂದಿದ್ದವು. ಈಗ ಉದಾರೀಕರಣದಿಂದ ಈ ಸ್ವಾವಲಂಬನೆ ಹಾಳಾಗುತ್ತಿದೆ. ಈ ಹೂ ಕೃಷಿ ನಮ್ಮ ಆಹಾರ ಸ್ವಾವಲಂಬನೆ ಹಾಳು ಮಾಡಲು ಕೊಡುಗೆ ನೀಡಲಿದೆ.

ಮೊದಲನೇಯದಾಗಿ ಭೂ ಕಾಯಿದೆಗಳ ತಿದ್ದುಪಡಿಯಿಂದಾಗಿ ಬಡ ರೈತನ ಜಮೀನನ್ನು ಕಂಪನಿಗಳು ಕಬಳಿಸುತ್ತವೆ. ಈ ರೈತ ಬೀದಿಪಾಲಾಗುತ್ತಾನೆ. ಎರಡನೆಯದಾಗಿ ಆಹಾರ ಧಾನ್ಯಗಳನ್ನು ಬೆಳೆಯಲು ಉಪಯೋಗವಾಗಬೇಕಾದ ಭೂಮಿ ಹೂ ಬೆಳೆಯಲು ಉಪಯೋಗವಾಗುತ್ತದೆ. ಮೂರನೇಯದಾಗಿ ಆಹಾರ ಧಾನ್ಯಗಳನ್ನು ಬೆಳೆಯಲು ಹೆಚ್ಚಿನ ಕ್ರಮ ಬೇಕಾಗುತ್ತದೆ. ಅಂದರೆ ಹೆಚ್ಚಿನ ಕೃಷಿ ಕೂಲಿಗಾರರಿಗೆ ಉದ್ಯೋಗ ದೊರೆಯುತ್ತದೆ. ಹೂ ಬೆಳೆಯುವುದರಿಂದ ನಿರುದ್ಯೋಗ ಹೆಚ್ಚಾಗುತ್ತದೆ.

ಅಷ್ಟಕ್ಕೂ ವಿದೇಶಗಳಲ್ಲಿ ಭಾರತದ ಹೂಗಳಿಗೆ ಅಪಾರ ಬೇಡಿಕೆಯೇನೂ ಇಲ್ಲ, ಯಾಕೆಂದರೆ ಭಾರತದಲ್ಲಿ ಬೆಳೆಯುವ ಹೂಗಳ ಗುಣಮಟ್ಟ ಉತ್ತಮವಾದದ್ದಲ್ಲ.

ವಿದೇಶಿಯರು ಅಂದರೆ ಅಭಿವೃದ್ಧಿ ಹೊಂದಿದ ದೇಶಗಳವರು ಬಯಸುವ ಹೂಗಳನ್ನು ನಮ್ಮ ಕಂಪನಿಗಳು ಬೆಳೆಯಬೇಕು. ಅದರಿಂದಲೇ ತಂತ್ರಜ್ಞಾನ ಪಡೆಯಬೇಕು. ಆಗ ಮಾತ್ರ ಆ ಹೂಗಳು ಅವರಿಗೆ ಒಪ್ಪಿತ. ನಮ್ಮಲ್ಲಿ ನಾವು ಈ ದಿಸೆಯಲ್ಲಿ ತಂತ್ರಜ್ಞಾನವನ್ನು ಬೆಳೆಸಿಲ್ಲ. ಹೀಗೆ ಎಲ್ಲವೂ ಅಭಿವೃದ್ಧಿ ಹೊಂದಿದ ದೇಶಗಳಿಗೇ ಅನುಕೂಲವಾಗುವ ರೀತಿಯಲ್ಲಿ ಆಗಬೇಕಾಗುತ್ತದೆ. ಅವರ ವ್ಯವಹಾರ ಕುದುರುತ್ತದೆ.

ಈಗ ಫ್ಲೋರಾ ಎಂಬ ಕಾರ್ಯಕ್ರಮ ನಡೆದದ್ದನ್ನೇ ತೆಗೆದುಕೊಳ್ಳಿ. ನಮ್ಮ ಆಹಾರ ಬೆಳೆ ಬೆಳೆವ ರೈತರ ಸಮಸ್ಯೆಗಳು ಹಲವಿದೆ. ಈ ವಿಷಯಗಳ ಮೇಲೆ ಎಂದಾದರೂ ಇಂತಹ ಕಾರ್ಯಕ್ರಮಗಳು ನಡೆದಿವೆಯೇ? ಇಲ್ಲ. ಈಗ ಉದಾರೀಕರಣದಿಂದಾಗಿ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ ಕೇಂದ್ರಗಳಿಗೂ ಕಡಿಮೆ ಹಣ ದೊರೆಯುತ್ತಿದೆ. ಹಾಗಿರುವಾಗ ಅವುಗಳೂ ರೈತರಿಗಾಗಿ ಇಂತಹ ಕಾರ್ಯಕ್ರಮ ನಡೆಸುವಂತಿಲ್ಲ. ಹೊಟ್ಟೆ ತುಂಬಿದವರಿಗೆ ಹೂ ಬೆಳೆಯಲು ಮಾತ್ರ ಉತ್ಸಾಹ ಮತ್ತು ಪ್ರೋತ್ಸಾಹ. ಇದು ಬರಲಿರುವ ದಿನಗಳ ಸೂಚನೆಯೂ ಹೌದು.

ಈಗ ಮಿನಿ ರತ್ನಗಳು

ಈ ಹಿಂದೆ ಒಂಭತ್ತು ಅತ್ಯುತ್ತಮ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ನವರತ್ನಗಳೆಂಬ ಸ್ಥಾನ ನೀಡಿದ ಕೇಂದ್ರ ಸರ್ಕಾರ ಈಗ ಇನ್ನೂ 97 ಉತ್ತಮ ಸಾರ್ವಜನಿಕ ಘಟಕಗಳಿಗೆ ಮಿನಿ ರತ್ನಗಳೆಂಬ ಸ್ಥಾನಮಾನ ನೀಡಿದೆ.

ಉದಾರೀಕರಣದ ಹೆಸರಿನಲ್ಲಿ ಸಾರ್ವಜನಿಕ ವಲಯಕ್ಕೇ ಕೊಡಲಿಯೇಟು ನೀಡುತ್ತಿರುವ ಸಂದರ್ಭದಲ್ಲಿ ಈ ರತ್ನ ಎಂಬ ಸ್ಥರ ಅಲಂಕಾರಿಕ ಮಾತ್ರ. ಯಾಕೆಂದರೆ ಬಜೆಟ್‌ನ ಬೆಂಬಲವಿಲ್ಲದೆ, ಖಾಸಗೀ ಕರಣದ ನೆರಳಲ್ಲೇ ಬದುಕಬೇಕಾದ ಪರಿಸ್ಥಿತಿಯಿರುವಾಗ ಇಂತಹ ಸ್ಥಾನಮಾನ ಹೆಚ್ಚಿನ ಸಹಾಯ ಮಾಡದು.

ಈ ಮಿನಿರತ್ನಗಳು ಎರಡು ಗುಂಪಿಗೆ ಸೇರುತ್ತವೆ. ಕಳೆದ 3 ವರ್ಷಗಳಲ್ಲಿ ತೆರಿಗೆ ಪೂರ್ವ ವಾರ್ಷಿಕ 30 ಕೋಟಿಗೂ ಹೆಚ್ಚು ಲಾಭ ಗಳಿಸಿದ ಘಟಕಗಳು ಮೊದಲ ಗುಂಪಿಗೆ ಸೇರುತ್ತವೆ. ಕಳೆದ ಮೂರು ವರ್ಷಗಳಲ್ಲಿ ಸತತವಾಗಿ ಲಾಭ ಗಳಿಸಿದವು ಎರಡನೇ ಗುಂಪಿಗೆ ಸೇರುತ್ತವೆ.

ಈ ಘಟಕಗಳಿಗೆ ತಂತ್ರಜ್ಞಾನಕ್ಕಾಗಿ ವಿದೇಶೀ ಕಂಪನಿಗಳ ಸಹಯೋಗ, ಇತ್ಯಾದಿಗಳಲ್ಲಿ ಸ್ವಲ್ಪ ಮಟ್ಟಿಗಿನ ಸ್ವಾತಂತ್ರ್ಯ ಇರುತ್ತದಂತೆ ಆದರೆ ಒಟ್ಟಾರೆ ಉದಾರೀಕರಣದ ವಾತಾವರಣದಲ್ಲಿ ಇದರ ಲಾಭ ಎಷ್ಟು ಎಂಬ ಬಗ್ಗೆ ಸಂದೇಹ ಇದ್ದೇ ಇರುತ್ತದೆ.

ರಿಯಾಯಿತಿ ನೆರವು ಶ್ರೀಮಂತರಿಗೆ ಮಾತ್ರ

ಬಡವರು ಸೋಮಾರಿಗಳು, ಅವರು ನಿರುಪಯುಕ್ತರು. ಅವರಿಗೇಕೆ ರಿಯಾಯಿತಿ ನೆರವು ನೀಡಬೇಕು? ದೇಶದ ಅತ್ಯಂತ ಕಾರ್ಯ ಕುಶಲರಾದ ಶ್ರೀಮಂತರಿಗೆ ಮಾತ್ರ ಇವುಗಳು ದೊರೆಯಬೇಕು. ಇದು ಯಾರ ತರ್ಕ? ಕೇಂದ್ರ ಹಣಕಾಸು ಮಂತ್ರಿ ಪಿ. ಚಿದಂಬರಂ ಅವರದ್ದು. ಈ ಮಾತುಗಳನ್ನು ಅವರು ಒಡೆದು ಹೇಳಿಲ್ಲವಾದರೂ ಅವರ ಕೃತ್ಯಗಳಲ್ಲಿ ಈ ಧೋರಣೆಯನ್ನು ಸ್ಪಷ್ಟವಾಗಿ ತೋರಿದ್ದಾರೆ.

1997-98 ರ ಬಜೆಟ್ಟಿನಲ್ಲಿ ಶ್ರೀಮಂತರಿಗೆ 15,000 ಕೋಟಿಗೂ ಹೆಚ್ಚು ರಿಯಾಯಿತಿ ನೀಡಿದ ಈ ಮಹಾಶಯರು ಬಡವರಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ನೀಡಬೇಕೆಂಬ ಎಡಪಕ್ಷಗಳ ಪ್ರಸ್ತಾಪವನ್ನು ವಿರೋಧಿಸಿದ್ದಾರೆ. ಹೊಸ ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಕುಟುಂಬವೊಂದಕ್ಕೆ ಕನಿಷ್ಠ 20 ಕಿಲೋ ಗ್ರಾಂಗಳಷ್ಟು ಆಹಾರ ಧಾನ್ಯವನ್ನು ರೇಷನ್ ಮೂಲಕ ನೀಡಬೇಕೆಂದು ಎಡಪಕ್ಷಗಳು ಒತ್ತಾಯಿಸಿದ್ದವು. (ಈಗ ಬರೀ 10 ಕೆ.ಜಿ. ನೀಡಲಾಗುತ್ತಿದೆ). ಚಿದಂಬರಂ ಈ ರೇಷನ್‌ಗಾಗಿ ಹೆಚ್ಚಿನ ಸಹಾಯ ಧನ ನೀಡುವುದು ಸಾಧ್ಯವಿಲ್ಲ ಎಂದಿದ್ದಾರೆ.

ಅಂದರೆ ಹೊಸ ರೇಷನ್ ವ್ಯವಸ್ಥೆಯಲ್ಲಿ ಹೆಚ್ಚಿನ ಆಹಾರ ಧಾನ್ಯಗಳನ್ನು ನೀಡಲು ಸಾಧ್ಯವಾಗುವುದಿಲ್ಲ.

ಹೊಟ್ಟೆ ತುಂಬಿದವರಿಗೆ ಅಪಾರ ಪ್ರಮಾಣದ ರಿಯಾಯಿತಿ ನೀಡಿ ಅವರಿಂದ ಪ್ರಶಂಸಿಸಿಕೊಂಡ ಈ ಹಣಕಾಸು ಮಂತ್ರಿಗಳಿಗೆ ಬಡವರಿಗೆ ತುತ್ತು ಅನ್ನಕ್ಕೆ ಅನುಕೂಲ ಮಾಡಿಕೊಡಲೂ ಇಷ್ಟವಿಲ್ಲ.

ಹೇಗಿದೆ ಈ ಉದಾರೀಕರಣದ ಮನಸ್ಸು?

ವಿದ್ಯುತ್ ವಲಯದ ಖಾಸಗೀಕರಣದ ವಿರುದ್ಧ ಕೆಲಸಗಾರರ ರಣ ಕಹಳೆ

ವಿದ್ಯುತ್ ಯಾವುದೇ ದೇಶದ ಅಭಿವೃದ್ಧಿಗೆ ಮೂಲಮಂತ್ರ. ವಿದ್ಯುತ್ ಇಲ್ಲದೆ ಆಧುನೀಕರಣ ಸಾಧ್ಯವೇ ಇಲ್ಲ. ಆದ್ದರಿಂದಲೇ ಅಭಿವೃದ್ಧಿ ಸಾಧಿಸಬೇಕೆನ್ನುವ ದೇಶ ವಿದ್ಯುತ್ತನ್ನು ಹೇರಳವಾಗಿ ಮತ್ತು ಕಡಿಮೆ ಬೆಲೆಯಲ್ಲಿ ಉತ್ಪಾದಿಸಬೇಕು. ಅಪಾರ ಸಂಪನ್ಮೂಲಗಳನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಈ ಕೆಲಸ ಅತ್ಯಂತ ಸಂಕೀರ್ಣವಾದದ್ದು. ಭಾರತದಲ್ಲಿ ಉದಾರೀಕರಣ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ನೆಪದಲ್ಲಿ ಸ್ವಾವಲಂಬನೆಯನ್ನೇ ಹಾಳುಗೆಡವಿ ದೇಶ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕುವಂತೆ ಮಾಡುತ್ತಿದೆ.

ಇತ್ತೀಚೆಗೆ ದೆಹಲಿಯಲ್ಲಿ ವಿದ್ಯುತ್ ವಲಯದಲ್ಲಿ ದುಡಿಯುವ ಜನರ ಟ್ರೇಡ್ ಯೂನಿಯನ್‌ಗಳ ಒಂದೇ ದಿನದ ಸಮಾವೇಶವೊಂದು ನಡೆಯಿತು. ದೇಶದಲ್ಲಿ ವಿವಿಧ ಭಾಗಗಳಿಂದ 1600 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಈ ಸಮಾವೇಶವನ್ನುದ್ದೇಶಿಸಿ ಸಿಐಟಿಯು ಅಧ್ಯಕ್ಷರಾದ ಇ. ಬಾಲಾನಂದನ್, ಸಿಪಿಐ ಕಾರ್ಯದರ್ಶಿ ಎ.ಬಿ. ಬರ್ಧನ್, ವಿದ್ಯುತ್ ತಜ್ಞ ಅರುಣ್ ಘೋಷ್ ಕೇಂದ್ರ ವಿದ್ಯುತ್ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಾಂಬಮೂರ್ತಿ ಮೊದಲಾದವರು ಮಾತನಾಡಿದರು.

ವಿದ್ಯುತ್ ಉತ್ಪಾದನೆ ಮತ್ತು ವಿತರಣೆ ಸಾರ್ವಜನಿಕ ಹಿಡಿತದಲ್ಲಿದ್ದಾಗಲೇ ಹೆಚ್ಚು ಸಮರ್ಥವಾಗಿ ಆಗುತ್ತದೆ ಎಂಬುದು ಜಗತ್ತಿನಾದ್ಯಂತದ ಅನುಭವ ಎಂಬುದನ್ನು ಅದು ಒಂದು ಗೊತ್ತುವಳಿಯಲ್ಲಿ ಎತ್ತಿ ತೋರಿಸಿದೆ.

ವಿಶ್ವಬ್ಯಾಂಕಿನ ಒತ್ತಡದಿಂದ ಸಾರ್ವಜನಿಕರ ವಲಯಕ್ಕೆ ಬಜೆಟ್ ನೆರವಿನಲ್ಲಿ ಕಡಿತ ಮಾಡಿದ್ದರಿಂದ ಆಗ ವಿದ್ಯುತ್ ವಲಯದ ಮೇಲೆ ಹಲವು ದುಷ್ಪರಿಣಾಮ ಉಂಟಾಗಿದೆ. ಗುರಿಗೆ ಹೋಲಿಸಿದ್ದಲ್ಲಿ ಸಾಧನೆ ಶೇ 41 ರಷ್ಟು ಹಿಂದೆ ಬಿದ್ದಿದೆ.

ಶೀಘ್ರ ಪಥದ 8 ಯೋಜನೆಗಳಿಗೆ ಹಾಗೂ ಇತರ 100 ಯೋಜನೆಗಳಿಗೆ ಒಪ್ಪಂದ ಮಾಡಿಕೊಂಡಿದ್ದರೂ ಒಂದೇ ಒಂದು ಯೋಜನೆ ಕಾರ್ಯಾರಂಭ ಮಾಡಿದೆ.

ಸರಿಸುಮಾರು ಎಲ್ಲ ರಾಜ್ಯಗಳು ವಿದ್ಯುತ್ ಆಧಾರದ ತೀವ್ರ ಬಿಕ್ಕಟ್ಟು ಎದುರಿಸುತ್ತಿವೆ.

ವಿದೇಶೀ ಕಂಪನಿಗಳ ಹೂಡಿಕೆದಾರರು ಕಾರ್ಯರೂಪಕ್ಕೆ ತರಲಿರುವ ಎಲ್ಲ ಯೋಜನೆಗಳಿಗೂ ಇಂಧನ ಆಮದಾಗಬೇಕು. ಇದು ನಮ್ಮ ವ್ಯಾಪಾರ ಬಾಕಿಯ ಸಮಸ್ಯೆಯನ್ನು ತೀವ್ರಗೊಳಿಸುತ್ತದೆ.

ಈ ವಿಶ್ವಬ್ಯಾಂಕ್ ಪ್ರಣೀತ ಕಾರ್ಯಕ್ರಮಕ್ಕೆ ಪರ್ಯಾಯ ವಿಲ್ಲವೇ? ಇದೆ. ಸಮಾವೇಶ ಪರ್ಯಾಯ ನೀತಿಗಳನ್ನು ಸೂಚಿಸಿದೆ.

1. ರಾಜ್ಯ ವಿದ್ಯುತ್ ನಿಗಮಗಳನ್ನು ಪುನರ್ರೂಪಿಸಿ ಅವುಗಳ ಸಾಲಗಳನ್ನು ಶೇರುಗಳಾಗಿ ಪರಿವರ್ತಿಸಿ ಅವುಗಳಿಗೆ ಚೈತನ್ಯ ನೀಡಬೇಕು.
2. ಬ್ಯಾಂಕಿಂಗ್ ವಲಯದಲ್ಲಿ ಮಾಡಿದಂತೆ ಅನುಧಾನ ನಿಧಿ ಮಾಡಬೇಕು.
3. ಭಾರತೀಯ ವಿದ್ಯುತ್ ಕಾಯಿದೆಯ ಸೆಕ್ಷನ್ 59ರ ಮಿತಿಯಲ್ಲೇ ಹೂಡಿಕೆಯ ಮೇಲೆ ಪ್ರತಿಫಲ ಪಡೆಯುವಂತಾಗಬೇಕು. ಉದಾಹರಣೆಗೆ ಕೃಷಿಯಲ್ಲಿ ಬೇರೆ ಬೇರೆ ಬೆಳೆಗಳಿಗೆ ಬೇರೆ ಬೇರೆ ವಿದ್ಯುತ್ ದರ ನಿಗದಿ ಮಾಡಬಹುದು. ಇದರಿಂದ ಕಡಿಮೆ ಆದಾಯದ ಬೆಳೆಯ ಮೇಲೆ ಕಡಿಮೆ ಹೊರೆ ಬೀಳುತ್ತದೆ.
4. ಖಾಸಗಿ ಹೂಡಿಕೆಗೆ ಅವಕಾಶ ನೀಡುವಾಗ ಮೇಲಿನ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು.
5. ಸುಧಾರಣೆಗಳು ಹೇಗಿರಬೇಕೆಂದರೆ ಮೇಲೆ ಸೂಚಿಸಿದ ವಿದ್ಯುತ್ ದರಗಳಿಗೆ ಅನುಗುಣವಾಗಿರಬೇಕು.
6. ಹಿಂದುಳಿದ ಮತ್ತು ದುರ್ಬಲ ವರ್ಗಗಳ ಹಿತಾಸಕ್ತಿಗೆ ಅನುಗುಣವಾಗಿ ಸರ್ಕಾರದ ಪಾತ್ರ ಮುಂದುವರಿಯಬೇಕು.
7. ಎಲ್ಲ ಸಹಾಯಧನಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸಿಕೊಳ್ಳಬೇಕು.
8. ವಿದ್ಯುತ್ ಬೇಡಿಕೆಯ ಸರಿಯಾದ ನಿರ್ವಹಣೆ, ವಿದ್ಯುತ್ ಕಳ್ಳತನ ತಡೆಯಬೇಕು, ನಷ್ಟವನ್ನೂ ಕಡಿಮೆ ಮಾಡಬೇಕು.
9. ಆಧುನೀಕರಣ.
10. ಪ್ರಾರಂಭವಾಗಿರುವ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸುವುದು.

ವಿದೇಶೀ ಹಣಕಾಸು

ವಿದೇಶೀ ಹೂಡಿಕೆಗೆ ಹಾತೊರೆಯುವ ಬದಲು ಅಂತರಾಷ್ಟ್ರೀಯ ಮಟ್ಟದಲ್ಲಿ ಬಾಂಡುಗಳನ್ನು ನೀಡಿ ಆ ಹಣವನ್ನು (ವಿದ್ಯುತ್ ಪ್ರಾಧಿಕಾರ) ವಿದ್ಯುತ್ ವಲಯದಲ್ಲಿ ಹೂಡಬೇಕು.

ವಿದ್ಯುತ್ ಶಕ್ತಿಯ ಯೋಜನೆ

1. ಇದಲ್ಲದೆ ವಿದ್ಯುಚ್ಛಕ್ತಿಯನ್ನು ಸರಿಯಾಗಿ ಯೋಚಿಸಿ ಬಳಸಬೇಕು. ದೀರ್ಘಕಾಲದ ಬಳಕೆ ಯೋಜನೆಯಿದ್ದರೆ ಆಗ ಬೇಡಿಕೆಯ ನಿರ್ವಹಣೆ ಪರಿಣಾಮಕಾರಿಯಾಗಿರುತ್ತದೆ.
2. ಪ್ರಾದೇಶಿಕ ಮತ್ತು ವಲಯಗಳ ಸಮತೋಲ ಅಭಿವೃದ್ಧಿಯಾದರೆ ವಿದ್ಯುತ್ ನಿರ್ವಹಣೆ ಸುಲಭವಾಗುತ್ತದೆ.
3. ದೇಶೀ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆ ಜಲಸಂಪನ್ಮೂಲದ ಬಳಕೆಯಾಗಬೇಕು.
4. ದೇಶೀ ಇಂಧನಗಳನ್ನು ಹಾಗೆಯೇ ಸಮರ್ಥವಾಗಿ ಬಳಸಬೇಕು.
5. ದೀರ್ಘಕಾಲದ ಕಣ್ಣೋಟವನ್ನು ರೂಪಿಸಿಕೊಂಡು ಅದರಂತೆ ನಡೆಯಬೇಕಾಗಿದೆ.

ಕೇಂದ್ರ ಸಾರ್ವಜನಿಕ ವಲಯ

ಎನ್‌ಟಿಪಿಸಿ ಮತ್ತು ಪಿಜಿಸಿಎಲ್‌ನಂತಹ ಸಾರ್ವಜನಿಕ ಘಟಕಗಳ್ನ ಶೇರುಗಳ ಮಾರಾಟ ಮಾಡಬಾರದು.

ಆಂತರಿಕವಾಗಿ ರೂಪಿಸಿರುವ ಸಾಮರ್ಥ್ಯವನ್ನು ಪೂರ್ತಿಯಾಗಿ ಬಳಸಿಕೊಳ್ಳಬೇಕು.

ಕೇಂದ್ರ ಹಣಕಾಸು ಪ್ರಾಧಿಕಾರ ಮೊದಲಿನಂತೆ ಕಾರ್ಯನಿರ್ವಹಿಸುವಂತಾಗಬೇಕು.

ಒಟ್ಟಾರೆಯಾಗಿ ಹೇಳುವುದಾದರೆ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬೇಕು. ರಾಷ್ಟ್ರೀಯ ಮಟ್ಟದಲ್ಲಿ ಒಂದು ಸ್ಥಾಯಿ ಮಂಡಳಿ ರಚಿಸಬೇಕು. ಇದರಲ್ಲಿ ಎಲ್ಲ ವಿದ್ಯುತ್ ಮಂಡಳಿಗಳು, ಕೇಂದ್ರ ವಿದ್ಯುತ್ ಪ್ರಾಧಿಕಾರ, ನಿವೃತ್ತ ಮತ್ತು ಅನುಭವಿ ಎಂಜಿನೀಯರುಗಳ, ಸಂಸದರುಗಳಿಗೆ ಪ್ರಾತಿನಿಧ್ಯವಿರಬೇಕು.

ಸರ್ಕಾರಕ್ಕೆ ಎಚ್ಚರಿಕೆ

ಸರ್ಕಾರ ಇಂದಿನ ನೀತಿಗಳನ್ನೇ ಮುಂದುವರಿಸಿದಲ್ಲಿ, ಪರಿಸ್ಥಿತಿಯನ್ನು ಸುಧಾರಿಸುವ ಕ್ರಮಗಳನ್ನು ಕೈಗೊಳ್ಳದೇ ಹೋದಲ್ಲಿ ವಿದ್ಯುತ್ ವಲಯದ ಕೆಲಸಗಾರರು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಬೇಕಾಗುತ್ತದೆಂಬ ಎಚ್ಚರಿಕೆಯನ್ನು ಸಮಾವೇಶ ಸರ್ಕಾರಕ್ಕೆ ನೀಡಿತು.

ಉದ್ಯಮಿಗಳಿಗೆ 45000 ಕೋಟಿ ರೂ. ಸಾಲಮನ್ನಾ ಮಾಡುವ ಬ್ಯಾಂಕುಗಳು !

ಬ್ಯಾಂಕ್ ನೌಕರರ ಒಕ್ಕೂಟ (ಬಿಇಎಫ್‌ಐ) ಬ್ಯಾಂಕಿಂಗ್ ಉದ್ದಿಮೆಯಲ್ಲಿನ ಗಂಭೀರ ಪರಿಸ್ಥಿತಿಯನ್ನು ಭಾರತೀಯ ಬ್ಯಾಂಕ್ ಸಂಘ(ಐ.ಬಿ.ಎ) ಉಪೇಕ್ಷಿಸುವುದು ಸರಿಯಲ್ಲ ಎಂದು ಎಚ್ಚರಿಸಿದೆ. ಇಡೀ ಉದ್ದಿಮೆಯ ಮಟ್ಟದಲ್ಲಿ ಸಾಮೂಹಿಕ ಚೌಕಾಸಿಯ ವಿಧಾನವನ್ನು ಬಿಟ್ಟು ಪ್ರತಿಬ್ಯಾಂಕ್ ಮಟ್ಟಗಳಲ್ಲಿ ಇತ್ಯರ್ಥ ಮಾಡುವ ಐ.ಬಿ.ಎ. ನ ಪ್ರಯತ್ನವನ್ನು ಬಿಇಎಫ್‌ಐ ಬಲವಾಗಿ ಟೀಕಿಸಿದೆ.

ಕಾರ್ಯನಿರ್ವಹಿಸದಿರುವ ಆಸ್ತಿ (NDA) ಎಂದು ಬ್ಯಾಂಕುಗಳು ಹೆಸರಿಸಿರುವ ಮರುಪಾವತಿಯಾಗದ ಸಾಲಗಳಿಗೆ ಸಂಬಂಧಪಟ್ಟಂತೆ ಬ್ಯಾಂಕ್ ವ್ಯವಸ್ಥಾಪಕ ವರ್ಗ ಏನೂ ಮಾಡಿಲ್ಲ. ದೇಶದ ಕೆಲವು ಅತಿ ದೊಡ್ಡ ಉದ್ಯಮಿಗಳು ಬ್ಯಾಂಕುಗಳಿಂದ ಪಡೆದು ಹಿಂದಿರುಗಿಸದ ಸಾಲದ ಮೊತ್ತ 45000 ಕೋಟಿಗಿಂತಲೂ ಹೆಚ್ಚು. ಇದರ ವಸೂಲಿಗೆ ಕ್ರಮ ಕೈಗೊಳ್ಳುವ ಬದಲು ಐ.ಬಿ.ಎ. ನ ಇತ್ತೀಚಿನ ವಾರ್ಷಿಕ ಸಭೆಯಲ್ಲಿ ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಉಪೇಕ್ಷಿಸಿ "ಕೈಗಾರಿಕಾ ಸಂಬಂಧಗಳ ಮೇಲೆಯೇ ಹೆಚ್ಚಿನ ಗಮನ ಕೇಂದ್ರೀಕರಿಸಲಾಗಿದೆ"

ಐ.ಬಿ.ಎ.ನ ವಿಚಿತ್ರ ಆದ್ಯತೆಗಳಿಂದಾಗಿ 45000 ಕೋಟಿ ರೂಗಳಿಗಿಂತ ಹೆಚ್ಚಿನ ಸಾಲ ಬಾಕಿಯಿಟ್ಟುಕೊಂಡಿರುವ ದೊಡ್ಡ ಅಪರಾಧಿಗಳನ್ನು ಹಿಡಿಯುವ ಪ್ರಯತ್ನವೇ ನಡೆದಿಲ್ಲ ಎಂದು ಬಿಐಎಫ್‌ಐನ ಪ್ರಧಾನ ಕಾರ್ಯದರ್ಶಿ ಆಶಿಸ್ ಸೆನ್ ಹೇಳಿದ್ದಾರೆ. ಅದರ ಬದಲು 'ಆಸ್ತಿಪುನರ್ರಚನಾ ನಿಧಿ' ಎಂಬುದನ್ನು ಸೃಷ್ಟಿಸಿ ಸಾಲಗಳನ್ನು ಮನ್ನಾ ಮಾಡಿ ತಮ್ಮ ಆಯವ್ಯಯ ಪಟ್ಟಿಯನ್ನು ಶುದ್ಧಗೊಳಿಸುವ ಪ್ರಯತ್ನ ನಡೆದಿದೆ. ಅಂದರೆ ಸಾಲ ತೀರಿಸದೆ ತಪ್ಪಿಸಿಕೊಳ್ಳುವವರಿಗೆ ಕ್ಷಮಾದಾನ ನೀಡಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲೇ ಈ ಉದ್ಯಮಿಗಳ 6000 ಕೋಟಿ ರೂಗಳಷ್ಟು ಸಾಲ ಮನ್ನಾ ಮಾಡಿ ಸಾರ್ವಜನಿಕ ವಲಯದ ಬ್ಯಾಂಕುಗಳು ಅವರಿಗೆ ಇಷ್ಟು ದೊಡ್ಡ ಮೊತ್ತದ ಬಹುಮಾನ ನೀಡಿವೆ ಎಂದು ಆಶಿಸ್ ಸೆನ್ ಹೇಳುತ್ತಾರೆ.

ಐ.ಬಿ.ಎ. ಬ್ಯಾಂಕ್ ಉದ್ದಿಮೆಯಲ್ಲಿ ಕೈಗಾರಿಕಾ ಸಂಬಂಧಗಳನ್ನು ಕೂಡಾ ತುಂಬಾ ಕೆಳಮಟ್ಟಕ್ಕಿಳಿಸಿದೆ ಎಂದು ಬಿಇಎಫ್‌ಐ ಪ್ರಧಾನ ಕಾರ್ಯದರ್ಶಿಗಳು ಆಪಾದಿಸಿದ್ದಾರೆ. ವಿವಾದಗಳ ಪರಿಹಾರವಾಗುತ್ತಿಲ್ಲ, ಇತ್ಯರ್ಥಗಳ ಜಾರಿಯಾಗುತ್ತಿಲ್ಲ, ಸಾಮೂಹಿಕ ಚೌಕಾಸಿ ವಿಧಾನವನ್ನು ಮುರಿಯುವ ಪ್ರಯತ್ನ ನಡೆದಿವೆ. "ಕಳೆದ ಮೂರು ದಶಕಗಳಿಂದ ಬ್ಯಾಂಕ್ ಉದ್ದಿಮೆಯಲ್ಲಿ ದ್ವಿಪಕ್ಷೀಯ ಮಾತುಕತೆಯ ಕ್ರಮ ಬೆಳೆದು ಬಂದಿದೆ. ಈ ಪ್ರಕ್ರಿಯೆಯಲ್ಲಿ ಎಲ್ಲಾ ನೌಕರರ, ಅಧಿಕಾರಿಗಳ ವೇತನ-ಕೆಲಸದ ಶರತ್ತುಗಳಲ್ಲಿ ಒಂದು ಸಮಾನೀಕರಣ ಬಂದಿದೆ. ಐ.ಬಿ.ಎ. ಈಗ ಅದನ್ನು ಮುರಿಯಬಯಸುತ್ತಿದೆ. ಪ್ರತಿಯೊಂದು ಬ್ಯಾಂಕು ಪ್ರತ್ಯೇಕವಾಗಿ ಇತ್ಯರ್ಥ ಮಾಡಿಕೊಳ್ಳಲು ಅವಕಾಶ ನೀಡಿ ನೌಕರರು ಮತ್ತು ಅಧಿಕಾರಿಗಳ ಐಕ್ಯತೆಯನ್ನು ಮುರಿಯುವ ಪ್ರಯತ್ನ ನಡೆಸಿದೆ. ತಮ್ಮ ಸ್ವಂತ ಅನುಭವ ಹಾಗೂ ಸುಧಾರಣೆಗಳ ಹೆಸರಲ್ಲಿ ಧಾಳಿಗಳನ್ನು ಎದುರಿಸಲು ಎಲ್ಲಾ ನೌಕರರ, ಅಧಿಕಾರ ಸಂಘಟನೆಗಳು ಕಟ್ಟಿ ಬೆಳೆಸಿರುವ ಐಕ್ಯತೆಯನ್ನು ಬುಡಮೇಲು ಮಾಡುವ ಪ್ರಯತ್ನವಿದು ಎಂದು ಆಶಿಸ್ ಸೆನ್ ಹೇಳಿದ್ದಾರೆ.

ಬ್ಯಾಂಕು ಸಂಘಗಳ ಸಂಯುಕ್ತ ವೇದಿಕೆ (UFBU) ಯ ಒಂದು ಅಂಗವಾದ ಬಿಇಎಫ್‌ಐ ಇಂತಹ ಹಂಚಿಕೆಗಳಿಗೆ ಎಂದೂ ಅವಕಾಶ ಕೊಡುವುದಿಲ್ಲ, ಐಬಿಎಯ ಈ ಆಟ ಸಾಗದಂತೆ ಮಾಡಲು ಇತರೆಲ್ಲಾ ಶಕ್ತಿಗಳೊಂದಿಗೆ ಹೋರಾಡುತ್ತದೆ ಎಂದು ಬಿಐಎಫ್‌ಐ ಪ್ರಧಾನ ಕಾರ್ಯದರ್ಶಿ ಆಶಿಸ್‌ಸೆನ್ ಎಚ್ಚರಿಸಿದ್ದಾರೆ.

ದೇಶದೊಳಗೆ — ವಿಶ್ವ

ಉಗ್ರಗಾಮಿಗಳ ದುಷ್ಕೃತ್ಯ ತ್ರಿಪುರದಲ್ಲಿ ಬಂದ್

ತ್ರಿಪುರಾದಲ್ಲಿ ಕೆಲವು ಉಗ್ರಗಾಮಿ ಸಂಘಟನೆಗಳು ಮತ್ತೆ ದುಷ್ಕೃತ್ಯದಲ್ಲಿ ತೊಡಗಿದ್ದು, ವಿಶೇಷವಾಗಿ ಎಡರಂಗದ ನೇತೃತ್ವ ವಹಿಸಿರುವ ಸಿಪಿಐ(ಎಂ) ಮೇಲೆ ಆಕ್ರಮಣವನ್ನು ಹೆಚ್ಚಿಸಿವೆ.

ಅಕ್ಟೋಬರ್ ಮೂರರ ಪ್ರಕರಣ ಇದಕ್ಕೆ ಉದಾಹರಣೆಯಾಗಿದೆ. ಆ ದಿನ ಕಮಲಾಪುರ ಉಪ ವಿಭಾಗದ ಮಾಣಿಕ್ ಬಂದರ್ ಪ್ರದೇಶದ ಸಿಪಿಐ(ಎಂ) ಕಛೇರಿಗೆ ನುಗ್ಗಿದ ಎಸ್.ಎಲ್.ಎಫ್.ಟಿ.(ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ) ಉಗ್ರರು ಪಕ್ಷದ ರಾಜ್ಯ ಸಮಿತಿ ಸದಸ್ಯ ರಣಜಿತ್ ಘೋಷ್ ಅವರನ್ನು ಅಪಹರಿಸಿದರು. ಒಬ್ಬನನ್ನು ಗುಂಡಿಟ್ಟುಕೊಂದು ಹಾಕಿದರು.

ಪಕ್ಷದ ಸ್ಥಳೀಯ ಸಮಿತಿ ಕಾರ್ಯದರ್ಶಿ ಆಗಿರುವ ರಣಜಿತ್ ಘೋಷ್‌ರನ್ನು ಉಗ್ರಗಾಮಿಗಳು ಅಪಹರಿಸಲು ಪ್ರಯತ್ನಿಸಿದಾಗ ಶಾಸಕ ಸುಧೀರ್ ದಾಸ್‌ರ ಅಂಗರಕ್ಷಕನೊಬ್ಬ ಘೋಷ್‌ರನ್ನು ಬಿಡಿಸಲು ಯತ್ನಿಸಿದರು. ಆಗ ಉಗ್ರರು ಅಂಗರಕ್ಷನ ಮೇಲೆ ಗುಂಡು ಹಾರಿಸಿದರು. ಅಂಗರಕ್ಷಕ ಮೃತಪಟ್ಟು ಇನ್ನೂ ಐವರು ಗಾಯಗೊಂಡರು.

ಅಂಗರಕ್ಷಕನ ಹತ್ಯೆ ಹಾಗೂ ಘೋಷ್ ಅವರ ಅಪಹರಣವನ್ನು ಪ್ರತಿಭಟಿಸಿ ಅ. 5 ರಂದು ಕಮಲಾಪುರ ಉಪ ವಿಭಾಗದಲ್ಲಿ ಬಂದ್ ಯಶಸ್ವಿಯಾಗಿ ನಡೆಯಿತು. ಸಿಪಿಐ(ಎಂ) ಸ್ಥಳೀಯ ಸಮಿತಿ ಬಂದ್‌ಗೆ ಕರೆ ನೀಡಿತ್ತು. ಅಂಗಡಿಗಳು, ಮಾರುಕಟ್ಟೆಗಳು ಮುಚ್ಚಿದ್ದವು. ರಸ್ತೆಗಳಲ್ಲಿ ಮಹಾನ್ ಸಂಚಾರ ಇರಲಿಲ್ಲ.

ತ್ರಿಪುರಾ ಕಾಂಗ್ರೆಸ್‌ನ ಕಾಮಾಲೆ ಕಣ್ಣು

ರಾಜ್ಯದ ಆಳುವ ಎಡರಂಗ ಮುಂಬರುವ ವಿಧಾನ ಸಭೆ ಚುನಾವಣೆಗಳನ್ನು ರಿಗ್ ಮಾಡುವ ಪ್ರಕ್ರಿಯೆಯನ್ನು ಈಗಾಗಲೇ ಆರಂಭಿಸಿದೆ ಎಂದು ತ್ರಿಪುರಾ ಪ್ರದೇಶ ಕಾಂಗ್ರೆಸ್ ಆರೋಪಿಸಿದೆ.

ಕಾಂಗ್ರೆಸ್ ಬೆಂಬಲಿಗರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈ ಬಿಡಲಾಗುತ್ತಿದೆ ಎಂದು ಅದು ಆಪಾದಿಸಿದೆ.

ಚುನಾವಣೆಗಳಲ್ಲಿ ಅಕ್ರಮ ನಡೆಸುವಲ್ಲಿ ಕಾಂಗ್ರೆಸ್ ಪಕ್ಷದ್ದು ಎತ್ತಿದ ಕೈ ಎನ್ನುವುದು ಇಡೀ ಜಗತ್ತಿಗೇ ಗೊತ್ತಿದೆ. ಎಡಪಕ್ಷಗಳು ಯಾವತ್ತೂ ಅಂಥ ಕೃತ್ಯದಲ್ಲಿ ತೊಡಗುವುದಿಲ್ಲ ಎನ್ನುವುದೂ ಎಲ್ಲರಿಗೂ ತಿಳಿದಿರುವ ವಿಚಾರವೇ. ಆದಾಗ್ಯೂ ಕಾಂಗ್ರೆಸ್‌ನಿಂದ ಎಡರಂಗದ ಮೇಲೆ ಈ ಆರೋಪ ಬಂದಿದೆ.

ಕಾಮಾಲೆ ರೋಗ ಬಂದವರ ಕಣ್ಣಿಗೆ ಎಲ್ಲವೂ ಹಳದಿಯಾಗಿ ಕಾಣಿಸುತ್ತದಂತೆ. ಹಾಗೆಯೇ ತ್ರಿಪುರಾ ಕಾಂಗ್ರೆಸ್ಸಿಗರ ಪರಿಸ್ಥಿತಿ ಇರಬಹುದು, ಅಲ್ಲವೇ?

ಹಾಂ! ಅಂದ ಹಾಗೆ ಈ ಆರೋಪದ ಹಿಂದೆ ಒಂದು ಹುನ್ನಾರ ಇದೆ. ಅದುವೇ ರಾಜ್ಯದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರುವುದು.

ಮುಂದಿನ ಮಾರ್ಚ್‌ನಲ್ಲಿ ರಾಜ್ಯ ವಿಧಾನಸಭೆ ಚುನಾವಣೆಗಳು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಯಬೇಕಾದರೆ ರಾಜ್ಯದ ಮೇಲೆ ರಾಷ್ಟ್ರಪತಿ ಆಡಳಿತವನ್ನು ಹೇರುವುದು ಅನಿವಾರ್ಯ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಗೋಪಾಲ ರಾಯ್ ಅಪ್ಪಣೆ ಕೊಡಿಸಿದ್ದಾರೆ!

ಬಹುಶಃ ಕೇಂದ್ರದಲ್ಲಿ ಈಚೆಗೇನಾದರೂ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಿದ್ದರೆ ಇಷ್ಟು ಹೊತ್ತಿಗಾಗಲೇ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆಯಾಗಿರುತ್ತಿತ್ತೇನೋ? ಅದರೇನು ಮಾಡುವುದು. ಎಡರಂಗವೂ ಪ್ರಮುಖ ಅಂಗವಾಗಿರುವ ಸಂಯುಕ್ತ ರಂಗ ಕೇಂದ್ರದಲ್ಲಿ ಆಡಳಿತ ನಡೆಸುತ್ತಿದೆ. ತ್ರಿಪುರಾದಲ್ಲಿ ಕೇಂದ್ರಾಡಳಿತ ಏರುವುದು ಅಷ್ಟು ಸುಲಭವಲ್ಲ.

ಈ ವಾಸ್ತವವನ್ನು ಚೆನ್ನಾಗಿಯೇ ಅರಿತಿರುವ ಕಾಂಗ್ರೆಸ್. ಕೈಲಾಗದವ ಮೈ ಪರಚಿಕೊಂಡ ಎಂಬಂತೆ ಆಳುವ ಎಡರಂಗದ ವಿರುದ್ಧ ವಿನಾಕಾರಣ ಆರೋಪ ಹೊರಿಸಲು ಆರಂಭಿಸಿದೆ. ರಾಜ್ಯದ ಜನರೇ ಅದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ.

ಮರುಪಾವತಿ ಮಾಡದ ಸಾಲ: ಶಾಸಕನ ಆಯ್ಕೆ ಅನೂರ್ಜಿತ

ಸರಕಾರಿ ಸಂಸ್ಥೆಯೊಂದರ ಸಾಲವನ್ನು ಮರುಪಾವತಿ ಮಾಡದಿರುವುದಕ್ಕಾಗಿ ಕೇರಳದ ಕಾಂಗ್ರೆಸ್ ಶಾಸಕನೊಬ್ಬನ ಆಯ್ಕೆಯನ್ನು ರಾಜ್ಯ ಹೈಕೋರ್ಟ್ ಅನೂರ್ಜಿತಗೊಳಿಸಿದೆ.

ನೆಯ್ಯಾಟಿಂಕರ ವಿಧಾನಸಭಾ ಕ್ಷೇತ್ರದ ಶಾಸಕ, ಕಾಂಗ್ರೆಸ್(ಐ) ನ ತಂಪಾನೂರು ರವಿ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಿ ನ್ಯಾಯಾಲಯ ಸೆಪ್ಟೆಂಬರ್ 29 ರಂದು ತೀರ್ಪು ನೀಡಿದೆ.

ರವಿ 'ಕವಿತಾ ಪ್ರಿಂಟರ್ಸ್' ಎಂಬ ಸಂಸ್ಥೆಯ ಪಾಲುದಾರ. ಈ ಸಂಸ್ಥೆ ಸರ್ಕಾರಿ ಕಂಪೆನಿಯಾದ ಕೇರಳ ಹಣಕಾಸು ನಿಗಮದಿಂದ 30 ಲಕ್ಷ ರೂಪಾಯಿ ಸಾಲ ಪಡೆದಿತ್ತು.

ಆದರೆ ರವಿ ಕಳೆದ ಚುನಾವಣೆಯಲ್ಲಿ ನಾಮಪತ್ರ ಸಲ್ಲಿಸುವ ವೇಳೆ 1984 ರಲ್ಲಿ ಪಡೆದಿದ್ದ ಸಾಲವನ್ನು ಹಾಗೂ ಅದರ ಬಡ್ಡಿಯನ್ನು ಮರುಪಾವತಿ ಮಾಡದಿದ್ದುದರಿಂದ ರವಿಯವರ ಆಯ್ಕೆ ಅಸಿಂಧು ಎಂದು ನ್ಯಾಯಾಲಯ ತಿಳಿಸಿದೆ.

ನಾಮಪತ್ರ ಸಲ್ಲಿಸುವ ವೇಳೆ ನಂತರ ಹಾಗೂ ಆಯ್ಕೆಯ ನಂತರವೂ ಸರಕಾರಿ ಸಂಸ್ಥೆಗೆ ಸಾಲಿಗನಾಗಿರುವುದರಿಂದಲೂ ರವಿ ಆಯ್ಕೆ ಅಕ್ರಮ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಸಂವಿಧಾನದ ನಿಯಮ 191(ಸಿ) ಹಾಗೂ ಜನತಾ ಪ್ರಾತಿನಿಧ್ಯ ಕಾಯಿದೆಯ ನಿಯಮಗಳನ್ನು ಈ ಸಂಬಂಧ ಉಲ್ಲೇಖಿಸಲಾಗಿದೆ ಸರಕಾರಿ ಹಣಕಾಸು ಸಂಸ್ಥೆಗಳಿಗೆ ಹಣ ಮರುಪಾವತಿ ಮಾಡಲಿಲ್ಲ ಎಂಬ ಒಂದೇ ಕಾರಣಕ್ಕಾಗಿ ಶಾಸಕರೊಬ್ಬರ ಆಯ್ಕೆಯನ್ನು ಅನೂರ್ಜಿತಗೊಳಿಸಿರುವುದು ಬಹುಶಃ ಭಾರತದಲ್ಲಿ ಇದೇ ಪ್ರಥಮ ಪ್ರಕರಣ ಎಂದು ಕಾನೂನು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ತ್ರಿಪುರಾ ಎಡರಂಗ ಬೆಂಬಲಿಸಿ ದಲಿತರ ಬೃಹತ್ ರ್‍ಯಾಲಿ

ತ್ರಿಪುರಾದ ಎಡರಂಗ ಸರಕಾರಕ್ಕೆ ದೃಢ ಬೆಂಬಲವನ್ನು ವ್ಯಕ್ತಪಡಿಸಲು ಹಿಂದುಳಿದ ಹಾಗೂ ದುಡಿಯುವ ವರ್ಗದ ಹಲವು ರ್‍ಯಾಲಿಗಳು ಈಚೆಗೆ ರಾಜ್ಯದಲ್ಲಿ ನಡೆದವು.

ಸೆ.26 ರಂದು ಪಶ್ಚಿಮ ಮತ್ತು ದಕ್ಷಿಣ ತ್ರಿಪುರಾ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಜನರು ಅಗರ್ತಲಾದ ಯು.ಕೆ.ಅಕಾಡೆಮಿ ಮೈದಾನದಲ್ಲಿ ರ್‍ಯಾಲಿ ನಡೆಸಿದರು. ಉತ್ತರ ತ್ರಿಪುರಾ ಜಿಲ್ಲೆಯ ರ್‍ಯಾಲಿ ಕೈಲಾಸನಗರದಲ್ಲಿ ಧಲಾಯ್ ಜಿಲ್ಲೆಯ ರ್‍ಯಾಲಿ ಕಮಲಾಪುರದಲ್ಲಿ ವ್ಯವಸ್ಥೆಗೊಂಡಿತ್ತು. ಈ ಎಲ್ಲಾ ರ್‍ಯಾಲಿಗಳು ಭಾರೀ ಮಳೆಯನ್ನು ಲೆಕ್ಕಿಸದೆ ನಡೆದದ್ದು ಒಂದು ವಿಶೇಷವಾಗಿತ್ತು.

ಪರಿಶಿಷ್ಟ ಜಾತಿ ಸಮನ್ವಯ ಸಮಿತಿ ಈ ರ್‍ಯಾಲಿಗಳನ್ನು ವ್ಯವಸ್ಥೆಗೊಳಿಸಿತ್ತು.

ಅಗರ್ತಲಾದಲ್ಲಿ ರ್‍ಯಾಲಿಗೆ ಮುನ್ನ ನಡೆದ ಬೃಹತ್ ಮೆರವಣಿಗೆಯ ನೇತೃತ್ವವನ್ನು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸುಕುಮಾರ್ ಬರ್ಮನ್ ವಹಿಸಿದ್ದರು.

17 ಅಂಶಗಳ ಬೇಡಿಕೆ ಪತ್ರವೊಂದನ್ನು ರ್‍ಯಾಲಿಯಲ್ಲಿ ಸಲ್ಲಿಸಲಾಯಿತು. ಪರಿಶಿಷ್ಟ ಜಾತಿ ಸಮನ್ವಯ ಸಮಿತಿ ಅಧ್ಯಕ್ಷರೂ ಆದ ರಾಜ್ಯದ ಶಿಕ್ಷಣ ಸಚಿವ ಅನಿಲ್ ಸರ್ಕಾರ್ ಅದನ್ನು ಸ್ವೀಕರಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ರಾಜ್ಯದ ಮೀನುಗಾರಿಕೆ ಮಂತ್ರಿಯೂ ಆದ ಸಮನ್ವಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುಕುಮಾರ್ ಬರ್ಮನ್ ಮೊದಲಾದವರು ರ್‍ಯಾಲಿಯಲ್ಲಿ ಮಾತನಾಡಿದರು.

ರಾಜಸ್ಥಾನ ಅತ್ಯಾಚಾರ ಪ್ರಕರಣ ಮುಖ್ಯ ಆರೋಪಿಗಳ ಸೆರೆ

ರಾಜಸ್ಥಾನ ರಾಜಧಾನಿ ಜೈಪುರದಲ್ಲಿರುವ ರಾಜಸ್ಥಾನ ವಿಶ್ವವಿದ್ಯಾಲಯ ಕ್ಯಾಂಪಸ್‌ನ ಜೆ.ಸಿ.ಬೋಸ್ ಹಾಸ್ಟೆಲ್‌ನಲ್ಲಿ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ ಪ್ರಮುಖ ಆರೋಪಿಗಳು ಸೆರೆ ಸಿಕ್ಕಿದ್ದಾರೆ.

ಪಂಜಾಬ್ ಗಡಿಯಲ್ಲಿರುವ ಶ್ರೀಗಂಗಾನಗರ ಎಂಬಲ್ಲಿ ಸಂದೀಪ್ ದಹಿಯಾ ಮತ್ತು ಜಂಬೆ ಸಿವಾಲ್‌ನನ್ನು ಅಕ್ಟೋಬರ್ 3 ರಂದು ಪೋಲೀಸರು ಬಂಧಿಸಿದರು. ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರಾದವರ ಸಂಖ್ಯೆಯು ಆರಕ್ಕೇರಿದೆ.

ಈ ಸಾಮೂಹಿಕ ಅತ್ಯಾಚಾರ ಪ್ರಕರಣದ ವಿರುದ್ಧ ಇಡೀ ದೇಶದ ಪ್ರಜ್ಞಾವಂತ ಮಹಿಳಾ ಚಳುವಳಿ ಹಾಗೂ ಪ್ರಜಾಸತ್ತಾತ್ಮಕ ವರ್ಗ ದನಿಯೆತ್ತಿದ್ದೇ ಆರೋಪಿಗಳಿಗೆ ಪರೋಕ್ಷ ನೆರವು ನೀಡುತ್ತಿದ್ದ ರಾಜ್ಯದ ಬಿಜೆಪಿ ಸರಕಾರ ಕೊನೆಗೂ ಆರೋಪಿಗಳನ್ನು ಬಂಧಿಸುವಂತೆ ಮಾಡುವಲ್ಲಿ ಸಫಲವಾಯಿತು.

ಸಂದೀಪ್ ಮತ್ತು ಜಂ ಈ ಇಬ್ಬರೂ ವಿದ್ಯಾರ್ಥಿನಿಯನ್ನು ಹಲವು ವರ್ಷಗಳಿಂದ ಲೈಂಗಿಕ ಶೋಷಣೆಗೆ ಒಳಪಡಿಸಿದ್ದರು. ಅಷ್ಟೇ ಅಲ್ಲದೆ ಸೆಪ್ಟೆಂಬರ್ 5 ರಂದು ಇನ್ನೂ ಆರು ಗೆಳೆಯರೊಂದಿಗೆ ಸೇರಿಕೊಂಡು ಸಾಮೂಹಿಕ ಅತ್ಯಾಚಾರ ಎಸಗಿದ್ದರು.

ಸಂದೀಪ್ ರಾಜಸ್ಥಾನ ವಿವಿಯ ಎಂ.ಎ. ವಿದ್ಯಾರ್ಥಿ. ಹಾಗೂ ಜಂಬೆ ಸಿವಾಲ್ ಅದೇ ವಿ.ವಿ.ಯ ಎಲ್.ಎಲ್.ಬಿ. ವಿದ್ಯಾರ್ಥಿ. ಈತ ಈಚೆಗಷ್ಟೇ ರಾಜಸ್ಥಾನ ಪೋಲೀಸ್ ಪಡೆಗೆ ಆಯ್ಕೆಯಾಗಿದ್ದ ಕೂಡ!

ಸಿಪಿಐ(ಎಂ) ಶ್ರೀರಾಂಪುರ ಪ್ರದೇಶ ಸಮ್ಮೇಳನ

ಬೆಂಗಳೂರು: ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶ್ರೀರಾಮಪುರ ಸಮ್ಮೇಳನ ಅಕ್ಟೋಬರ್-2, 1997 ರಂದು ನಡೆಯಿತು. ಈ ಸಮ್ಮೇಳನವನ್ನು ಸ್ವಾತಂತ್ರ್ಯ ಹೋರಾಟಗಾರರು, ಸಿ.ಪಿ.ಐ.(ಎಂ) ರಾಜ್ಯ ಮುಖಂಡರಾದ ಕಾಂ. ಸೂರ್ಯನಾರಾಯಣರಾವ್ ಉದ್ಘಾಟಿಸಿದರು. ದೇಶದಲ್ಲಿ ಶ್ರೀಮಂತರ ಪರವಾದ ಸರ್ಕಾರ ಅಧಿಕಾರದಲ್ಲಿದೆ. ಭ್ರಷ್ಟಾಚಾರ ಅಧಿಕವಾಗಿದೆ. ಸಂಯುಕ್ತರಂಗ ಸರ್ಕಾರ ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಜಾರಿಗೆ ತರುತ್ತಿಲ್ಲ ಬದಲಾಗಿ ಪೆಟ್ರೋಲ್, ಡೀಸೇಲ್, ಅನಿಲಗಳ ಬೆಲೆಗಳನ್ನು ಏರಿಸಿದೆ. ಇಂತಹ ಜನ ವಿರೋಧಿ ಸರ್ಕಾರದ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ ಪಕ್ಷ ಹೋರಾಟ ನಡೆಸಬೇಕೆಂದು ಅವರು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸದಸ್ಯ ಕಾಂ. ಗುರುಶಾಂತ್ ಮಾತನಾಡಿ ಕೋಮುವಾದದ ಬೆಂಕಿ ಹಚ್ಚಲು ಬಿಜೆಪಿ ಸತತವಾಗಿ ಪ್ರಯತ್ನ ಮಾಡುತ್ತಿದೆ. ಹಿಂದೂ-ಮುಸ್ಲಿಂ ಸೌಹಾರ್ದತೆಗಾಗಿ ನಮ್ಮ ಪಕ್ಷವು ಬಲಿಷ್ಠ ಹೋರಾಟ ನಡೆಸಬೇಕೆಂದರು.

ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ.ಕೆ. ಸುಬ್ರಮಣಿಯವರು ಮಾತನಾಡಿದರು. ಪಕ್ಷದ ಪ್ರತಿನಿಧಿ ಅಧಿವೇಶನವನ್ನು ಮೀನಾಕ್ಷಿ ಸುಂದರಂ ಉದ್ಘಾಟಿಸಿ, ಪಕ್ಷದ, ಸಂಘಟನೆಯ ಗೊತ್ತುಗುರಿಗಳನ್ನು ತಿಳಿಸಿದರು.

ಬೆಳಿಗ್ಗೆ ಸುಜಾತ ಟಾಕೀಸ್ ನಿಂದ ಮೆರವಣಿಗೆ ನಡೆಸಲಾಯಿತು. ಈ ಸಮ್ಮೇಳನದಲ್ಲಿ ದೀರ್ಘ ಚರ್ಚೆ ನಡೆದು ಗಾಂಧಿನಗರ ಕ್ಷೇತ್ರ ಬಹಳ ಹಿಂದುಳಿದಿದೆ ಈ ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ಸರ್ಕಾರ ನೀಡಬೇಕೆಂದು ಸೇವಾಶ್ರಮ ಎದುರಿರುವ ಆಟೋ ಮೈದಾನವನ್ನು ನವೀಕರಣ ಗೊಳಿಸಬೇಕೆಂದು, ಸುಜಾತ ಟಾಕೀಸ್ ರಸ್ತೆಯನ್ನು ವಿಸ್ತರಿಸಬೇಕು, ಓವರ್ ಬ್ರಿಡ್ಜ್ ನಿರ್ಮಿಸಬೇಕು, ಸ್ಥಳೀಯವಾಗಿ ಕುಡಿಯುವ ನೀರಿನ ಸಮಸ್ಯೆ ವಿದ್ಯುತ್ ಕೊರತೆ ಪರಿಸರ ಕಲುಷಿತವಾಗಿದೆ ಇದನ್ನು ಸರಿಪಡಿಸಬೇಕು. ನಗರ ಸಭೆಯಲ್ಲಿನ ಭ್ರಷ್ಟಾಚಾರ ತಡೆಗಟ್ಟಬೇಕೆಂದು ಈ ಸಮ್ಮೇಳನವು ಒತ್ತಾಯಿಸಿತಲ್ಲದೆ ಮುಂದೆ ಬಲಿಷ್ಠ ಹೋರಾಟಗಳನ್ನು ನಡೆಸಲು ತೀರ್ಮಾನಿಸಿದೆ.

ನೂತನ ಪ್ರದೇಶ ಸಮಿತಿಯ ಕಾರ್ಯದರ್ಶಿಯಾಗಿ ಗೋಪಾಲಕೃಷ್ಣ, ಸಮಿತಿ ಸದಸ್ಯರಾಗಿ ಕಾಂ. ಚಂದ್ರು, ಪಾರ್ಥಿಬನ್, ಪಿ.ಕೋದಂಡರಾಮ್, ಎಸ್. ಗೋಪಾಲ್ ಅನ್ನಲಕ್ಷ್ಮಮ್ಮ ವೀರಮಣಿ, ಮಹೇಂದ್ರನ್, ರವಿ ಕುಮಾರ್ ಆಯ್ಕೆಯಾದರು.


ಎಸ್.ಎಫ್.ಐ. ಘಟಕ ರಚನೆ

ರಾಮದುರ್ಗ: ಬೆಳಗಾವಿ ಜಿಲ್ಲೆಯ ರಾಮದುರ್ಗದಲ್ಲಿ ಇದೇ ಪ್ರಥಮ ಬಾರಿಗೆ ಸೆಪ್ಟೆಂಬರ್ 29 ರಂದು ಎಸ್.ಎಫ್.ಐ. ಘಟಕದ ರಚನೆಯಾಯ್ತು.

ಅರಮನೆ ಆವರಣದಲ್ಲಿ 400 ಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉತ್ಸಾಹದಿಂದ ಪಾಲ್ಗೊಂಡಿದ್ದ ಈ ಸಮಾರಂಭವನ್ನು ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್ ಉದ್ಘಾಟಿಸಿದರು. ಜಿಲ್ಲಾ ಸಂಚಾಲಕ ಎಫ್.ಎಂ. ನದಾಫ್ ಅವರು ಕಾರ್ಯಚಟುವಟಿಕೆಗಳ ವರದಿ ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಜನವಾದಿ ಮಹಿಳಾ ಸಂಘಟನೆಯ ನಾಯಕಿಯರಾದ ಎನ್. ಪ್ರಭಾ ಮಾತನಾಡಿದರು.

ಹೊಸ ತಾಲೂಕು ಸಮಿತಿಯನ್ನು ರಚಿಸಲಾಯ್ತು. ಅಧ್ಯಕ್ಷರಾಗಿ ಎಸ್.ಕೆ. ಪಾಟೀಲ್, ಕಾರ್ಯದರ್ಶಿಯಾಗಿ ಎಸ್.ಎಂ. ಹದನಟ್ಟಿ, ಆಯ್ಕೆಯಾದರು.

ಸಿ.ಪಿ.ಐ (ಎಂ) ಕುಂದಾಪುರ ತಾಲೂಕು ಸಮ್ಮೇಳನ



ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16 ನೇ ತಾಲೂಕು ಸಮ್ಮೇಳನವು ಸೆಪ್ಟೆಂಬರ್ 28 ರಂದು ಕುಂದಾಪುರದಲ್ಲಿ ನಡೆಯಿತು. ಹುತಾತ್ಮರ ಸ್ಮಾರಕಕ್ಕೆ ಪುಷ್ಪಗುಚ್ಛಗಳೊಂದಿಗೆ ಗೌರವಾರ್ಪಣೆ ಹಾಗೂ ಹಿರಿಯ ಮುಖಂಡ ಅಬ್ರಹಾಂ ಕರ್ಕಡರವರು ಧ್ವಜಾರೋಹಣ ಮಾಡುವುದರೊಂದಿಗೆ ಪ್ರಾರಂಭವಾಯ್ತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಮಾಧವ ಜನಸಾಮಾನ್ಯರ ಭವಿಷ್ಯದ ಚಿಂತನೆಯ ಚಾರಿತ್ರಿಕ ಜವಾಬ್ದಾರಿ ಕಮ್ಯುನಿಸ್ಟರ ಮೇಲಿದೆ ಎಂದರು. ಜನ ಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತಿರುವುದರಿಂದಾಗಿಯೇ ಕುಂದಾಪುರ ಪುರಸಭೆಯ ಆಡಳಿತವನ್ನು ಸಿಪಿಐ(ಎಂ) ನೇತೃತ್ವದಲ್ಲಿ ಜನ ಪರವಾಗಿ ನಡೆಸಲು ಸಾಧ್ಯವಾಗಿದೆ ಎಂದರು.

ಕಳೆದ ಮೂರು ವರ್ಷಗಳ ಪಕ್ಷದ ತಾಲೂಕು ಸಮಿತಿಯ ಚಟುವಟಿಕಾ ವರದಿಯನ್ನು ತಾಲೂಕು ಕಾರ್ಯದರ್ಶಿ ಕೆ.ಶಂಕರ್ ಮಂಡಿಸಿದರು. ಪಕ್ಷವು ಇನ್ನೂ ಪರಿಣಾಮಕಾರಿಯಾಗಿ ಕೆಲಸ ಮಾಡಲು ಹಾಗೂ ಪಕ್ಷವನ್ನು ಕಟ್ಟಿ ಬೆಳೆಸುವ ಬಗ್ಗೆ ಪ್ರತಿನಿಧಿಗಳು ಸಲಹೆಗಳನ್ನು ನೀಡಿದರು.

ಸಮ್ಮೇಳನವು ತಾಲೂಕಿಗೆ ಸಂಬಂಧಿಸಿದ ಕೆಲವು ನಿರ್ಣಯಗಳನ್ನು ಕೈಗೊಂಡಿತು.

1. ವಾರಾಹಿ ನೀರಾವರಿ ಯೋಜನೆಯ ಶೀಘ್ರ ಅನುಷ್ಠಾನಕ್ಕೆ ಒತ್ತಾಯ.
2. ಬಸ್ ಪ್ರಯಾಣ ದರವನ್ನು ಇಳಿಸಲು ಒತ್ತಾಯಿಸಿ.
3. ಸಾರ್ವಜನಿಕ ಆಸ್ಪತ್ರೆಯಲ್ಲಿ ಅವಶ್ಯಕ ಔಷಧಿ ಹಾಗೂ ಉಪಕರಣಗಳನ್ನು ಒದಗಿಸುವಂತೆ ಸಮ್ಮೇಳನವು ಒತ್ತಾಯಿಸಿದೆ.

ಕೆ. ಶಂಕರ್‌ರವರನ್ನು ತಾಲೂಕು ಕಾರ್ಯದರ್ಶಿಯಾಗಿ ಸಮ್ಮೇಳನವು ಪುನರಾಯ್ಕೆ ಮಾಡಿತು.

ಸಾರ್ವಜನಿಕ ಸಭೆ: ಸೆ. 29 ರಂದು ಸಮ್ಮೇಳನದ ಅಂಗವಾಗಿ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನು ಸಂಘಟಿಸಲಾಗಿತ್ತು. 3000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಈ ರ್‍ಯಾಲಿಯಲ್ಲಿ ಕಾರ್ಮಿಕರು, ರೈತ-ಕೃಷಿ ಕೂಲಿಕಾರರು ಪಾಲ್ಗೊಂಡು ನಗರದ ವಿವಿಧ ಪ್ರದೇಶಗಳಲ್ಲಿ ಮೆರವಣಿಗೆ ನಡೆಸಿ ಗಾಂಧಿ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು.

ಪಕ್ಷದ ಹಿರಿಯ ಮುಖಂಡರಾದ ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ನಡೆದ ಈ ಬಹಿರಂಗ ಸಭೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ. ಮಾಧವ ರವರು ಮುಖ್ಯ ಭಾಷಣಕಾರರಾಗಿದ್ದರು.

ಪುರಸಭಾ ಅಧ್ಯಕ್ಷರು ಮತ್ತು ಪಕ್ಷದ ತಾಲೂಕು ಸಮಿತಿ ಸದಸ್ಯರಾದ ವಿ. ನರಸಿಂಹನವರು ಮಾತನಾಡಿ, ಪುರಸಭೆ ಆಡಳಿತದ ಚುಕ್ಕಾಣಿ ಹಿಡಿದಾಗಿನಿಂದ ಆಗಿರುವ ಸಾಧನೆ ಹಾಗೂ ಮುಂದಿನ ಯೋಜನೆಗಳ ಬಗ್ಗೆ ವಿವರಿಸಿದರು. ಸಭೆಯನ್ನುದ್ದೇಶಿಸಿ ಕೆ.ಶಂಕರ್ ಮಾತನಾಡಿದರು. ಮಹಾಬಲ ಬಡೇರ ಹೋಬಳಿಯವರು ಸ್ವಾಗತಿಸಿದರು. ಸಿ.ನಾರಾಯಣ ವಂದಿಸಿದರು.

ಲೋಕಸಂಚಾರ

ಇಸ್ರೇಲಿ ಆಳರಸರ ಕ್ರೌರ್ಯ ಮತ್ತೆ ಬಯಲಿಗೆ

ಅಮೆರಿಕಾ ಮಧ್ಯಸ್ಥಿಕೆಯಲ್ಲಿ ಆರಂಭವಾದ ಪ್ಯಾಲೆಸ್ತೀನ್ 'ಶಾಂತಿ ಪ್ರಕ್ರಿಯೆ' ನಿಜವಾಗಿಯೂ ಶಾಂತಿ ಪ್ರಕ್ರಿಯೆಯೇ ಎಂಬ ಸಂದೇಹ ವ್ಯಾಪಕವಾಗುತ್ತಿರುವ ಸಂದರ್ಭದಲ್ಲಿ ಒಬ್ಬ ಪ್ರಮುಖ ಪ್ಯಾಲೆಸ್ಟೇನ್ ಮುಖಂಡನ ಕೊಲೆಯ ಪ್ರಯತ್ನ, ಅದರಲ್ಲಿ ಇಸ್ರೇಲಿ ಪ್ರಧಾನ ಮಂತ್ರಿಯ ಪಾತ್ರದ ಬಗ್ಗೆ ಎದ್ದಿರುವ ಶಂಕೆ ಇಸ್ರೇಲಿ ಆಳರಸರ ನಿಜ ಸ್ವರೂಪವನ್ನು ಇನ್ನಷ್ಟು ಬಯಲಿಗೆಳೆದಿದೆ. 'ಶಾಂತಿ ಒಪ್ಪಂದ'ದಲ್ಲಿ ಹೇಳಿದಂತೆ ಯಾವದೂ ನಡೆಯುವ ಬದಲು ಇಸ್ರೇಲಿನ ಲಿಕುಡ್ ಸರಕಾರ ಜೆರುಸಲೆಂನಲ್ಲಿ ಇನ್ನಷ್ಟು ಇಸ್ರೇಲಿಯರನ್ನು ನೆಲೆಸಲು ಪ್ರಯತ್ನಿಸುತ್ತಿರುವುದು ಪ್ಯಾಲೆಸ್ಟೇನ್‌ರಲ್ಲಿ ತೀವ್ರ ಕ್ರೋಧ ಹುಟ್ಟಿಸಿದೆ. ಇದರಿಂದಾಗಿ ಕೆಲವು ಪ್ಯಾಲೆಸ್ಟೇನ್ ಭಯೋತ್ಪಾದಕ ಗುಂಪುಗಳು ಬಾಂಬ್ ಸ್ಫೋಟದಂತಹ ಚಟುವಟಿಕೆಗಳಲ್ಲಿ ತೊಡಗಿರುವುದನ್ನು ಬಳಸಿಕೊಂಡು ಇಸ್ರೇಲ್ ಮತ್ತಷ್ಟು ಹಠಮಾರಿತನವನ್ನು ಪ್ರದರ್ಶಿಸಲಾರಂಭಿಸಿತ್ತು. ಈ ಹಿನ್ನಲೆಯಲ್ಲಿ ಸೆಪ್ಟೆಂಬರ್ 25 ರ ಘಟನೆ ನಡೆದಿದೆ.

ಅಂದು 'ಹಮಸ್' ಎಂಬ ಒಂದು ಪ್ರಮುಖ ಪ್ಯಾಲೆಸ್ಟೇನ್ ಸಂಘಟನೆಯ ಮುಖಂಡ ಖಾಲಿದ್ ಮೆಶಾಲ್ ಜೋರ್ಡಾನ್‌ನಲ್ಲಿರುವ ತನ್ನ ಕಚೇರಿಯನ್ನು ಪ್ರವೇಶಿಸುತ್ತಿದ್ದಂತೆ ಇಬ್ಬರು ವ್ಯಕ್ತಿಗಳು ಮೆಶಾಲ್ ಕಿವಿಯಲ್ಲಿ ವಿಷವನ್ನು ಇಂಜೆಕ್ಷನ್ ಮೂಲಕ ತುಂಬಿದರು. ಮೆಶಾಲ್‌ಗೆ ಉಸಿರುಗಟ್ಟಿದಂತಾಯಿತು. ತಕ್ಷಣ ಆಸ್ಪತ್ರೆಗೆ ಸೇರಿಸಲಾಯಿತು. ಜೀವಾಪಾಯದಿಂದ ಪಾರಾದರು. ತನಿಖೆ ನಡೆಸಿದಾಗ ಆ ಇಬ್ಬರು ವ್ಯಕ್ತಿಗಳು ಕೆನಡಾದ ಪಾಸ್‌ಪೋರ್ಟ್ ಹೊಂದಿದ್ದರೆಂದೂ ಆದರೆ ವಾಸ್ತವವಾಗಿ ಅವರು ಇಸ್ರೇಲಿಗಳೆಂದೇ ತಿಳಿದುಬಂತು. ಇಸ್ರೇಲಿನ ಗುಪ್ತ ಚರ ಸಂಸ್ಥೆ 'ಮೊಸ್ಸಾದ್' ಮೆಶಾಲ್‌ರನ್ನು ಕೊಲ್ಲಲೆಂದೇ ಅವರನ್ನು ಕಳಿಸಿತು. 'ಮೊಸ್ಸಾದ್' ನೇರವಾಗಿ ಪ್ರಧಾನಿಯ ಉಸ್ತುವಾರಿಯಲ್ಲಿರುವುದರಿಂದ ಈ ಪಿತೂರಿ ಪ್ರಧಾನಿ ನೇತಾನ್ಯೆಹುರವರ ಉಸ್ತುವಾರಿಯಲ್ಲೇ ನಡೆಯಿತು ಎಂಬ ಬಲವಾದ ಶಂಕೆಯಿದೆ. ಇದರಿಂದ ನೇತಾನ್ಯಾಹು ಸರಕಾರವನ್ನು ಇಸ್ರೇಲಿನ ಲೇಬರ್ ಪಕ್ಷವು ಸೇರಿದಂತೆ ವಿಶ್ವದ ಹಲವು ಮಂದಿ ಖಂಡಿಸಿದ್ದಾರೆ. ಇಸ್ರೇಲ್ ತನ್ನ ಹತ್ತಿರದ ಮಿತ್ರ ಎಂದು ಬಗೆದಿರುವ ಜೋರ್ಡಾನ್‌ನ ದೊರೆಹಾಗೂ ಕೆನಡಾ ಕೂಡಾ ಕೃತ್ಯವನ್ನು ಖಂಡಿಸಿದ್ದಾರೆ.

ಮೊದಮೊದಲು ಮೌನವಾಗಿದ್ದು ಮುಗ್ಧನಂತೆ ನಟಿಸಿದ ಇಸ್ರೇಲಿ ಪ್ರಧಾನಿ "ಮೆಶಾಲ್ ಕೊಲೆಗಡುಕ, ಭಯೋತ್ಪಾದನೆಯನ್ನು ಎದುರಿಸಲು ಇಸ್ರೇಲ್ ಸರಕಾರ ಏನು ಮಾಡಲೂ ಸಿದ್ಧ" ಎಂದುಹೇಳಿ ಪರೋಕ್ಷವಾಗಿ ಈ ಪಿತೂರಿಯನ್ನು ಒಪ್ಪಿಕೊಂಡರು. ಆದರೆ ಅವರ ಸಮರ್ಥನೆಗೆ ಯಾರಿಂದಲೂ ಬೆಂಬಲ ಸಿಕ್ಕಿಲ್ಲ.

ತನ್ನ ಮುಖವುಳಿಸಿಕೊಳ್ಳಲು ಹಾಗೂ ಜೋರ್ಡಾನಿನ ಸಿಟ್ಟನ್ನು ಶಮನಗೊಳಿಸಲು ಇಸ್ರೇಲ್ ಸರಕಾರ ಇದ್ದಕ್ಕಿದ್ದಂತೆ ಜೈಲಿನಲ್ಲಿದ್ದ ಹಮಸ್ ನ ಸ್ಥಾಪಕ ಮುಖಂಡ ಶೇಖ್ ಅಹ್ಮದ್ ಯಾಸಿನ್‌ರನ್ನು ಜೋರ್ಡಾನ್‌ಗೆ ವರ್ಗಾಯಿಸಿ ಅಲ್ಲಿ ಬಿಡುಗಡೆ ಮಾಡಿತು.

ಈ ನಡುವೆ ಕಳೆದ ಫೆಬ್ರವರಿಯಲ್ಲಿ ಸ್ಥಗಿತಗೊಂಡಿದ್ದ ಇಸ್ರೇಲ್-ಪ್ಯಾಲೆಸ್ಟೇನ್ ಮಾತುಕತೆ ಮತ್ತೆ ಆರಂಭವಾಗುತ್ತಿದೆ ಎನ್ನಲಾಗುತ್ತಿದೆ. ಆಕ್ಟೋಬರ್ 8 ರಂದು ಇಸ್ರೇಲಿ ಪ್ರಧಾನಿ ನೇತನ್ಯಾಹು ಹಾಗೂ ಪ್ಯಾಲೆಸ್ಟೇನ್ ಅಧ್ಯಕ್ಷ ಅರಾಫತ್ ಅಮೆರಿಕಾದ ಡೆನಿಸ್ ರಾಸ್ ಮಧ್ಯಸ್ಥಿಕೆಯಲ್ಲಿ ಗುಪ್ತವಾಗಿ ಭೇಟಿ ನಡೆಸಿ, 'ಶಾಂತಿ ಪ್ರಕ್ರಿಯೆ'ಯನ್ನು ಮುದುವರೆಸುವ ಪ್ರಯತ್ನ ನಡೆಸಿದ್ದಾರಂತೆ. ಆದರೆ ನೇತನ್ಯಾಹು ಸರಕಾರದ ನಿಲುವು ಶಾಂತಿ ಪ್ರಕ್ರಿಯೆಗೆ ಪೂರಕವಾಗಿಲ್ಲ ಎಂಬುದಂತೂ ಎಲ್ಲರಿಗೂ ಸ್ಪಷ್ಟವಾಗಿದೆ.

ಕ್ಯೂಬಾವನ್ನು ಮಣಿಸಲು ಈಗ ಭಯೋತ್ಪಾದನೆಗೆ ಶರಣು

ತೀವ್ರ ಆರ್ಥಿಕ ದಿಗ್ಬಂಧನಗಳನ್ನು ಹೇರಿದರೂ ಸಮಾಜವಾದಿ ಕ್ಯೂಬಾದ ಅದಮ್ಯ ಚೇತನವನ್ನು ಬಗ್ಗುಬಡಿಯಲಾರದೆ ಹೋದ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಆಳರಸರು ಈಗ ತಮ್ಮ ದುಷ್ಟ ಗುರಿ ಈಡೇರಿಕೆಗೆ ಭಯೋತ್ಪಾದಕ ಕ್ರಮಗಳಿಗಿಳಿದಂತೆ ಕಾಣುತ್ತಿದೆ.

ಇತ್ತೀಚೆಗೆ ಹವಾನಾದ ಹಲವು ಹೋಟೇಲು, ರೆಸ್ಟೋರೆಂಟ್‌ಗಳಲ್ಲಿ ನಡೆದಿರುವ ಬಾಂಬ್ ಸ್ಫೋಟಗಳ ತನಿಖೆಯಿಂದ ಅದು ಹೊರಬಿದ್ದಿದೆ. ಅಮೆರಿಕಾದಲ್ಲಿರುವ ಕ್ಯೂಬಾದ ವಲಸಿಗರು ಅಮೆರಿಕನ್ ಸರಕಾರದ ಶಾಮೀಲಿನಿಂದ ಈ ಕೃತ್ಯಗಳನ್ನು ಎಸಗಿರುವುದು ಕಂಡು ಬಂದಿದೆ. ಅಮೆರಿಕಾದ ಆರ್ಥಿಕ ದಿಗ್ಬಂದನಗಳನ್ನು ಎದುರಿಸಲು ಇತ್ತೀಚೆಗೆ 20 ನಿಮಿಷಗಳ ಅಂತರದಲ್ಲಿ ನಡೆದ ಸರಣೀಸ್ಫೋಟದ ತನಿಖೆ ನಡೆಸಿದ ಕ್ಯೂಬಾದ ಭದ್ರತಾ ಪಡೆಗಳು ಎಲ್‌ಸಾಲ್ವಡೇರ್‌ನ ಪ್ರವಾಸಿಯಾಗಿ ಬಂದ ರಾವುಲ್ ಅರ್ನೆಸ್ಟೋ ಕ್ರುಝ್ ಲಿಯೆನ್‌ನ್ನು ಬಂಧಿಸಿದರು.

ಆತನು ಈ ಸರಣಿ ಸ್ಫೋಟಗಳನ್ನು ತಾನು ನಡೆಸಿದ್ದು ಎಂದು ಒಪ್ಪಿಕೊಂಡಿದ್ದಾನೆ.

ಕ್ಯೂಬಾದ ಆಂತರಿಕ ಸಚಿವಾಲಯದ ಪತ್ರಿಕಾ ಹೇಳಿಕೆಯ ಪ್ರಕಾರ ಈತ ವಿದೇಶದಲ್ಲಿ ತರಬೇತಿ ಪಡೆದ, ಸ್ಫೋಟಕಗಳನ್ನು ಹಾಗೂ ಹಣವನ್ನು ಪಡೆಯುತ್ತಿರುವ ಬಾಡಿಗೆ ಹಂತಕ ಎಂದು ಸ್ಪಷ್ಟವಾಗಿದೆ. ಒಂದು ಬಾಂಬ್ ಸ್ಫೋಟಕ್ಕೆ ಆತನಿಗೆ 4000 ಡಾಲರ್ (ಸುಮಾರು ಒಂದೂವರೆ ಲಕ್ಷ ರೂಪಾಯಿ) ಸಿಗುತ್ತಲಿದೆ. ಎಲ್ಲೆಲ್ಲಾ ಬಾಂಬ್ ಸ್ಫೋಟಿಸಬೇಕು ಎಂಬುದರ ಪಟ್ಟಿಯನ್ನು ಹಾಗೂ ಅತ್ಯಾಧುನಿಕ ಸ್ಫೋಟಕಗಳನ್ನು ಆತನಿಗೆ ಒದಗಿಸಲಾಗುತ್ತಿತ್ತು. ಪ್ರವಾಸಿಯ ಮಾರುವೇಷದಲ್ಲಿ ಆತನನ್ನು ಕ್ಯೂಬಾಕ್ಕೆ ಕಳಿಸಲಾಗುತ್ತಿತ್ತು. ಇದೇ ರೀತಿ ಇನ್ನೂ ಹಲವರನ್ನು ಕಳುಹಿಸಿರುವ ಅಮೆರಿಕಾದ ಮಿಯಾಮಿನಲ್ಲಿರುವ 'ಕ್ಯೂಬನ್-ಅಮೆರಿಕನ್ ನ್ಯಾಶನಲ್ ಫೌಂಡೇಶನ್' ಈ ಕೃತ್ಯಗಳನ್ನು ನಡೆಸುತ್ತಿದೆ ಎಂದು ತಿಳಿದು ಬಂದಿದೆ. ಮಿಯಾಮಿಯ ಇಂತಹ ಗುಂಪುಗಳು ಅಂತರ್ರಾಷ್ಟ್ರೀಯ ಮಾದಕ ವಸ್ತು ಸಾಗಾಣಿಕೆದಾರರು ಹಾಗೂ ಭಯೋತ್ಪಾದಕರೊಂದಿಗೆ ನಿಕಟ ಸಂಪರ್ಕ ಹೊಂದಿವೆ ಎಂದೂ ತಿಳಿದುಬಂದಿದೆ. ಏಪ್ರಿಲ್ 1994 ರಿಂದ ಸೆಪ್ಟೆಂಬರ್ 1997 ರ ನಡುವೆ 30 ಕ್ಕೂ ಹೆಚ್ಚು ಭಯೋತ್ಪಾದಕ ಧಾಳಿಗಳ ಯೋಜನೆಯಾಗಿದ್ದವು. ಇದನ್ನು ಪತ್ತೆ ಹಚ್ಚಿದ ಕ್ಯೂಬಾದ ಭದ್ರತಾ ಸಿಬ್ಬಂದಿ ಹಲವಾರು ಮಾರುವೇಷದ ಪ್ರವಾಸಿಗಳನ್ನು ಬಂಧಿಸಿ ಅವರಿಂದ ಅತ್ಯಾಧುನಿಕ ಸ್ಫೋಟಕಗಳನ್ನು ವಶಪಡಿಸಿಕೊಂಡಿದೆ. ಈ 'ಪ್ರವಾಸಿ'ಗಳೆಲ್ಲಾ ಅಮೆರಿಕಾದ ಮೂಲಕವೇ ಬಂದಿದ್ದವರು ಎಂಬುದು ಗಮನಾರ್ಹ.

1990 ರ ದಶಕದ ಆರಂಭದಿಂದ ಪ್ರವಾಸೋದ್ಯಮದಿಂದ ಕ್ಯೂಬಾದ ಸಂಕಟಗ್ರಸ್ತ ಆರ್ಥಿಕಕ್ಕೆ ಬೇಕಾಗಿರುವ ವಿದೇಶಿ ವಿನಿಮಯ ಸಾಕಷ್ಟು ಪ್ರಮಾಣದಲ್ಲಿ ಬರಲಾರಂಭಿಸಿದೆ. ಕಳೆದ ವರ್ಷ ಈ ಪುಟ್ಟ ದ್ವೀಪಕ್ಕೆ ಭೇಟಿ ನೀಡಿದ 10 ಲಕ್ಷ ಪ್ರವಾಸಿಗರಿಂದ 130 ಕೋಟಿ ಡಾಲರುಗಳ ವಿದೇಶೀ ವಿನಿಮಯ ದೊರೆತಿದ್ದು, ಈ ವರ್ಷ ಅದು 170 ಕೋಟಿ ಡಾಲರುಗಳಿಗೇರುವ ನಿರೀಕ್ಷೆಯಿದೆ. ಇದನ್ನು ತಡೆಯುವುದು ಅಮೆರಿಕಾದ ಮಿಯಾಮಿಯಲ್ಲಿರುವ ಕ್ಯೂಬನ್ ವಲಸಿಗರ ಉದ್ದೇಶ. ಇದಕ್ಕೆ ಅಮೆರಿಕಾ ಸರಕಾರದಿಂದ ಪರೋಕ್ಷ ಬೆಂಬಲವಿದೆಯೆಂಬುದೂ ಸ್ಪಷ್ಟ. ಒಂದು ಪ್ರಸಿದ್ಧ ಸ್ಪೇನ್‌ನ ಕಂಪನಿ ಹವಾನಾದಲ್ಲಿ ಹಲವಾರು ಪ್ರವಾಸೀ ಹೋಟೆಲುಗಳನ್ನು ತೆರೆದಿದ್ದು ಅವನ್ನು ಮುಚ್ಚಬೇಕೆಂದು ಈ ಕ್ಯೂಬಾ-ವಿರೋಧಿ ಗುಂಪುಗಳು ಬೆದರಿಸಿದ್ದವು.

ಈ ಕ್ರಾಂತಿ-ವಿರೋಧಿ ಗುಂಪುಗಳು ಪ್ರವಾಸೀ ಉದ್ಯಮದ ಮೇಲೆ ಗುರಿಯಿಡಲು ಇನ್ನೊಂದು ಕಾರಣವೂ ಇದೆ. ಕ್ಯೂಬಾಕ್ಕೆ ಬಂದ ಪ್ರವಾಸಿಗರು ಕ್ಯೂಬನ್ನರ ಧೈರ್ಯ, ಸಾಹಸ, ಅದಮ್ಯ ಉತ್ಸಾಹವನ್ನು ಕಣ್ಣಾರೆ ಕಂಡು ಅಮೆರಿಕನ್ ಸಾಮ್ರಾಜ್ಯಶಾಹಿಯ ಕುಯುಕ್ತಿಗಳ ಬಗ್ಗೆ ಬೇಸರ ಪಡುವಂತಾಗುತ್ತಿದೆ. "ಯಾರನ್ನಾದರೂ ಕೊಲ್ಲುವುದು ಈ ಯೋಜನೆಯ ಉದ್ದೇಶವಲ್ಲ. ಪ್ರವಾಸಿಗರು ಕ್ಯೂಬಾದ ಆರ್ಥಿಕವನ್ನು ಕಾಪಾಡಿಕೊಳ್ಳಲು ನೆರವಾಗುತ್ತಿದ್ದಾರೆ. ಆದ್ದರಿಂದ ಪ್ರವಾಸಿಗರು ಕ್ಯೂಬಾಕ್ಕೆ ಬರುವ ಸಾಧ್ಯತೆಯನ್ನು ನಾಶ ಮಾಡುವುದು ಈ ಯೋಜನೆಯ ಉದ್ದೇಶ" ಎಂದು ಅಮೆರಿಕಾದ ಮಿಯಾಮಿಯಲ್ಲಿರುವ ಒಂದು ಕ್ಯೂಬಾ-ವಿರೋಧಿ ಗುಂಪು ಇತ್ತೀಚಿನ ಒಂದು ಸರಣಿಸ್ಫೋಟದ ನಂತರ ಹೇಳಿಕೊಂಡಿದೆ.

ಜಪಾನಿ ಕಮ್ಯುನಿಸ್ಟ್ ಪಕ್ಷ: ಉನ್ನತ ನೈತಿಕ ಮಟ್ಟ, ವಿಶ್ವಾಸಾರ್ಹತೆ ನೀಡಿದ ಆತ್ಮ ವಿಶ್ವಾಸದಿಂದ ಮುನ್ನಡೆಯಲು ಸಜ್ಜು

ಜಪಾನೀ ಕಮ್ಯುನಿಸ್ಟ್ ಪಕ್ಷದ 21 ನೇ ಮಹಾಧಿವೇಶನ ಸೆಪ್ಟೆಂಬರ್ 22 ರಿಂದ 26 ರವರೆಗೆ ಅತಾಮಿನಲ್ಲಿ ನಡೆದು ಕೆಲವು ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಂಡಿತು. "ಇದೊಂದು ಚಾರಿತ್ರಿಕ ಮಹಾಧಿವೇಶನವಾಗಿ ಬಿಟ್ಟಿದೆ. 21 ನೇ ಶತಮಾನದ ಆರಂಭಿಕ ಹಂತದಲ್ಲಿ ಒಂದು ಪ್ರಜಾಪ್ರಭುತ್ವವಾದಿ ಸರಕಾರವನ್ನು ರಚಿಸುವ ನಮ್ಮ ಬೃಹತ್ ಗುರಿಯ ಬಗ್ಗೆ ನಿರ್ಧರಿಸಿದ್ದೇವೆ. ನಮ್ಮ ದೃಢ ಐಕ್ಯತೆಯನ್ನು ತೋರಿಸಿಕೊಟ್ಟಿದ್ದೇವೆ" ಎಂದರು ಹೊಸದಾಗಿ ಆಯ್ಕೆಗೊಂಡ ಜಪಾನೀ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಮಂಡಳಿಯ ಅಧ್ಯಕ್ಷರಾದ ತೆತ್ಸು ಝು ಫುವಾ.

ಈ ಮಹಾಧಿವೇಶನದಲ್ಲಿ ಹಿಂದಿನ ಕೇಂದ್ರ ಸಮಿತಿ ಹೊಸ ಕೇಂದ್ರ ಸಮಿತಿಗೆ 158 ಹೆಸರುಗಳನ್ನು ಹಾಗೂ ಪರ್ಯಾಯ ಸದಸ್ಯರಾಗಿ 29 ಹೆಸರುಗಳನ್ನು ಸೂಚಿಸಿತ್ತು. ಪ್ರತಿನಿಧಿಗಳಿಗೆ ಹೊಸ ಲಿಖಿತ ಪ್ರಸ್ತಾವಗಳನ್ನು ಸೇರಿಸುವುದಕ್ಕೂ ಅವಕಾಶ ಇತ್ತು. ಅದಕ್ಕೆ ಸಾಕಷ್ಟು ಸಮಯಾವಕಾಶವನ್ನು ನೀಡ ಲಾಗಿತ್ತು. ಹೊಸ ಪ್ರಸ್ತಾವಗಳೇನೂ ಬರಲಿಲ್ಲ. ಆದರೂ ಗುಪ್ತ ಮತದಾನ ನಡೆಯಿತು. ಯಾವುದೇ ಅಭ್ಯರ್ಥಿಗೆ 50% ಕ್ಕಿಂತ ಹೆಚ್ಚು ಪ್ರತಿನಿಧಿಗಳು 'ಅವಿಶ್ವಾಸ' ಮತ ನೀಡಿದರೆ ಆತ ಚುನಾಯಿತನಾಗುವುದಿಲ್ಲ. ಆದರೆ ಈ ಮಹಾಧಿವೇಶನದಲ್ಲಿ ಅಂತಹ ಪರಿಸ್ಥಿತಿ ಬರಲಿಲ್ಲ. 158 ಕೇಂದ್ರ ಸಮಿತಿ ಸದಸ್ಯರು ಹಾಗೂ 29 ಪರ್ಯಾಯ ಸದಸ್ಯರು ಆಯ್ಕೆಯಾದರು.

ಹಿಂದೆ ಕೇಂದ್ರ ಸಮಿತಿ ಅಧ್ಯಕ್ಷರಾಗಿದ್ದ ಪಕ್ಷದ ಹಿರಿಯ ಮುಖಂಡ ಕೆಂಜಿ ಮಿಯಾಮೊಟೋ ತನ್ನ ಜವಾಬ್ದಾರಿಗಳನ್ನು ಈಗ ನಿರ್ವಹಿಸಲಾಗುತ್ತಿಲ್ಲವಾದ್ದರಿಂದ ತನ್ನನ್ನು ಬಿಡುಗಡೆ ಮಾಡಬೇಕೆಂದು ಕೇಳಿದ್ದರು. ಆದ್ದರಿಂದ ಅಧ್ಯಕ್ಷರ ಸ್ಥಾನವನ್ನು ತೆರವಾಗಿಟ್ಟು ಅವರನ್ನು ಗೌರವ ಅಧ್ಯಕ್ಷರನ್ನಾಗಿ ಮಾಡಿ 64 ವರ್ಷ ಜಪಾನೀ ಕಮ್ಯುನಿಸ್ಟ್ ಪಕ್ಷಕ್ಕೆ ಸೇವೆ ಸಲ್ಲಿಸಿದ ಮಿಯಾಮೊಟೋ ಅವರನ್ನು ಗೌರವಿಸಲಾಯಿತು.

ಹೊಸ ಕೇಂದ್ರಸಮಿತಿ 57 ಸದಸ್ಯರಿರುವ ಅಧ್ಯಕ್ಷ ಮಂಡಳಿಯನ್ನು ಹಾಗೂ 19 ಸದಸ್ಯರಿರುವ ಸ್ಥಾಯೀ ಸಮಿತಿಯನ್ನು ಆರಿಸಿತು. ತೆತ್ಸುಝು ಫುವಾ ಅಧ್ಯಕ್ಷ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಗೊಂಡರು. 14 ಸದಸ್ಯರಿರುವ ಕಾರ್ಯದರ್ಶಿ ಮಂಡಳಿಯೊಂದನ್ನು ಕೇಂದ್ರಸಮಿತಿ ಆರಿಸಿತು. ಹೊಸ ಕೇಂದ್ರ ಸಮಿತಿಯಲ್ಲಿ ಹಿಂದಿನ ಕೇಂದ್ರ ಸಮಿತಿಯ 37 ಸದಸ್ಯರನ್ನು ಕೈ ಬಿಟ್ಟು 35 ಹೊಸಬರನ್ನು ಸೇರಿಸಲಾಗಿದೆ. ಇವರಲ್ಲಿ 29 ಮಂದಿ ಸ್ಥಳೀಯ ಸಮಿತಿಗಳಿಂದ ಬಂದವರು.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯಚೂರಿಯವರು ಸೋದರ ಪ್ರತಿನಿಧಿಯಾಗಿ ಈ ಮಹಾಧಿವೇಶನದಲ್ಲಿ ಭಾಗವಹಿಸಿದ್ದರು.


ಈಗಾಗಲೇ ವರದಿಯಾಗಿರುವಂತೆ ಜಪಾನೀ ಕಮ್ಯುನಿಸ್ಟ್ ಪಕ್ಷ ಅಮೆರಿಕಾದ ಜಪಾನ್ ಭದ್ರತಾ ಸಂಸ್ಥೆಯ ಮಾರ್ಗದರ್ಶಕ ಸೂತ್ರಗಳ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳಿಗೆ ಕರೆ ನೀಡಿದ್ದು, ಅದಕ್ಕೆ ವ್ಯಾಪಕ ಬೆಂಬಲ ದೊರೆತಿದೆ. ಕಮ್ಯುನಿಸ್ಟ್ ಮೇಯರುಗಳು ತಮ್ಮ ಪ್ರದೇಶಗಳಲ್ಲಿ ಅಮೆರಿಕ ಮಿಲಿಟರಿ ನೆಲೆಗಳು ಅಥವಾ ಕವಾಯತು ನಡೆಸುವ ಮೊದಲು ಜನಮತ ಸಂಗ್ರಹಣೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಜಪಾನಿನಲ್ಲಿ ಅಮೆರಿಕಾದ ಪಡೆಗಳ ರವಾನೆ, ಚಲನೆಗೆ ಅಗತ್ಯವಾದ ವಿಮಾನ ನಿಲ್ದಾಣಗಳು, ಹೆಲಿಕಾಪ್ಟರ್ ನಿಲ್ದಾಣಗಳು ಇತ್ಯಾದಿಗಳನ್ನು ರಚಿಸುವ ಬಗ್ಗೆ ಹೇಳಿರುವ ಈ ಹೊಸ ಸಂಧಿ ಒಂದು ರಾಜಕೀಯವಾಗಿ ಸ್ಫೋಟಕವಾಗಬಹುದಾದ ಪ್ರಶ್ನೆಯಾಗಿದೆ. ಈ ಪ್ರಶ್ನೆಯ ಆಧಾರದಲ್ಲಿ ಜನಸಾಮಾನ್ಯರೊಂದಿಗೆ ಬಲವಾದ ಸಂಪರ್ಕ ಬೆಸೆಯಲು ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ.

ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನವನ್ನು ಉಪೇಕ್ಷಿಸುವ ಜಪಾನೀ ಪತ್ರಿಕೆಗಳು ಈ ಬಾರಿ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ ಇದಕ್ಕೆ ಕಾರಣ ಇತ್ತೀಚೆಗೆ ಎಲ್ಲಾ ರಾಜಕೀಯ ಪಕ್ಷಗಳ ಆಯ-ವ್ಯಯ ಪಟ್ಟಿಗಳು ಬಿಡುಗಡೆಯಾಗಿದ್ದು ಕಮ್ಯುನಿಸ್ಟ್ ಪಕ್ಷವೊಂದನ್ನು ಬಿಟ್ಟು ಬೇರೆಲ್ಲಾ ಜಪಾನೀ ರಾಜಕೀಯ ಪಕ್ಷಗಳ ಉಳಿವು ದೊಡ್ಡ ಕಂಪನಿಗಳ ಭಾರೀ ವಂತಿಕೆಗಳನ್ನು ಅವಲಂಬಿಸಿದ್ದು ಬಯಲಾಯಿತು. ವಾಸ್ತವವಾಗಿ ಜಪಾನಿನಲ್ಲಿ ಇದು ಭ್ರಷ್ಟಾಚಾರದ ಅತಿ ದೊಡ್ಡ ಮೂಲ. ಏಕೆಂದರೆ ದೊಡ್ಡ ಕಂಪನಿಗಳು ಪ್ರತಿಫಲದ ನಿರೀಕ್ಷೆಯಿಲ್ಲದೆ ವಂತಿಗೆ ಕೊಡುವುದಿಲ್ಲ. ಇತ್ತೀಚೆಗೆ ಬೆಳಕಿಗೆ ಬಂದ ಹಲವಾರು ಹಗರಣಗಳು ಇದಕ್ಕೆ ಸಾಕ್ಷಿ.


ಹೀಗೆ ಉನ್ನತ ವಿಶ್ವಾಸಾರ್ಹತೆ, ನೈತಿಕ ಮಟ್ಟವನ್ನು ಗಳಿಸಿರುವ ಜಪಾನೀ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನ ಜಪಾನೀ ಜನತೆಗೆ ಮುಖಂಡತ್ವ ನೀಡುವ ಆತ್ಮವಿಶ್ವಾಸದೊಂದಿಗೆ ಮುಕ್ತಾಯಗೊಂಡಿತು ಎಂದು ಸೀತಾರಾಂ ಯಚೂರಿಯವರು ಹೇಳಿದ್ದಾರೆ.

(ಐ.ಎನ್.ಎನ್)

ಜಪಾನೀ ಕಮ್ಯುನಿಸ್ಟ್ ಪಕ್ಷದ ಮಹಾಧಿವೇಶನದ ವೇದಿಕೆಯ ಮೇಲೆ ಸೌಹಾರ್ದ ಪ್ರತಿನಿಧಿಗಳಿಗೆ ಸ್ವಾಗತ



'ಚೆ' ನೆನಪು – 30 ವರ್ಷಗಳ ನಂತರ



ಅರ್ಜೆಂಟೈನಾ ಚೆ ಯವರ ಸ್ಮಾರಕಾರ್ಥ ಪ್ರಕಟಿಸಿರುವ ವಿಶೇಷ ಅಂಚೆ ಚೀಟಿ

ಅಕ್ಟೋಬರ್ 7 ರಂದು ಬೊಲಿವಿಯಾದ ರಾಜಧಾನಿ ಲಾಪಾಝ್‌ನಿಂದ 815 ಕಿ.ಮಿ. ದೂರದಲ್ಲಿರುವ ವಿಲ್ಲೆಗ್ರಾಂಡ್‌ನಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮ ನಡೆಯಿತು. ಇದೇ ಸ್ಥಳದಲ್ಲಿ 30 ವರ್ಷಗಳ ಹಿಂದೆ ಲ್ಯಾಟಿನ್ ಅಮೆರಿಕಾದ ಕ್ರಾಂತಿಕಾರಿಗಳ ಕಣ್ಮಣಿ, ಕ್ಯಾಸ್ಟ್ರೋರವರ ನಿಕಟ ಸಂಗಾತಿ ಅರ್ನೆಸ್ಟೋ ಚೆಗವಾರಾ ಲ್ಯಾಟಿನ್ ಅಮೆರಿಕಾದ ಜನ ಸಾಮಾನ್ಯರ ವಿಮೋಚನೆಗಾಗಿ ಬೊಲಿವಿಯನ್ ಕಾಡುಗಳಲ್ಲಿ ಗೆರಿಲ್ಲಾ ಸಮರ ನಡೆಸುತ್ತಿದ್ದಾಗ ಬೊಲಿವಿಯಾದ ಮಿಲಿಟರಿ ಸರ್ವಾಧಿಕಾರಿಗಳ ಗುಂಡಿಗೆ ಬಲಿಯಾಗಿ ಹುತಾತ್ಮರಾದರು.

ಅಕ್ಟೋಬರ್ 7 ರಂದು ವಿಶ್ವದ ಹಲವೆಡೆಯಿಂದ ಚೆಗವಾರಾರವರ ಸಾವಿರಾರು ಅಭಿಮಾನಿಗಳು ಈ ಹಳ್ಳಿಗೆ ಬಂದು ಚೆಗವಾರಾರನ್ನು ನೆನಪಿಸಿ ಕೊಂಡರು. ನೂರಾರು ಸ್ಥಳೀಯ ಮಂದಿ ಈ ಉತ್ಸವದಂತಹ ಕಾರ್ಯಕ್ರಮದಲ್ಲಿ ತಮ್ಮ ಜಾನಪದ ಹಾಡು-ಕುಣಿತಗಳೊಡನೆ ಭಾಗವಹಿಸಿದರು. ಈ ಹಳ್ಳಿಯ [illegible] 'ಚೆ'ಯವರನ್ನು ಸಂತನಂತೆ ಗೌರವಿಸುತ್ತಾರೆ. ಫ್ರಾನ್ಸಿನ ಮಾಜಿ ಸಮಾಜವಾದಿ ಅಧ್ಯಕ್ಷ ಮಿತ್ತೆರಾಂರವರ ಪತ್ನಿ ಡೇನಿಯೆಲಾ ಮಿತ್ತರಾಂ ಕೂಡಾ ಇದರಲ್ಲಿ ಭಾಗವಹಿಸಿದರು. ನೂರಾರು ಸಂಗೀತಗಾರರು, ಕಲಾವಿದರು, ರಾಜಕೀಯ ಹಾಗೂ ಕಾರ್ಮಿಕ ಮುಖಂಡರೂ ಸೇರಿದಂತೆ ಒಟ್ಟು 3000 ಮಂದಿ ಈ ಸಮಾರಂಭದಲ್ಲಿ ಭಾಗವಹಿಸಿದರು ಎಂದು ಹೇಳಲಾಗಿದೆ.

ಎಡಪಂಥೀಯ ಲ್ಯಾಟಿನ್ ಅಮೆರಿಕನ್ ಕಲಾವಿದರ ಸಂಗೀತ ಕಾರ್ಯಕ್ರಮಗಳು, ಚಿತ್ರಕಲೆ ಹಾಗೂ ಫೋಟೋ ಪ್ರದರ್ಶನ, ವಿಚಾರಸಂಕಿರಣಗಳನ್ನು ಯೋಜಿಸ ಲಾಗಿದೆ.

ಅತ್ತ ಬೊಲಿವಿಯಾದ ಮಿಲಿಟರಿ ಮಂದಿ ಇದರಿಂದ ಕುಪಿತರಾಗಿ ತಮ್ಮ 'ವಿಜಯ'ದ 30ನೇ ವಾರ್ಷಿಕೋತ್ಸವವನ್ನು ಆಚರಿಸುವ ಸಿದ್ಧತೆ ನಡೆಸಿದ್ದಾರಂತೆ. ಗೆರಿಲ್ಲಾ ಹೋರಾಟವನ್ನು ಬಗ್ಗುಬಡಿಯಲು ಪ್ರಯತ್ನಿಸಿದ ಬೊಲಿವಿಯಾದ ಮಾಜಿ ಅಧ್ಯಕ್ಷ ಹಾಗೂ ಸರ್ವಾಧಿಕಾರಿ ಜನರಲ್ ಹ್ಯುಗೋ ಬಂಝರ್ ಈ ಆಚರಣೆಯ ನೇತೃತ್ವ ವಹಿಸುತ್ತಿರುವುದು [illegible] ಹೋರಾಟದ, ಬಲಿದಾನದ ಮಹತ್ವವನ್ನು ಈಗಿನ ಪೀಳಿಗೆಗೂ ಮನದಟ್ಟು ಮಾಡಿಸುತ್ತದೆ.

ಸಾರ್ವಜನಿಕ ಪ್ರಸಾರ ವ್ಯವಸ್ಥೆ
ಸರಕಾರೀ ಹತೋಟಿ ತೆಗೆದು ಸಂಸತ್ತಿನ ಉಸ್ತುವಾರಿ ಬೇಕು

ಈಗ ಸಂಸತ್ತಿನ ಆಯ್ಕೆಸಮಿತಿಯ ಮುಂದಿರುವ ಪ್ರಸಾರ ಮಸೂದೆಯನ್ನು ಸಂಪೂರ್ಣವಾಗಿ ಪುನರ್ರೂಪಿಸಬೇಕು. ಏಕೆಂದರೆ ಅದು ಈಗ ಇಲೆಕ್ಟ್ರಾನಿಕ್ ಮಾಧ್ಯಮದ ಖಾಸಗೀಕರಣದ ಮೇಲೆ ಒತ್ತು ನೀಡಿದೆ. ಪ್ರಸಾರಭಾರತಿ ಶಾಸನದ ಪಾತ್ರವನ್ನು ಬುಡಮೇಲು ಮಾಡುವಂತಹ ಸ್ವರೂಪ ಹೊಂದಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಆಗ್ರಹ ಪಡಿಸಿದ್ದಾರೆ.

1990 ರ ಪ್ರಸಾರ ಭಾರತಿ ಶಾಸನದ ಉದ್ದೇಶ ದೂರದರ್ಶನ ಹಾಗೂ ಆಕಾಶವಾಣಿ ಪ್ರಸಾರಕ್ಕೆ ಒಂದು ಸ್ವಾಯತ್ತ ನಿಗಮವನ್ನು ಸ್ಥಾಪಿಸುವುದು. ಆದರೆ ಹಿಂದಿನ ಕಾಂಗ್ರೆಸ್ ಸರಕಾರ ದೂರದರ್ಶನ ಮತ್ತು ಆಕಾಶವಾಣಿಗೆ ಸ್ವಾಯತ್ತತೆ ಕೊಡಬಯಸ ಲಿಲ್ಲವಾದ್ದರಿಂದ ಅದನ್ನೂ ಜಾರಿಗೆ ತರಲಿಲ್ಲ. ಈಗ ತಂದಿರುವ ಪ್ರಸಾರ ಮಸೂದೆಯನ್ನು ಅಂಗೀಕರಿಸುವ ಮೊದಲು ಈ ಶಾಸನವನ್ನು ಜಾರಿಗೆ ತರಬೇಕು. ಈ ಹಿನ್ನೆಲೆಯಲ್ಲಿ ಸಂಯುಕ್ತ ರಂಗ ಸರಕಾರ ಹೊರಡಿಸಿರುವ ಪ್ರಕಟಣೆ ಸ್ವಾಗತಾರ್ಹ ಎಂದು ಪ್ರಕಾಶ್ ಕಾರಟ್ ಹೇಳಿದ್ದಾರೆ.

ಆದರೆ 'ಪ್ರಸಾರ ಭಾರತಿ' ಯನ್ನು ರಚಿಸಿ ಅದಕ್ಕೆ ನಿಜವಾದ ಸ್ವಾಯತ್ತತೆ ಕೊಡಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯ. ಈ ಸಂಸ್ಥೆಯ ಪ್ರಮುಖ ಸಿಬ್ಬಂಧಿ ಯಾರಿರುತ್ತಾರೆ ಎಂಬುದರ ಮೇಲೆ ಈ ಸ್ವಾಯತ್ತತೆ ಎಷ್ಟು ಪರಿಣಾಮಕಾರಿ ಯಾಗುತ್ತದೆ ಎಂದು ಹೇಳಬಹುದು. ಆದ್ದರಿಂದ ಇದರ ನಿರ್ವಹಣಾ ಮಂಡಳಿ ಈಗಿರುವ ಅಥವಾ ನಿವೃತ್ತರಾದ ಅಧಿಕಾರ ಶಾಹಿಗಳಿಂದಲೇ ತುಂಬಿರದಂತೆ ಎಚ್ಚರ ವಹಿಸಬೇಕೆಂದು ಕಾರಟ್‌ರವರು ಎಚ್ಚರಿಸಿದ್ದಾರೆ.

'ಪ್ರಸಾರ ಭಾರತಿ' ಯ ಸ್ವರೂಪ ಹೇಗಿರಬೇಕು?

ಸರಕಾರೀ ವ್ಯವಸ್ಥೆಗೆ ಒಂದು ಪರ್ಯಾಯ ಪ್ರಜಾಸತ್ತಾತ್ಮಕ ಸಾರ್ವಜನಿಕ ಪ್ರಸಾರ ಸೇವೆಯಾಗಿ ಪ್ರಸಾರ ಭಾರತಿ ಮೂಡಿಬರಬೇಕು. ಇಲ್ಲಿ ಸ್ವಾಯತ್ತತೆಯೇ ಇದರ ಅಂತಿಮ ಗುರಿಯಲ್ಲ, ಅದು ಸಾರ್ವಜನಿಕ ಪ್ರಸಾರ ಸೇವೆ ಒದಗಿಸಲು ಒಂದು ಸಾಧನವಾಗಬೇಕು ಎಂದು ಹೇಳಿರುವ ಇವರು ಈ ಬಗ್ಗೆ ಇರುವ ಗೊಂದಲದತ್ತ ಗಮನ ಸೆಳೆದಿದ್ದಾರೆ.

ಸಾರ್ವಜನಿಕ ಪ್ರಸಾರ ವ್ಯವಸ್ಥೆಯೆಂದರೆ ಖಾಸಗೀ ಪ್ರಸಾರವಲ್ಲ, ಪ್ರಸಾರ ಭಾರತೀ ನಿಗಮ ಕೇವಲ ಲಾಭ ಗಳಿಸಲು ವ್ಯಾಪಾರೀ ವಿಧಾನ ಅನುಸರಿಸುವ ಒಂದು ಸಂಸ್ಥೆಯಾಗ ಬಾರದು. ಅದು ಮಾಹಿತಿ ಒದಗಿಸುವ, ಶಿಕ್ಷಣ, ಮನರಂಜನೆ ನೀಡುವ, ಪ್ರಜಾ ಸತ್ತಾತ್ಮಕ ಹಾಗೂ ಧರ್ಮನಿರಪೇಕ್ಷ ಮೌಲ್ಯ ಗಳನ್ನು ಪೋಷಿಸುವ ಪಾತ್ರ ವಹಿಸಬೇಕು.

ಪ್ರಸಾರ ಭಾರತಿ ಇನ್ನೊಂದು ಮಾರುಕಟ್ಟೆ ಆಧರಿಸಿ ವಾಣಿಜ್ಯ ಪ್ರಯತ್ನವಾಗಿ ಪರಿವರ್ತನೆಗೊಂಡರೆ ಅದಕ್ಕಿಂತ ದೊಡ್ಡ ವಿಪರ್ಯಾಸ ಬೇರಿಲ್ಲ. ಏಕೆಂದರೆ ಅದು ಆಗ ಸಾರ್ವಜನಿಕ ಪ್ರಸಾರ ವ್ಯವಸ್ಥೆಯಾಗ ಲಾರದು. ಮಾರುಕಟ್ಟೆ ಶಕ್ತಿಗಳ, ವಾಣಿಜ್ಯ ಪ್ರಾಯೋಜಕರ ಮರ್ಜಿಯಂತೆ ಅದು ನಡೆಯದೆ ದೇಶದ ಸಾಂಸ್ಕೃತಿಕ ಭಿನ್ನತೆಯನ್ನು ಅಭಿವ್ಯಕ್ತಿಸುವಂತಾಗಬೇಕು. ಈ ಹಿನ್ನೆಲೆ ಯಲ್ಲಿ ಪ್ರಸಾರ ವ್ಯವಸ್ಥೆಯ ಮೇಲೆ ಸರಕಾರಿ ಹತೋಟಿಯ ಬದಲು ಸಂಸತ್ತಿನ ಉಸ್ತು ವಾರಿ ಬೇಕಾಗುತ್ತದೆ. ಸ್ವಾಯತ್ತತೆ ಯನ್ನು ಈ ದೃಷ್ಟಿಯಿಂದ ನೋಡಬೇಕು.

'ಪ್ರಸಾರ ಭಾರತಿ' ಯಲ್ಲಿ ಕೆಲವು ತಿದ್ದುಪಡಿ

ಪ್ರಸಾರ ಭಾರತಿಯನ್ನು ಒಂದು ಸ್ವಾಯತ್ತ ಪ್ರಸಾರ ಸೇವೆಯಾಗಿ ರಚಿಸಿದ ಮೇಲೆ ಖಾಸಗಿ ಪ್ರಸಾರಕರು ಹಾಗೂ ಅವರ ಪಾತ್ರದ ಪ್ರಶ್ನೆಯನ್ನು ಪರಿಶೀಲಿಸಬಹುದು ಎಂದು ಪ್ರಕಾಶ್ ಕಾರಟ್ ಹೇಳುತ್ತಾರೆ.

ಪ್ರಾಸ್ತಾವಿಕ ಪ್ರಸಾರ ಪ್ರಾಧಿಕಾರ ಹಾಗೂ ಪ್ರಸಾರ ಭಾರತಿ ಪರಸ್ಪರ ತಿಕ್ಕಾಟಕ್ಕಿಳಿಯದೆ ಸಾರ್ವಜನಿಕ ಪ್ರಸಾರ ವ್ಯವಸ್ಥೆಯೊಂದನ್ನು ಸ್ಥಾಪಿಸುವುದರ ಮುಖ್ಯ ಉದ್ದೇಶವಾಗ ಬೇಕು. ಇದೇ ಸಂದರ್ಭದಲ್ಲಿ ಪ್ರಸಾರ ಭಾರತಿ ಶಾಸನದ ಕೆಲವು ಕೊರತೆಗಳನ್ನು ನಿವಾರಿಸಲು, ಅದನ್ನು ತಿದ್ದುಪಡಿ ಮಾಡಿ ಅದರ ಸ್ವಾಯತ್ತ ಸ್ವರೂಪವನ್ನು ಬಲ ಪಡಿಸ ಬೇಕು ಎಂದು ಪ್ರಕಾಶ್ ಕಾರಟ್ ಸಲಹೆ ಮಾಡಿದ್ದಾರೆ.

ಪ್ರಸಾರ ಭಾರತಿಯಲ್ಲಿ ಭಾರತೀಯ ಪ್ರಸಾರ ಸೇವೆಯ ಅಧಿಕಾರಿಗಳನ್ನು ಡೆಪ್ಯು ಟೇಷನ್ ಮೇಲೆ ಕಳಿಸುವುದು ಬುದ್ಧಿವಂತಿಕೆ ಯಲ್ಲ. ಅದೇ ರೀತಿ 'ಪ್ರಸಾರ ಭಾರತಿ' ಯಲ್ಲಿನ ಇನ್ನೊಂದು ಕೊರತೆ ಯೇನೆಂದರೆ ಭಾರತ ಒಕ್ಕೂಟ ಸ್ವರೂಪವನ್ನು ಅದು ಗುರುತಿಸದೇ ಇರುವುದು. ಪ್ರಾದೇಶಿಕ ಭಾಷೆಗಳೆಂದು ಅದು ಹೇಳುವ ರಾಷ್ಟ್ರೀಯ ಭಾಷೆಗಳಲ್ಲಿನ ಕಾರ್ಯಕ್ರಮಗಳಿಗೆ ಅಗತ್ಯ ಮಹತ್ವ ನೀಡಬೇಕು ಎಂದು ಪ್ರಕಾಶ್ ಕಾರಟ್ ಸೂಚಿಸುತ್ತಾರೆ. ಇದಕ್ಕಾಗಿ ಪ್ರಸಾರ ಭಾರತಿಯ ಪ್ರಾದೇಶಿಕ ಕೇಂದ್ರಗಳ ನಿರ್ವಹಣೆಯ ಉಸ್ತುವಾರಿಗೆ ರಾಜ್ಯಮಟ್ಟದ ಸ್ವಾಯತ್ತ ಸಂಸ್ಥೆಗಳನ್ನು ರಚಿಸಬಹುದು. ಇವು ಈ ಸ್ವಾಯತ್ತ ಪ್ರಸಾರ ನಿಗಮದ ಕಾರ್ಯ ನಿರ್ವಹಣೆಯಲ್ಲಿ ರಾಜ್ಯ ಸರಕಾರಗಳ ಹಸ್ತಕ್ಷೇಪವಾಗಬೇಕಿಲ್ಲ. ಪ್ರಸಾರ ಭಾರತಿ ಶಾಸನದಲ್ಲಿ ಸಂಸತ್ತಿಗೆ ನೀಡಿರುವ ಶಾಸನಬದ್ಧ ಪಾತ್ರವನ್ನು ರಾಜ್ಯ ವಿಧಾನಸಭೆಗಳಿಗೂ ನೀಡಬಹುದು ಎಂದು ಪ್ರಕಾಶ್ ಕಾರಟ್ ಸಲಹೆ ಮಾಡಿದ್ದಾರೆ.

ರೈತ ಸಂಘದ 60 ನೇ ವಾರ್ಷಿಕೋತ್ಸವ

ಬಿಜಾಪುರ : ರೈತ ಸಂಘದ ಸ್ವಾತಂತ್ರ್ಯ ಸ್ವರ್ಣ ಮಹೋತ್ಸವದ ಸಂದ ರ್ಭದಲ್ಲಿ ಅಖಿಲ ಭಾರತ ಕಿಸಾನ್ ಸಭಾದ 60 ನೇ ವಾರ್ಷಿಕೋತ್ಸವದ ಸಮಾರಂಭವನ್ನು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಏರ್ಪಡಿ ಸಿದ್ದವು.



ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಹಿಂದಿನ ಮುಖಂಡರಾದ ಕಾಂ. ಆರ್. ಹೆಚ್. ಕಲಾದಗಿ ಮಾಸ್ತರರು ಸ್ವಾತಂತ್ರ್ಯ ಪೂರ್ವದಲ್ಲಿ ಉಳುವವನೆ ಭೂಮಿಯ ಒಡೆಯ ಎಂಬ ಘೋಷಣೆ ಘೋಷಣೆಯಾಗಿ ಉಳಿದಿದ್ದು ಅದು ಜಾರಿಗೊಳ್ಳಬೇಕಾದರೆ ಅಖಿಲ ಭಾರತ ಕಿಸಾನ್ ಸಭಾವು ಸ್ವಾತಂತ್ರ್ಯ ಪೂರ್ವ ದಲ್ಲಿನ ಹೋರಾಟವನ್ನು ಮುಂದುವರಿ ಸಬೇಕಾಗಿದೆ ಎಂದರು.



ಕಾಂ|| ಎನ್.ಕೆ. ಅವರು ಭೂಗತರಾಗಿದ್ದಾಗ ಈ ರೀತಿ ಮಾರುವೇಷದಲ್ಲಿ ಚಟುವಟಿಕೆ ನಡೆಸುತ್ತಿದ್ದರು. ಸಮಾರಂಭದಲ್ಲಿ ಇದನ್ನು ನೆನಪಿಸಿಕೊಂಡ ಸಂದರ್ಭ .

ಕಿಸಾನ್ ಸಭಾ ಮತ್ತು ಪ್ರಾಂತ ರೈತ ಸಂಘವನ್ನು ಬಿಜಾಪುರ ಜಿಲ್ಲೆಯಲ್ಲಿ ಕಟ್ಟಿ ಬೆಳೆಸಿ, ರೈತ ಸಂಘಗಳ ಸಮಸ್ಯೆಗಳ ವಿರುದ್ಧ ಹೋರಾಡಿದ ಹಿರಿಯ ಸಂಗಾ ತಿಗಳಾದ ಎನ್.ಕೆ.ಉಪಾಧ್ಯಾಯ, ಭೂಪಾಳ ನಾಂದ್ರೇಕರ, ಭೀಮರಾಯ ಬಂಡೆಪ್ಪ ಹಡಗಲಿ, ಶಿವಪ್ಪ ಗೌಡ ಬಿರಾ ದಾರ, ಸಿದ್ದಪ್ಪ ನರಸಪ್ಪ ಕುರ್ಮಗಿ ಮತ್ತು ಫಿರೋಜ್ ಮಂಗಸೂಳಿ ಇವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯ್ತು. ಸನ್ಮಾನಿತರ ತಮ್ಮ ಹಿಂದಿನ ಹೋರಾ ಟದ ನೆನಪುಗಳನ್ನು ನೆನಪಿಸಿಕೊಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ರೈತ ಸಂಘದ ಭೀಮಶಿ ಕಲಾದಗಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ. ನ ಎನ್.ಎಲ್. ನದಾಫ್ ಕಾರ್ಮಿಕ ಮುಖಂಡರಾದ ವಿ.ಎಂ.ಸೊನ್ನದ ಕಮ್ಯುನಿಸ್ಟ್ ಪಕ್ಷದ ಪ್ರಕಾಶ್ ಹಿಟ್ನಾಳ್ಳಿ, ಡಿ.ಎಂ. ಖಲಾಸಿ, ರೈತ ಸಂಘದ ಚಂದ್ರಶೇಖರ ಜಮನಾಳ, ಜನವಾದಿ ಮಹಿಳಾ ಸಂಘಟನೆಯ ಕಾಂ. ಸುರೇಖಾ ಭಾಗವಹಿಸಿದ್ದರು.

ಪದಬಂಧ 2 ರ ಉತ್ತರ

-ಭೀಷ್ಮ

ಸ	ಪ್ತ	ರ್	ಹ	ಶ್ರ	■	ಸ	ಮು	ದಾ	ಯ
ಹ	■	■	ವ	■	■	■	■	■	■
ಮ	ಲೆ	ಗ	ಳ	ಲ್ಲಿ	ಮ	ದು	ಮ	ಗ	ಳು
ತ	■	ಣ	■	■	ಹಾ	■	■	ರಂ	■
■	■	ಶ	■	■	ಚಿ	ತ್ರ	■	ಹ	■
■	■	ಕ್ತಿ	■	■	ತ್ರ	■	■	ವಾ	■
■	ರಂ	■	■	■	■	■	ಮಾ	ವಿ	ಸಿ
■	ಗಾ	ಳಿ	ಗೋ	ಪು	ರ	■	■	■	ರಂ
■	ಯ	■	ಮಾ	ರೀ	ಚ	ನ	ಬಂ	ಧು	ಜ
ಬಾ	ಣ	■	ಳ	ಕ	ನ	ಕ	ದ	ಸ	ನ



ಸ್ವಾತಂತ್ರ್ಯ ಸಂರಕ್ಷಣಾ ಜಾಥಾ


ದಕ್ಷಿಣ ಕನ್ನಡ: ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಸಂಘಟನೆಗಳು ಜಂಟಿಯಾಗಿ ಜಿಲ್ಲೆಯಾದ್ಯಂತ ಸಂಘಟಿಸಿದ ಸ್ವಾತಂತ್ರ್ಯ ಸಂರಕ್ಷಣಾ ಜಾಥಾ ಅರ್ಥಪೂರ್ಣವಾಗಿ ಆಚರಿಸಲ್ಪಟ್ಟಿತು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಸಹಸ್ರಾರು ಮಂದಿ ವಿದ್ಯಾರ್ಥಿ-ಯುವಜನ, ಕಾರ್ಮಿಕರ ತ್ಯಾಗ ಬಲಿದಾನದ ಆಶಯಗಳನ್ನು ಮೆಲುಕು ಹಾಕಿ ಮುಂದಿನ ಗುರಿಯತ್ತ ದಿಟ್ಟಹೆಜ್ಜೆ ಇಡಲು ಹೊಸ ಕಣ್ನೋಟ ಹಾಕಿಕೊಟ್ಟ ಕಾರ್ಯಕ್ರಮವಿದು.

ಆಗಸ್ಟ್ 12 ರಂದು ಕುಂದಾಪುರದಲ್ಲಿ ಉದ್ಘಾಟನೆಗೊಂಡು ನಿರಂತರ ನಾಲ್ಕು ದಿನಗಳ ಕಾಲ ಜಿಲ್ಲಾದ್ಯಂತ ಸಂಚರಿಸಿ ಉಳ್ಳಾಲದಲ್ಲಿ ಸಮಾವೇಶಗೊಂಡಿತು. ಜಿಲ್ಲೆಯ ಜನರ ಮನ ಮುಟ್ಟುವ ಕಾರ್ಯಕ್ರಮ ಇದಾಗಿತ್ತು.

ಚಂಡೆ, ತಮಟೆ, ತಾಳಗಳ ಧ್ವನಿಗಳೊಂದಿಗೆ 15 ಯುವಕರ ತಂಡವೊಂದು ಪ್ರತಿಯೊಂದು ಗ್ರಾಮದಲ್ಲಿಯೂ ಸ್ವಾತಂತ್ರ್ಯ ಚಳುವಳಿಯ ಇತಿಹಾಸ ಬಿಂಬಿಸುವ ಹಾಡುಗಳನ್ನು ಹಾಡುತ್ತಾ ಜನ ಮನದಲ್ಲಿ ನೆಲೆಗೊಂಡಿತು. ಕ್ರಾಂತಿಗೀತೆ, ಬೀದಿ ನಾಟಕ ಹಾಗೂ ಜನಪರ ಪುಸ್ತಕ ಮಾರಾಟಗಳ ಮೂಲಕ ಜಿಲ್ಲೆಯ 10,000 ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮ ವೀಕ್ಷಿಸಿದರು.

ಜಾಥಾ ಹಾಯ್ದು ಹೋದಂತಹ ಕಡೆಗಳಲ್ಲೆಲ್ಲಾ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಕೊನೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಮಾತನಾಡಿದರು. ಡಿವೈಎಫ್‌ಐನ ವಸಂತ ಆಚಾರಿ, ಗಂಗಾಧರ ಉಳ್ಳಾಲ, ಜೆ.ಎಂ.ಎಸ್. ನ ಮಂಜುಳ ಸುಕುಮಾರ್ ಮುಂತಾದವರು ಭಾಗವಹಿಸಿದ್ದರು.

ವಾರದ ವ್ಯಂಗ್ಯ ಚಿತ್ರ



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು